ವೈದೇಹಿಯವರ ಕಥಾ ಸಾಹಿತ್ಯ

ಈ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್.(ಕನ್ನಡ)

ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧಕರು

ಸುಜಾತ. ಬಿ.

ನೋಂದಣಿ ಸಂಖ್ಯೆ : ಕೆಆರ್‌ಎಸ್‌ಎಂಕೆಎಸ್‌00459

ಮಾರ್ಗದರ್ಶಕರು

ಡಾ॥ ಪಿ.ಬೆಟ್ಟೇಗೌಡ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಹಂಪಿ ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

2009–10

ವೈದೇಹಿಯವರ ಕಥಾ ಸಾಹಿತ್ಯ

ಈ ನಿಬಂಧವನ್ನು ಹಂಪಿ ಕನ್ನಡ ವಿಶ್ವವಿದ್ಯಾನಿಲಯಕ್ಕೆ ಎಂ.ಫಿಲ್.(ಕನ್ನಡ)

ಪದವಿಗಾಗಿ ಅರ್ಪಿಸಲಾಗಿದೆ.

ಸಂಶೋಧಕರು

ಸುಜಾತ. ಬಿ.

ನೋಂದಣಿ ಸಂಖ್ಯೆ : ಕೆಆರ್‌ಎಸ್‌ಎಂಕೆಎಸ್00459

ಮಾರ್ಗದರ್ಶಕರು

ಡಾ॥ ಪಿ.ಬೆಟ್ಟೇಗೌಡ

ಕರ್ನಾಟಕ ಸಂಘ (ರಿ), ಮಂಡ್ಯ

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ

(ಹಂಪಿ ಕನ್ನಡ ವಿ.ವಿ.ಯಿಂದ ಮಾನ್ಯತೆ ಪಡೆದಿದೆ)

ಮಂಡ್ಯ

2009–10

ಘೋಷಣಾ ಪತ್ರ

"ವೈದೇಹಿಯವರ ಕಥಾ ಸಾಹಿತ್ಯ" ಎಂಬ ವಿಷಯದ ಮೇಲೆ ಈ ನಿಬಂಧವನ್ನು **ಡಾ॥ಪಿ.ಬೆಟ್ಟೇಗೌಡ**ರವರ ಮಾರ್ಗದರ್ಶನದಲ್ಲಿ ನನ್ನ ಸಂಶೋಧನೆಯ ಫಲವಾಗಿ ರಚಿಸಿದ್ದು, ಕನ್ನಡ ವಿಶ್ವವಿದ್ಯಾನಿಲಯದ ಎಂ.ಫಿಲ್ (ಕನ್ನಡ) ಪದವಿಗೆ ಅರ್ಪಿಸುತ್ತಿದ್ದೇನೆ.

ಈ ನಿಬಂಧವನ್ನು ಹಿಂದಿನ ವರ್ಷಗಳಲ್ಲಿ ಯಾರೂ, ಯಾವುದೇ ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿಲ್ಲವೆಂದು ನಾನು ಈ ಸಂದರ್ಭದಲ್ಲಿ ಪ್ರಮಾಣೀಕರಿಸುತ್ತೇನೆ.

ಸ್ಥಳ : ಮಂಡ್ಯ

ದಿನಾಂಕ : 24/08/2010

Sujatha

ಸಂಶೋಧಕರ ಸಹಿ

ಸುಜಾತ. ಬಿ.

ಎಂ.ಫಿಲ್ ವಿದ್ಯಾರ್ಥಿನಿ,

ಎಂ.ಎಲ್.ಶ್ರೀಕಂಠೇಶಗೌಡ ಸಂಶೋಧನಾ ಕೇಂದ್ರ,

ಕರ್ನಾಟಕ ಸಂಘ (ರಿ), ಮಂಡ್ಯ.

ದೃಢೀಕರಣ ಪತ್ರ

"ವೈದೇಹಿಯವರ ಕಥಾಸಾಹಿತ್ಯ" ಎಂಬ ವಿಷಯದ ಮೇಲೆ ಈ ನಿಬಂಧವನ್ನು ಕನ್ನಡ ವಿಶ್ವವಿಧ್ಯಾನಿಲಯದ ಎಂ.ಫಿಲ್ (ಕನ್ನಡ) ಪದವಿಗೆ ಸಂಶೋಧಕ ವಿದ್ಯಾರ್ಥಿಯಾದ **ಸುಜಾತ.ಬಿ.**ರವರು ನನ್ನ ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆಯಲ್ಲಿ ಬರೆದು ಒಪ್ಪಿಸುತ್ತಿದ್ದಾರೆಂದು ಹಾಗೂ ಈ ವಿಷಯದ ಬಗ್ಗೆ ಬೇರೆ ಯಾರಿಗೂ ನಾನು ಮಾರ್ಗದರ್ಶನ ಹಾಗೂ ಮೇಲ್ವಿಚಾರಣೆ ಮಾಡಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಸ್ಥಳ : ಮಂಡ್ಯ

ದಿನಾಂಕ : ೨೪/೮/೨೦೧೦

ಮಾರ್ಗದರ್ಶಕರ ಸಹಿ

ಡಾ॥ ಪಿ.ಬೆಟ್ಟೇಗೌಡ,

ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ,

ಸರ್ಕಾರಿ ಮಹಿಳಾ ಕಾಲೇಜು,

ವಿಜಯನಗರ, ಮೈಸೂರು.

ಪರಿವಿಡಿ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ

ಯಾವುದೇ ಒಂದು ಸಂಸ್ಕೃತಿಯ ಶ್ರೇಷ್ಠತೆಯನ್ನು ಅಳೆಯುವ ಸಂದರ್ಭದಲ್ಲಿ ಅಲ್ಲಿನ ಸ್ತ್ರೀಯರ ಸ್ಥಾನಮಾನ, ಆ ಸಂಸ್ಕೃತಿಯ ವಿಕಾಸಕ್ಕೆ ಅವರ ಕೊಡುಗೆಯನ್ನು ಮುಖ್ಯ ಮಾಪನವನ್ನಾಗಿ ಪರಿಗಣಿಸಲಾಗುತ್ತದೆ. ಯಾವ ಸಮಾಜದಲ್ಲಿ ಸ್ತ್ರೀಯರಿಗೆ ಉನ್ನತ ಸ್ಥಾನವಿದೆಯೋ ಆ ಸಮಾಜದ ಸಂಸ್ಕೃತಿ ಉತ್ತಮ ಮಟ್ಟದ್ದಾಗಿರುತ್ತದೆ ಎಂಬ ನಂಬಿಕೆ ಇದೆ. ಇದಕ್ಕೆ ನಮ್ಮ ಸಂಸ್ಕೃತಿ ಹೊರತಲ್ಲ. ಹೆಣ್ಣನ್ನು ಕಾಲದಿಂದ ಕಾಲಕ್ಕೆ ಹಲವಾರು ದೃಷ್ಟಿಕೋನಗಳಿಂದ ಪುರುಷ ಸಮಾಜ ಕಂಡಿರುವುದನ್ನು ಗಮನಿಸಬಹುದು. ವೇದಗಳ ಕಾಲದಲ್ಲಿ ಸ್ತ್ರೀ ಪುರುಷ ಸಮಾನತೆ ಇತ್ತು. ಪುರುಷನ ಎಲ್ಲ ಧಾರ್ಮಿಕ ಕಾರ್ಯಗಳಲ್ಲಿ ಸ್ತ್ರೀ ಸಹಧರ್ಮಿಣಿಯಾಗಿದ್ದಳು. ಸ್ತ್ರೀಯರಿಗೆ ಜ್ಞಾನವನ್ನು ಗಳಿಸುವ ಮತ್ತು ಅಭಿವ್ಯಕ್ತಿಸುವ ಸ್ವಾತಂತ್ರ್ಯ ಇತ್ತು.

ಮುಂದೆ ಸ್ಮೃತಿಗಳ ಕಾಲದಲ್ಲಿ "ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ"[1] ಎಂದು ಸ್ತ್ರೀಯನ್ನು ಮೂಲೆಗುಂಪುಮಾಡಿ ಪುರುಷನ ಆಸ್ತಿಯಂತೆ ಪರಿಗಣಿಸಲಾಯಿತು. ಜೈನ ಧರ್ಮದ ಕಾಲದಲ್ಲಂತೂ ಸ್ತ್ರೀಗೆ ಮೋಕ್ಷವೇ ಇಲ್ಲವೆಂಬ ನಂಬಿಕೆ ಇತ್ತು. ಬುದ್ಧನೂ ಪ್ರಾರಂಭದಲ್ಲಿ ಸ್ತ್ರೀಯರಿಗೆ ದೀಕ್ಷೆ ನೀಡಲು ನಿರಾಕರಿಸಿದರೂ ಅನಂತರ ನೀಡಿದನು. ಮುಸ್ಲೀಮರ ಆಗಮನದಿಂದ ಸ್ತ್ರೀಯರ ಪರಿಸ್ಥಿತಿ ತೀರ ಬಿಗಡಾಯಿಸಿತು. ಅವಳನ್ನು ಭೋಗವಸ್ತುವಿನಂತೆ ನೋಡುವ ಪರಿಪಾಠ ಬಂದಿತು. ಅವನತಿಯತ್ತ ಸಾಗಿದ್ದ ಸ್ತ್ರೀಯರ ಪರಿಸ್ಥಿತಿ ಸುಧಾರಿಸಿದ್ದು ಮಧ್ಯಕಾಲಿನ ಸಮಾಜದಲ್ಲಿ. ಇದಕ್ಕೆ ಭಕ್ತಿ ಚಳುವಳಿಯ ಪ್ರೇರಣೆ ಕಾರಣ ಎನ್ನಬಹುದು. ಅನಂತರ ಬ್ರಿಟೀಷರ ಆಗಮನದಿಂದ. ನಮ್ಮ ಸಮಾಜ ಸುಧಾರಕರ ಪ್ರಯತ್ನದಿಂದ ಎಲ್ಲ ಕ್ಷೇತ್ರಗಳಲ್ಲೂ ಸ್ತ್ರೀಯರಿಗೆ ಸಮಾನ ಅವಕಾಶಗಳು ಲಭಿಸಿ, ಆಕೆಯ ವ್ಯಕ್ತಿತ್ವ ವಿಕಾಸಕ್ಕೆ ಕಾರಣವಾದುದಲ್ಲದೆ ಆಧುನಿಕ ಸ್ತ್ರೀಯ ಉಗಮಕ್ಕೆ ಕಾರಣವಾಯಿತು. ಆದರೆ ಅವರ ಸಂಖ್ಯೆ ಬೆರಳೆಣಿಕೆಯಷ್ಟು ಮಾತ್ರ ಕೇವಲ ಪ್ರತಿಷ್ಠಿತ ಮನೆತನಗಳ ಸ್ತ್ರೀಯರಿಗೆ ಮಾತ್ರ ಈ ಅವಕಾಶವಿತ್ತು.

ಸಾಹಿತ್ಯವು ಸಮಾಜದ ಪ್ರತಿಬಿಂಬ. ಸಮಾಜದಿಂದ ಹೊರತಾಗಿ ಸಾಹಿತ್ಯ ಇರಲು ಸಾಧ್ಯವಿಲ್ಲ. ಸಮಾಜ ಹೇಗಿರುತ್ತದೋ ಹಾಗೇ ಸಾಹಿತ್ಯವು ಇರುತ್ತದೆ. ಸ್ತ್ರೀಯರೂ ಪುರುಷರಂತೆ ಸಮಾಜದ ಒಂದು ಭಾಗ. ಆದ್ದರಿಂದ ಸಾಹಿತ್ಯದಲ್ಲೂ ಸ್ತ್ರೀ ಚಿತ್ರಣವನ್ನು ಕಾಣುವುದರ ಜೊತೆಗೆ ಬೆರಳೆಣಿಕೆಯಷ್ಟಾದರೂ ಸ್ತ್ರೀಯರು ಸಾಹಿತ್ಯ ರಚನೆಯಲ್ಲಿ ತೊಡಗಿರುವುದನ್ನು ಕಾಣಬಹುದು.

---

[1] ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು.ಸಂ.169, ಕರ್ನಾಟಕ ಸಾಹಿತ್ಯ ಅಕಾಡೆಮಿ –2006.

ನಮ್ಮದು ಪುರುಷ ಪ್ರಧಾನ ಸಮಾಜವಾದುದ್ದರಿಂದ ಸಾಹಿತ್ಯ ರಚನೆಯಲ್ಲೂ ಅವರದೇ ಪ್ರಾಬಲ್ಯ. ಇದಕ್ಕೆ ಕನ್ನಡ ಸಾಹಿತ್ಯವೂ ಹೊರತಲ್ಲ. ಸ್ತ್ರೀಯರಿಗೆ ಶಿಕ್ಷಣದ ಅವಕಾಶವೇ ಇಲ್ಲವೆಂದ ಮೇಲೆ ಸಾಹಿತ್ಯ ರಚನೆಯಂತೂ ದೂರದ ಮಾತಾಗಿತ್ತು. ಅವರೇನಿದ್ದರೂ ಪುರುಷನಿಗೆ ಪೂರಕವಾದ ಪಾತ್ರಗಳನ್ನು ನಿರ್ವಹಿಸಿಕೊಂಡು ಮನೆಯಲ್ಲಿರಬೇಕಿತ್ತು.

12ನೇ ಶತಮಾನವು ಅನೇಕ ಕ್ಷೇತ್ರಗಳಲ್ಲಿ ಬದಲಾವಣೆಯನ್ನು ತಂದ ಕ್ರಾಂತಿಕಾರಕ ಯುಗವಾಗಿದೆ. ಈ ಸಂದರ್ಭದಲ್ಲಿ ರಚನೆಯಾದ ವಚನ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ನೆಲೆಗಳು ಕಾಣಿಸಿಕೊಂಡು ಸ್ತ್ರೀಯರು ಸಾಹಿತ್ಯ ರಚನೆಯಲ್ಲಿ ತೊಡಗಿದ್ದು ವಿಶೇಷ. ಸ್ತ್ರೀ ಸಮಾನತೆಯನ್ನು ಪ್ರತಿಪಾದಿಸಿದ ವಚನಕಾರರು ಗಂಡು ಹೆಣ್ಣಿನಲ್ಲಿ ಕೇವಲ ಜೈವಿಕ ಭಿನ್ನತೆ ಇದೆಯೇ ಹೊರತು ಯಾರೂ ಮೇಲಲ್ಲ, ಕೀಳಲ್ಲ ಎಂದು ಪ್ರತಿಪಾದಿಸಿದರು.

ಮೊಲೆಮುಡಿ ಬಂದರೆ ಹೆಣ್ಣೆಂಬರು

ಗಡ್ಡಮೀಸೆ ಬಂದರೆ ಗಂಡೆಂಬರು

ನಡುವೆ ಸುಳಿವಾತ್ಮನು ಗಂಡೂ ಅಲ್ಲ ಹೆಣ್ಣೂ ಅಲ್ಲ ಕಾಣಾ ರಾಮಾನಾಥ.[1]

ಎಂಬ ಜೇಡರ ದಾಸಿಮಯ್ಯನ ವಚನದಲ್ಲಿ ಇದನ್ನು ಕಾಣಬಹುದು. ಇದರ ಪರಿಣಾಮವಾಗಿ ಅಕ್ಕಮಹಾದೇವಿ, ಮುಕ್ತಾಯಕ್ಕ, ಗಂಗಾಬಿಕೆ, ಆಯ್ದಕ್ಕಿ ಲಕ್ಕಮ್ಮ, ಅಕ್ಕ ನಾಗಮ್ಮ, ಸೂಳೆ ಸುಂಕವ್ವೆ, ಸುಗ್ಗವ್ವೆಯಂತಹ ಅನೇಕ ಸ್ತ್ರೀಯರು ಆಧ್ಯಾತ್ಮಿಕ ಮತ್ತು ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಸಾಧ್ಯವಾಯಿತು. ದಾಸ ವಚನ ಸಾಹಿತ್ಯದ ನಂತರ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಸಾಹಿತ್ಯದಲ್ಲಿ ತೊಡಗಿಸಿಕೊಂಡಿದ್ದೇ ಇಲ್ಲ, ಕೇವಲ ಹೆಳವನಕಟ್ಟೆ ಗಿರಿಯಮ್ಮ, ಭೀಮವ್ವ, ಚೆಲುವಾಂಬೆ ಸಂಚಿ ಹೊನ್ನಮ್ಮನಂತಹ ಬೆರಳಿಕೆಯ ಸ್ತ್ರೀಯರು ಸಾಹಿತ್ಯ ರಚಿಸಿದ್ದನ್ನು ಕಾಣಬಹುದು. ಅನಂತರ ಆಧುನಿಕ ಯುಗದಲ್ಲಿ ಸ್ವಾತಂತ್ರ್ಯ ಚಳುವಳಿಯಲ್ಲಿ ಸ್ತ್ರೀಯರನ್ನು ತೊಡಗಿಸಿಕೊಳ್ಳುವ ಸಲುವಾಗಿ ಅವರಿಗೆ ಪುರುಷರಿಗೆ ಸಮಾನವಾಗಿ ಅವಕಾಶ ಕೊಟ್ಟದ್ದನ್ನು ಗಮನಿಸಬಹುದು. ಅನಂತರ 20ನೇ ಶತಮಾನದಲ್ಲಿ ಸ್ತ್ರೀಯರು ಶಿಕ್ಷಣ ಪಡೆಯುವುದರ ಜೊತೆಗೆ ಸಾಹಿತ್ಯರಚನೆಯಲ್ಲೂ ಗಣನೀಯ ಸಂಖ್ಯೆಯಲ್ಲಿ ತೊಡಗಿಸಿಕೊಂಡರು. ಆರಂಭದಲ್ಲಿ ನಂಜನಗೂಡು ತಿರುಮಲಾಂಬ, ಆರ್.ಕಲ್ಯಾಣಮ್ಮ, ತಿರುಮಲೆ ರಾಜಮ್ಮ, ಶ್ಯಾಮಲಾದೇವಿ, ಗೌರಮ್ಮ, ಹೆಚ್.ವಿ.ಸಾವಿತ್ರಮ್ಮ,

[1] ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾಪರ ಕಾಳಜಿಗಳು. ಪು.ಸಂ.20, ಕರ್ನಾಟಕ ಸಾಹಿತ್ಯ ಅಕಾಡೆಮಿ–2007.

ಎಂ.ಕೆ.ಇಂದಿರ, ವಾಣಿ, ತ್ರಿವೇಣಿ ಹೀಗೆ ಅನೇಕ ಲೇಖಕಿಯರನ್ನು ಕಾಣುತ್ತೇವೆ. ಆದರೂ ಲೇಖಕಿಯರ ಸಂಖ್ಯೆ ವಿರಳವೆಂದೇ ಹೇಳಬಹುದು. ಇವರ ಸಾಲಿನಲ್ಲಿ ಸೇರುವಂತಹ ಶ್ರೇಷ್ಠ ಲೇಖಕಿ ಶ್ರೀಮತಿ ವೈದೇಹಿಯವರು.

ವೈದೇಹಿ ಎಂಬ ಕಾವ್ಯನಾಮದ ಶ್ರೀಮತಿ ಜಾನಕಿ ಶ್ರೀನಿವಸಮೂರ್ತಿ ಸಮಕಾಲಿನ ಸಾಹಿತ್ಯದ ಅಗ್ರಗಣ್ಯ ಲೇಖಕಿ ಸುಮಾರು ಮೂರು ದಶಕಗಳಿಂದ ಸಾಹಿತ್ಯದ ರಚನೆಯಲ್ಲಿ ತೊಡಗಿಸಿಕೊಂಡಿರುವ ವೈದೇಹಿಯವರು ಇಂದು ಬೆಳೆದಿರುವ ಪರಿ ಅಗಾಧವಾದುದು. ಕೃತಿಯಿಂದ ಕೃತಿಗೆ ಬೆಳೆಯುತ್ತ ಸಾಗಿರುವ ವೈದೇಹಿಯವರು ಕ್ರಮಿಸಿರುವ ಹಾದಿ ದೊಡ್ಡದು. ಅವರದು ಕನ್ನಡ ಸಾಹಿತ್ಯದೊಳಗೆ ಎದ್ದು ಕಾಣುವ ಹೆಸರು.

ಸೂಕ್ಷ್ಮ ಸಂವೇದನಾಶೀಲ ಲೇಖಕಿಯಾದ ವೈದೇಹಿಯವರು ತಮ್ಮ ಸುತ್ತಲಿನ ಸಮಾಜಕ್ಕೆ ಸ್ಪಂದಿಸಿದ ರೀತಿ ಅಪೂರ್ವವಾದುದು. ಜೀವನವನ್ನು, ತನ್ನ ಸುತ್ತಲಿನ ಬದುಕನ್ನು ಬಹಳ ಸೂಕ್ಷ್ಮವಾಗಿ ಗಮನಿಸುವ ವೈದೇಹಿಯವರು ತಮ್ಮ ಬರವಣಿಗೆಯಲ್ಲೂ ಅದನ್ನೇ ಪ್ರತಿಬಿಂಬಿಸಿದ್ದಾರೆ. ಕಥೆಗಾರ್ತಿಯಾಗಿ ಬರವಣಿಗೆ ಪ್ರಾರಂಭಿಸಿದ ವೈದೇಹಿಯವರು ಸಾಹಿತ್ಯ ವಿವಿಧ ಪ್ರಕರಗಳಾದ ನಾಟಕ, ಪ್ರಬಂಧ, ಕವನ, ನೆನಪುಗಳ ಸಂಗ್ರಹ, ಕಾದಂಬರಿ, ಅನುವಾದ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದರೂ ಒಟ್ಟು ಬರವಣಿಗೆಯಲ್ಲಿ ಕಥಾ ಸಾಹಿತ್ಯವು ವಿಶಿಷ್ಠವಾಗಿ ಗಮನಸೆಳೆಯುತ್ತದೆ.

ಸಂಪ್ರದಾಯಸ್ಥ ತುಂಬು ಕುಟುಂಬದಲ್ಲಿ ಹುಟ್ಟಿ ಬೆಳೆದ ವೈದೇಹಿಯವರು ತಮ್ಮ ಸುತ್ತಲಿನ ವಿದ್ಯಮಾನಗಳನ್ನು ಸೂಕ್ಷ್ಮ ದೃಷ್ಟಿಯಿಂದ ಗ್ರಹಿಸಿ ತಮ್ಮ ಬರವಣಿಗೆಗೆ ಬೇಕಾದ ಮೂಲದ್ರವ್ಯವನ್ನು ಪಡೆದುಕೊಂಡ ರೀತಿ ವಿಶಿಷ್ಠವಾದುದು. ಮಹಿಳೆಯರು ಕಾಲೇಜು ವಿದ್ಯಾಭ್ಯಾಸಕ್ಕೆ ತೆರೆದುಕೊಳ್ಳುವುದೇ ಕಷ್ಟವಾಗಿದ್ದ ಕಾಲದಲ್ಲಿ ಬಿ.ಕಾಂ. ಪದವಿ ಪಡೆದ ವೈದೇಹಿಯವರು ಸಾಹಿತ್ಯ ರಚನೆಯಲ್ಲಿ ಮಹಿಳೆಯರ ತೊಡಗಿಸಿಕೊಳ್ಳುವಿಕೆ ವಿರಳವಾಗಿದ್ದ ಕಾಲದಲ್ಲಿ ಆ ಕೊರತೆಯನ್ನು ಯಶಸ್ವಿಯಾಗಿ ತುಂಬಿದವರು. 1955ರಿಂದ ಇಲ್ಲಿಯವರೆಗೆ ಸುಮಾರು 53ರಷ್ಟು ಕನ್ನಡ ಸಾಹಿತಿಗಳಿಗೆ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಬಂದಿದೆ. ಅವರಲ್ಲಿ ಕೇವಲ ಇಬ್ಬರು ಮಹಿಳಾ ಸಾಹಿತಿಗಳು ಈ ಪ್ರಶಸ್ತಿಗೆ ಭಾಜನರಾಗಿದ್ದಾರೆ ಎಂದರೆ ಶ್ರೇಷ್ಠ ಮಹಿಳಾ ಸಾಹಿತಿಗಳು ಎಷ್ಟು ವಿರಳ ಎಂಬುದು ಅರ್ಥವಾಗುತ್ತದೆ. ಕಾಲೇಜು ದಿನಗಳಲ್ಲಿ ಸಾಹಿತ್ಯಾಸಕ್ತಿ ಹೊಂದಿದ್ದ ವೈದೇಹಿಯವರಿಗೆ ಬರವಣಿಗೆ ಬದುಕಿನ ವಾಸ್ತವಿಕತೆಯನ್ನು ಅರಿಯಲು, ಹೊರಹಾಕಲು ಒಂದು ಸಾಧನವಾಯಿತು. ಅವರು ಸಾಹಿತ್ಯ ಸಾಮಾಜಿಕ ಬದಲಾವಣೆಯ ಸಾಧನ, ಬದುಕಿನ ಕನ್ನಡಿ ಎಂದು ನಂಬಿದವರು.

ನಮಗೆ ಸ್ವಾತಂತ್ರ್ಯ ಬರುವ ಮೊದಲೇ ಜನಿಸಿದ ವೈದೇಹಿಯವರು ಸಾಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಸಾಂಪ್ರದಾಯಿಕ ಆವರಣದಲ್ಲಿ ಬೆಳೆದವರು. ಬಹಳ ಹತ್ತಿರದಿಂದ ಸಾಂಪ್ರಾದಾಯಿಕ ಆಚರಣೆಗಳನ್ನು ಗಮನಿಸಿದ್ದ ವೈದೇಹಿಯವರು ಈ ಸಾಂಪ್ರದಾಯಿಕ ಆಚರಣೆಗಳಿಂದ ಹೆಚ್ಚು ಭಾದಿತರಾಗಿರುವುದು ಮಹಿಳೆಯರೇ ಎಂಬುದನ್ನು ಮನಗಂಡಿದ್ದರು. ಮುಟ್ಟು, ಬಾಣಂತನದ ಸಂದರ್ಭದಲ್ಲಿ ಮಹಿಳೆಯರನ್ನು ನಡೆಸಿಕೊಳ್ಳುತ್ತಿದ್ದ ರೀತಿ ಎಲ್ಲಕ್ಕಿಂತ ಹೆಚ್ಚಾಗಿ ವಿಧವೆಯರು ನಡೆಸುತ್ತಿದ್ದ ಧಾರುಣ ಬದುಕು ಅವರ ಸೂಕ್ಷ್ಮ ಮನಸ್ಸಿನ ಮೇಲೆ ಬಹಳ ಪರಿಣಾಮ ಬೀರಿತ್ತು. ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರು ಕುರ್ಚಿ ಮೇಲೆ ಕುಳಿತುಕೊಳ್ಳುವುದು, ಮೆಟ್ಟು ಧರಿಸುವುದು ತಪ್ಪು ಎನಿಸುತ್ತಿದ್ದ ಕಾಲ ಹೆಣ್ಣು ಮತ್ತು ಗಂಡಿನ ನಡುವಿನ ತಾರತಮ್ಯವನ್ನು ಬಾಲ್ಯದಿಂದಲೇ ಗಮನಿಸಿದವರು. ಇವೆಲ್ಲ ಅವರನ್ನು ಬರೆಯಲು ಪ್ರೇರೇಪಿಸಿದವು. ತಮ್ಮ ಜೀವನದಲ್ಲಿ ಕಂಡ ವ್ಯಕ್ತಿಗಳನ್ನೇ ತಮ್ಮ ಕಥೆಗಳ ಪಾತ್ರಗಳಾಗಿ ತಂದುದು ವೈದೇಹಿಯವರ ವಿಶೇಷತೆ. ಅತಿಯಾದ ಕಲ್ಪನೆ, ವರ್ಣನೆಗೆ ಅವಕಾಶವಿಲ್ಲದ ವಾಸ್ತವಿಕ ಚಿತ್ರಣವನ್ನು, ಸಾಂಪ್ರದಾಯಿಕ ವಿಚಾರಗಳ ವಿಶ್ಲೇಷಣೆಯನ್ನು ಅವರ ಸಾಹಿತ್ಯದಲ್ಲಿ ಕಾಣಬಹುದು. ಜೀವನಾನುಭವವೇ ಅವರ ಸಾಹಿತ್ಯದ ಮೂಲದ್ರವ್ಯ.

ಕಥೆಗಾರ್ತಿಯಾಗಿ ವೈದೇಹಿಯವರ ಕೊಡುಗೆ ಅಪಾರ. 'ಹೆಣ್ಣು' ಅವರ ಎಲ್ಲ ಕಥೆಗಳ ಕೇಂದ್ರಬಿಂದು, ಪ್ರಧಾನ ಆಶಯ. ಹೆಣ್ಣಿನ ಮನಸ್ಸಿನ ಒಳತೋಟಿಗಳು, ಭಾವುಕ ಸಂಘರ್ಷಗಳು, ಅಸಹಾಯಕತೆಗಳು ಹಾಗೂ ಸ್ತ್ರೀ ಮನಸ್ಸಿನ ಭಾವುಕ ಪ್ರಪಂಚದ ಸೂಕ್ಷ್ಮತೆಗಳು ಬಹಳ ಸೂಕ್ಷ್ಮವಾಗಿ ಪ್ರತಿಬಿಂಬಿಸಲ್ಪಟ್ಟಿವೆ. ಇಂತಹ ಸಂವೇದನಶೀಲ, ಗಂಭೀರ ಲೇಖಕಿಯ ಕಥಾಸಾಹಿತ್ಯವನ್ನು ಕುರಿತು ಅಧ್ಯಯನ ನಡೆಸುವ ಗುರುತರ ಜಬಾಬ್ದಾರಿ ನನ್ನ ಮೇಲಿದೆ. ಇಂತಹ ಒಂದು ಸದವಕಾಶ ದೂರೆತದ್ದು ನನ್ನ ಅದೃಷ್ಟವೂ ಹೌದು. ಇಂತಹ ದೊಡ್ಡ ಲೇಖಕಿಯ ಬಗ್ಗೆ ಈ ಮೊದಲೇ ಸಾಕಷ್ಟು ಅಧ್ಯಯನಗಳು ನಡೆದಿದ್ದರೂ, ನನ್ನದೇ ಆದ ದೃಷ್ಟಿಕೋನದಲ್ಲಿ ಅವರ ಕಥಾಸಾಹಿತ್ಯವನ್ನು ಅಧ್ಯಯನ ಮಾಡಿ ನನಗೆ ಕಂಡು ಬಂದ ಹೊಸ ಹೊಳಹುಗಳನ್ನು ಹೇಳುವ ಪ್ರಾಮಾಣಿಕ ಪ್ರಯತ್ನವನ್ನು ಈ ನಿಬಂಧದ ಮೂಲಕ ಮಾಡಿದ್ದು, ತನ್ನದೇ ಆದ ಮೌಲಿಕತೆಯನ್ನು ಹೊಂದಿದೆ ಎಂದು ಭರವಸೆ ನೀಡುತ್ತೇನೆ.

ವೈದೇಹಿಯವರ ಒಟ್ಟು ಕಥಾಸಾಹಿತ್ಯದಲ್ಲಿ ವೈದೇಹಿಯವರು ಹೆಣ್ಣನ್ನು ನೋಡುವ ದೃಷ್ಟಿಕೋನ. ತಾಯಿಯಾಗಿ, ಹೆಂಡತಿಯಾಗಿ, ಸಹೋದರಿಯಾಗಿ, ಗೆಳತಿಯಾಗಿ, ಅತ್ತೆಯಾಗಿ, ಸೊಸೆಯಾಗಿ ವಿವಿಧ ಪಾತ್ರಗಳನ್ನು ನಿರ್ವಹಿಸುವಾಗ ಹೆಣ್ಣಿನ ಸಂವೇದನೆ, ಆಕೆ ಬದುಕನ್ನು

ನೋಡುವ ರೀತಿ, ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಹೆಣ್ಣಿನ ಮೇಲೆ ನಡೆಯುವ ದೌರ್ಜನ್ಯ, ತನ್ನ ಮೇಲಿನ ದೌರ್ಜನ್ಯಕ್ಕೆ ಹೆಣ್ಣು ಪ್ರತಿಕ್ರಿಯಿಸುವ ರೀತಿ, ಆಕೆಯ ಪ್ರತಿಭಟನೆಯ ವಿಧಾನಗಳು, ಗಂಡು ಹೆಣ್ಣಿನ ನಡುವೆ ಬೀಡುಬಿಟ್ಟಿರುವ ಅಸಮಾನತೆ, ಪುರಾಣ ಕಥೆಗಳನ್ನು ಸ್ತ್ರೀ ದೃಷ್ಟಿಕೋನದಿಂದ ಪುನರ್ ಸೃಷ್ಟಿಸಿದ ರೀತಿಯನ್ನು ವಿಶ್ಲೇಷಿಸುವುದೇ ಈ ನಿಬಂಧದ ಉದ್ದೇಶವಾಗಿದೆ. ಅದಕ್ಕಾಗಿ ವೈದೇಹಿಯವರ ಕಥೆಗಳಲ್ಲಿ ಹೆಣ್ಣು, ವೈದೇಹಿಯವರ ಕಥೆಗಳಲ್ಲಿ ಹೆಣ್ಣಿನ ಪ್ರತಿಭಟನೆ, ವೈದೇಹಿಯವರ ಕಥೆಗಳಲ್ಲಿ ಅಸಮಾನತೆ ಎಂಬ ಅಧ್ಯಾಯಗಳಾಗಿ ಮಾಡಿಕೊಂಡು ಅಧ್ಯಯನ ಮಾಡಲಗಿದೆ. ಅಲ್ಲದೆ ಈ ಅಧ್ಯಯನದ ಮೂಲಕ ವೈದೇಹಿಯವರು ಸಮಕಾಲೀನ ಲೇಖಕಿಯರ ನಡುವೆ ಹೇಗೆ ಭಿನ್ನರಾಗಿ ನಿಲ್ಲುತ್ತಾರೆ ಎಂದು ದಾಖಲಿಸುವ ಉದ್ದೇಶ ನನ್ನದಾಗಿದೆ.

ವೈದೇಹಿಯವರ ಕಥಾಸಾಹಿತ್ಯ ಬಹಳ ವಿಶಾಲವಾದ ವ್ಯಾಪ್ತಿಯನ್ನು ಹೊಂದಿದ್ದು ಪ್ರಸ್ತುತ ಅಧ್ಯಯನದ ದೃಷ್ಟಿಯಿಂದ ಮಾಡಿಕೊಳ್ಳಲಾಗಿರುವ ಅಧ್ಯಾಯಗಳ ಅಧ್ಯಯನಕ್ಕೆ ಒಳಪಡುವ ಕಥೆಗಳನ್ನು ಮಾತ್ರ ಆಯ್ಕೆ ಮಾಡಿಕೊಂಡು, ಈ ಅಧ್ಯಯನದ ಮುಖ್ಯ ಶೀರ್ಷಿಕೆಯಡಿಯಲ್ಲಿ ಮಾಡಬಹುದಾದ ತಲಸ್ಪರ್ಶಿ ಅಧ್ಯಯನ ಮಾಡಲಾಗಿದೆ ಎಂದು ಹೇಳಬಹುದಾದರೂ, ಇದಕ್ಕಿಂತಲೂ ಆಳವಾದ, ಸವಿವರವಾದ ಒಂದು ಮಹಾಪ್ರಬಂಧ ರಚಿಸಬಹುದಾದ ವಿಷಯ ಇಲ್ಲಿ ಅಡಗಿದೆ. ಒಟ್ಟಾರೆ ಈ ಅಧ್ಯಯನವು ಪುಟಮಿತಿ ಮತ್ತು ಸಂದರ್ಭದ ಒತ್ತಡದ ಕಾರಣದಿಂದ ಪ್ರಾತಿನಿಧಿಕ ರೂಪದಲ್ಲಿರುತ್ತದೆ ಎಂದು ಸ್ಪಷ್ಟಪಡಿಸಬಯಸುತ್ತೇನೆ.

ವೈದೇಹಿಯವರ ಕಥೆಗಳಲ್ಲಿ ಹೆಣ್ಣು

ಈ ಪ್ರಕೃತಿಯ ಸೃಷ್ಟಿಯಲ್ಲಿ ಒಂದು ಅದ್ಭುತ ಎಂದರೆ ಹೆಣ್ಣು ಆದರೆ ಇದುವರೆಗಿಗೂ ಹೆಣ್ಣನ್ನು ತಾಯಿ, ಹೆಂಡತಿ, ಸಹೋದರಿ, ಮಗಳು, ಗೆಳತಿ ಹೀಗೆ ಪುರುಷತ್ವಕ್ಕೆ ಪೂರಕವಾದ ವಿವಿಧ ಪಾತ್ರಗಳಿಗೆ ಆರೋಪಿಸಿ ಆಕೆಯ ವ್ಯಕ್ತಿತ್ವವನ್ನು ನೋಡಲಾಗುತ್ತಿದೆಯೇ ಹೊರತು ಹೆಣ್ಣನ್ನು ಹೆಣ್ಣಾಗಿಯೇ ನೋಡುವ ಪ್ರಯತ್ನ ನಡೆದದ್ದೇ ತೀರ ವಿರಳ ಎಂದು ಹೇಳಬಹುದು. ಹಿಂದಿನಿಂದಲೂ ಪುರುಷ ಪ್ರಧಾನ ಸಮಾಜ ಹೆಣ್ಣನ್ನು ನೋಡುತ್ತಾ ಬಂದಿರುವ ರೀತಿಯೇ ಭಿನ್ನವಾಗಿದೆ ಹೆಣ್ಣನ್ನು ಸ್ವಂತಂತ್ರ ವ್ಯಕ್ತಿಯಾಗಿ ನೋಡುವ ಬದಲು ಯಾವತ್ತೂ ಅವಳನ್ನು ಪುರುಷನಿಗೆ ಪೂರಕವಾದ ಪಾತ್ರಗಳಲ್ಲಿಯೇ ನೋಡುತ್ತಾ ಬಂದಿರುವ ವ್ಯವಸ್ಥೆ ಹೆಣ್ಣಿನ ಆಸೆ ಆಕಾಂಕ್ಷೆ, ತುಡಿತ ಮಿಡಿತ, ಸಂವೇದನೆಗಳನ್ನು ಅರಿಯುವ ಪ್ರಯತ್ನವನ್ನೇ ಮಾಡಿಲ್ಲ. ಅವುಗಳಿಗೆ ಯಾವುದೇ ಮಾನ್ಯತೆಯೂ ಇಲ್ಲ ಇದರಿಂದ ಅವಳ ಎಲ್ಲ ಆಸೆಆಕಾಂಕ್ಷೆ, ತುಡಿತ ಮಿಡಿತಗಳು ಅವಳ ಅಂತರಂಗದಲ್ಲೇ ಹುದುಗಿ ಹೋಗಿ ಅವು ಹೊರ ಪ್ರಪಂಚಕ್ಕೆ ಅಪರಿಚಿತವಾಗಿಯೇ ಉಳಿದು ಹೋಗಿದವು.

> "ಪಿತಾರಕ್ಷತಿ ಕೌಮಾರ್ಯೇ ಭರ್ತಾರಕ್ಷತಿ ಯೌವನೇ
>
> ಸ್ಥವಿರೇ ರಕ್ಷಂತಿ ಪುತ್ರಾಃ ನಸ್ತ್ರೀ ಸ್ವಾಂತಂತ್ರಮರ್ಹತಿ"[1]

ಎಂದು ಹಿಂದೂ ನ್ಯಾಯಶಾಸ್ತ್ರಜ್ಞ ಮನು ಹೇಳಿದ್ದನ್ನು ಚಾಚೂತಪ್ಪದೆ ಪಾಲಿಸಿಕೊಂಡು ಬಂದಿರುವ ಸಮಾಜ ಹೆಣ್ಣಿಗೆ ಬಾಲ್ಯದಲ್ಲಿ ಪಿತನ ಆಶ್ರಯ, ಯೌವನದಲ್ಲಿ ಪತಿಯ ಆಶ್ರಯ, ವೃದ್ಧಾಪ್ಯದಲ್ಲಿ ಸುತನ ಆಶ್ರಯ ಇರಬೇಕೆಂಬ ಕಟ್ಟುಪಾಡನ್ನು ವಿಧಿಸಿ ಆಕೆಯ ಸ್ವತಂತ್ರ ವ್ಯಕ್ತಿತ್ವವನ್ನೇ ಚಿವುಟಿಹಾಕಿತು. ಆಕೆಯ ವ್ಯಕ್ತಿತ್ವಕ್ಕೆ ಮನ್ನಣೆಯೇ ಇಲ್ಲದೆ ಪುರುಷನ ಕೈಗೊಂಬೆಯಂತೆ ಬಾಳಬೇಕಾದ ಅನಿವಾರ್ಯ ಪರಿಸ್ಥಿತಿ ನಿರ್ಮಾಣವಾಗಿ ಆಕೆ ಬಾಯಿದ್ದು ಮೂಕಿಯಾಗಿ, ಕಿವಿಯಿದ್ದು ಕಿವುಡಿಯಾಗಿ, ಕಣ್ಣಿದ್ದು ಕುರುಡಿಯಾಗಿ ಬದುಕನ್ನು ಸವೆಸಿಕೊಂಡು ಬರಬೇಕಾಯಿತು. ಸ್ತ್ರೀಯನ್ನು ಯಾವಾಗಲೂ ಆದರ್ಶದ ನೆಲೆಯಲ್ಲಿ ಇರಿಸಿ, ಸೀತೆ, ಸಾವಿತ್ರಿ, ಮಂಡೋದರಿಯರಂತಹ ಸ್ತ್ರೀಯರನ್ನು ಮಾದರಿಯಾಗಿ ಮಾಡಿ ಅವರ ಸೌಂದರ್ಯ, ಶೃಂಗಾರ, ಪಾತಿವ್ರತ್ಯ, ತಾಯ್ತನಕ್ಕೆ ಒತ್ತು ನೀಡಿ ಹೆಣ್ಣೆಂದರೆ ಹೀಗೆಯೇ ಇರಬೇಕೆಂಬ ಚೌಕಟ್ಟನ್ನು ನಿರ್ಮಿಸಿ ಒಟ್ಟಾರೆ ವಿಧೇಯವಾದ, ಗಂಡಸಿನ ಬಲುವೆ, ಹಿರಿಮೆಯನ್ನು ಒಪ್ಪುವಂಥ ಪಾತ್ರಗಳನ್ನು ಹೆಣ್ಣಿಗೆ ಮಾದರಿಗಳನ್ನಾಗಿ ಒದಗಿಸಿ ಪುರುಷ ಕೇಂದ್ರಿತ ವ್ಯವಸ್ಥೆಗೆ

---

[1] ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ, ಪು.ಸಂ.169, ಕರ್ನಾಟಕ ಸಾಹಿತ್ಯ ಅಕಾಡೆಮಿ–2006.

ಹೊಂದುವ ವ್ಯಕ್ತಿತ್ವವೇ ತನ್ನ ನಿಜವಾದ ವ್ಯಕ್ತಿತ್ವವೆಂಬ ಭ್ರಮೆಯನ್ನು ಸ್ತ್ರೀಯರಲ್ಲಿ ಉಂಟುಮಾಡಿ ಸ್ತ್ರೀಯನ್ನು ಇಂತಹ ಇಕ್ಕಟ್ಟಿನಲ್ಲಿ ಬಂಧಿಸಲಾಗಿತ್ತು. ಶಿಕ್ಷಣ ನೀಡಿದರೆ ಎಲ್ಲಿ ನಮ್ಮ ಚೌಕಟ್ಟನ್ನು ಮೀರಿಯಾಳೋ ಎಂಬ ಭಯದಿಂದ ಹೆಣ್ಣನ್ನು ಶಿಕ್ಷಣದಿಂದ ವಂಚಿತಳನ್ನಾಗಿ ಮಾಡಿ ಕೇವಲ ಪುರುಷನಿಗೆ ಪೂರಕವಾದ ಪಾತ್ರಗಳಿಗೆ ಮಾತ್ರ ಸೀಮಿತಗೊಳಿಸಿಕೊಂಡು ಬರಲಾಗಿತ್ತು.

ಆದರೆ ಬದಲಾವಣೆ ಎಂಬುದು ಪ್ರಕೃತಿಯ ನಿಯಮ ಪಾಶ್ಚಾತ್ಯರ ಆಗಮನದಿಂದ ಸಮಾಜ ಸುಧಾರಕರ ಪ್ರಯತ್ನದಿಂದ ಹೆಣ್ಣು ಶಿಕ್ಷಣ ಪಡೆಯುವ ಅವಕಾಶ ಪಡೆದುಕೊಂಡಳು. ಅದು ಅವಳ ಜೀವನವನ್ನೇ ಬದಲಿಸಿತು. ಅವಳು ತನ್ನನ್ನು ತಾನು ಅರಿಯಲು, ತನಗೂ ವ್ಯಕ್ತಿತ್ವವಿದೆ ಎಂದು ಕಂಡುಕೊಳ್ಳಲು ಸಾಧ್ಯವಾಯಿತು. ಬಾವಿ ಕಪ್ಪೆಯಂತೆ ಮನೆಯೇ ತನ್ನ ಪ್ರಪಂಚ ಎಂದುಕೊಂಡಿದ್ದ ಹೆಣ್ಣಿಗೆ ಪ್ರಪಂಚವನ್ನು ಅರಿಯಲು ಶಿಕ್ಷಣ ನೆರವಾಯಿತು ಆಕೆಯ ಮುಂದೆ ಹೊಸ ಹೊಸ ಸಾಧ್ಯತೆಗಳು ತೆರೆದುಕೊಂಡವು ಸುಶಿಕ್ಷಿತ ಮಹಿಳೆಯರು ಸ್ತ್ರೀಯರ ಸಂವೇದನೆಗಳನ್ನು ಬರವಣಿಗೆಯಲ್ಲಿ ತಂದರು. ಇದರಿಂದ ಸ್ತ್ರೀ ಸಂವೇದನೆಗಳಿಗೆ ವ್ಯಾಪಕ ಪ್ರಚಾರ ದೊರೆಯಿತು. ಇಂತಹ ಮಹಿಳಾ ಲೇಖಕಿಯರಲ್ಲಿ ವೈದೇಹಿಯವರಿಗೆ ಹಿರಿಯ ಸ್ಥಾನ. ವೈದೇಹಿಯವರ ಬರಹದ ಕೇಂದ್ರ ಹೆಣ್ಣು ಸ್ವತಃ ಹೆಣ್ಣಾಗಿ ಹೆಣ್ಣಿನ ನಾಡಿ ಮಿಡಿತವನ್ನು ಅರಿತಿರುವ ವೈದೇಹಿ ಸ್ತ್ರೀ ಪ್ರಪಂಚದ ಅಂತರಂಗಂವನ್ನು ಎಳೆ ಎಳೆಯಾಗಿ ಅನಾವರಣಗೊಳಿಸಿದ್ದಾರೆ. ಅದುವರೆಗೂ ಅರಿಯಲಾಗದಿದ್ದ ಹೆಣ್ಣಿನ ಅಂತರಂಗದ ಸೂಕ್ಷ್ಮ ಸಂವೇದನೆಗಳನ್ನು ಮನ ಮುಟ್ಟುವಂತೆ ಚಿತ್ರಿಸಿದ್ದಾರೆ. ಇವರ ಬರವಣಿಗೆಗಳಲ್ಲಿ ಬರುವ ಸ್ತ್ರೀ ಪ್ರಪಂಚ ಬಹಳ ದೊಡ್ಡದು. ಇಲ್ಲಿ ಬರುವ ಸ್ತ್ರೀ ಪಾತ್ರಗಳು ಕೇವಲ ಕಾಲ್ಪನಿಕ ಪಾತ್ರಗಳಲ್ಲ ವೈದೇಹಿಯವರು ತಮ್ಮ ಸುತ್ತ ತಾವು ಕಂಡ ವ್ಯಕ್ತಿತ್ವಗಳನ್ನೇ ತಮ್ಮ ಕಥೆಗಳ ಪಾತ್ರಗಳಾಗಿ ತಂದಿದ್ದಾರೆ. ಏಕೆಂದರೆ ವೈದೇಹಿಯವರು ವಾಸ್ತವ ಪ್ರಜ್ಞೆಯನ್ನು ಹೊಂದಿರುವ ಲೇಖಕಿ. ಆದ್ದರಿಂದ ವೈದೇಹಿಯವರ ಕಥೆಗಳಲ್ಲಿ ಸ್ತ್ರೀ ಪಾತ್ರಗಳನ್ನು ನೋಡಿದಾಗ ನಮಗೆ ನಮ್ಮ ಸುತ್ತಲಿನ ಸರಳ ವ್ಯಕ್ತಿತ್ವದ, ಸಾಮಾನ್ಯ ಹೆಣ್ಣನ್ನು ಕಂಡಂತೆ ಭಾಸವಾಗುತ್ತದೆ. ಇದು ವೈದೇಹಿಯವರ ವಿಶೇಷ. "ವೈದೇಹಿಯವರ ಬರಹಗಳ ಕೇಂದ್ರ ಹೆಣ್ಣು ಈ ಹೆಣ್ಣು ವಿವಿಧ ಜಾತಿ, ವಯಸ್ಸು, ಅಂತಸ್ತು, ಸಂವೇದನೆಗಳಲ್ಲಿ ಕಾಣಿಸಿಕೊಳ್ಳುತ್ತಾಳೆ. ತೀರಾ ಸಂಪ್ರದಾಯಸ್ಥರಿಂದ ತೀರಾ ಆಧುನಿಕರವರೆಗೆ, ಅವಿವಾಹಿತೆಯರಿಂದ ಹಿಡಿದು ವಿಧವೆಯವರೆಗೆ ಈ ಪ್ರಪಂಚ ಹರಡಿಕೊಳ್ಳುತ್ತದೆ. ಇಲ್ಲಿ ವಿದ್ಯಾವಂತರು, ಅವಿದ್ಯಾವಂತರು, ಕಳ್ಳರು, ಹುಚ್ಚರು ಇದ್ದಾರೆ; ಶೋಷಿಸುವವರು ಶೋಷಣೆಗೆ

ಒಳಗಾದವರು ಇದ್ದಾರೆ. ಅಂದರೆ ವೈದೇಹಿ ಕತೆಗಳಲ್ಲಿ ಹೆಣ್ಣು ಒಂದು ಸಿದ್ಧ ಮಾದರಿಯಲ್ಲಿ ಕಾಣಿಸಿಕೊಳ್ಳದೆ ವಿವಿಧ ಆಕೃತಿಗಳಲ್ಲಿ ಭಾವಸ್ಥಿತಿಗಳಲ್ಲಿ ಕಾಣಿಸಿಕೊಳ್ಳುತ್ತಾಳೆ".[1]

ಟಿ.ಪಿ. ಅಶೋಕರ ಈ ಮೇಲಿನ ಮಾತುಗಳೇ ವೈದೇಹಿಯವರ ಬರಹಗಳಲ್ಲಿ ಕಾಣಿಸಿಕೊಳ್ಳುವ ಸ್ತ್ರೀಲೋಕದ ಆಳ ಹರವುಗಳನ್ನು ತಿಳಿಸುತ್ತವೆ. ಅವರ ಕಥೆಗಳಲ್ಲಿ ಯಾವ ಕಪಟ ಅರಿಯದ ಮುಗ್ಧರು. ಅವಿದ್ಯಾವಂತರಾದರೂ ಸಾಲಸೋಲವಿಲ್ಲದೆ ಸಂಸಾರವನ್ನು ಚೊಕ್ಕವಾಗಿ ನಿರ್ವಹಿಸಬಲ್ಲ ಜಾಣರು, ಗಂಡಿನಿಂದ ಮೋಸಕ್ಕೆ ಒಳಗಾದರೂ ದಿಟ್ಟತನದಿಂದ ಬದುಕುವ ಜೀವನ್ಮುಖಿಗಳು. ತಮ್ಮ ಅಂತರಂಗದ ಭಾವನೆಗಳನ್ನು ಬಹಿರಂಗವಾಗಿ ತೋಡಿಕೊಳ್ಳಲಾಗದೆ ಒಳ ಒಳಗೆ ಕುದಿದು ಹೋಗುವ ಅಸಹಾಯಕರು. ಅಂತರ್ಮುಖಿಗಳು, ಬಹಿರ್ಮುಖಿಗಳು, ತಮ್ಮ ವಾಚಾಳಿತನದ ಮೂಲಕ, ನಟನೆಯ ಮೂಲಕ ತಮ್ಮ ಕೊರತೆಗಳನ್ನು ನೋವನ್ನು ಮರೆಯಲು ಪ್ರಯತ್ನಿಸುವವರು, ಕಿರಿಯರ ಮೇಲೆ ಸಂಪ್ರದಾಯ ಹೇರಲು ಹವಣಿಸುವ ಸಂಪ್ರದಾಯಸ್ಥರಾದ ಹಿರಿಯ ತಲೆಮಾರಿನವರು, ವಿದ್ಯಾವಂತೆಯರು, ಬುದ್ಧಿವಂತೆಯರಾದ ಸಂಯಮಿಗಳು, ಪುರುಷನಿಗೆ ಸರಿಸಮಾನ ಎನಿಸಿಕೊಳ್ಳಲು ಹವಣಿಸುವ ಅಧುನಿಕರು, ತುಂಟತನದ ಎಳೆಯರು, ತಾಯ್ತನಕ್ಕಾಗಿ ಹಂಬಲಿಸುವವರು ಹೀಗೆ ವಿವಿಧ ರೀತಿಯ ಸ್ತ್ರೀಲೋಕ ಅವರ ಕಥೆಗಳಲ್ಲಿ ತೆರೆದುಕೊಳ್ಳುತ್ತಾ ಹೋಗುತ್ತದೆ.

ವೈದೇಹಿಯವರು ಸಂಪ್ರದಾಯಸ್ಥ ಮನೆತನದಲ್ಲಿ ಹುಟ್ಟಿ ಬೆಳೆದವರಾದ್ದರಿಂದ ಅದರ ಅನುಭವ ಅವರಿಗೆ ಚೆನ್ನಾಗೇ ಆಗಿರುತ್ತದೆ. ಸಂಪ್ರದಾಯಸ್ಥ ಹಿರಿಯ ತಲೆಮಾರಿನವರಿಗೆ ಇಂದಿನ ತಲೆಮಾರಿನ ಹದಿಹರೆಯದವರ ಭಾವನೆಗಳು ಅರ್ಥವಾಗುವುದಿಲ್ಲ. ಬದಲಾದ ಕಾಲವನ್ನು ಸ್ವೀಕರಿಸಲಾಗದ ಅವರು ಇಂದಿನ ತಲೆಮಾರಿನ ಹೆಣ್ಣು ಮಕ್ಕಳ ಮೇಲೆ ಬಲವಂತವಾಗಿ ಸಂಪ್ರದಾಯ ಹೇರಲು ಪ್ರಯತ್ನಿಸುತ್ತಾರೆ. ಅದರಲ್ಲೂ ಹೆಣ್ಣು ಮಕ್ಕಳ ಮದುವೆಯ ವಿಚಾರದಲ್ಲಿ ಹೆಣ್ಣಿಗೆ ಅವಳ ಮದುವೆಯ ವಿಚಾರದಲ್ಲಿ ಸ್ವಾತಂತ್ರ್ಯವಿಲ್ಲ. ಮನೆಯಲ್ಲಿ ಹಿರಿಯರು ಒಪ್ಪಿದರೆ ಸಾಕು ಮದುವೆಯಾಗುವ ಹೆಣ್ಣಿನ ಅಭಿಪ್ರಾಯ ಕೇಳುವ ಅಗತ್ಯವಿಲ್ಲ, ಕೇಳಿದರೂ ಕೇವಲ ಶಾಸ್ತ್ರಕ್ಕಷ್ಟೆ ಇದರಿಂದ ಹೆಣ್ಣು ಮಕ್ಕಳ ಆಸೆ ಆಕಾಂಕ್ಷೆಗಳು ಗರಿಬಿಚ್ಚಿ ಹಾರಲಾರದೆ ಅಂತರಂಗದಲ್ಲೇ ಕಮರಿ ಹೋಗುತ್ತವೆ. ಹೆಣ್ಣು ಹುಟ್ಟಿದಾಗಲೇ ಪರರ ಸ್ವತ್ತು ಎಂದು ತೀರ್ಮಾನಿಸಿಬಿಡುತ್ತಾರೆ. ಕಾಳಿದಾಸನು ಅಭಿಜ್ಞಾನ ಶಾಕುಂತಲದಲ್ಲಿ "ಅರ್ಥೋಹಿ ಕನ್ಯಾ ಪರಕೀಯ ಏವ"[2] ಎಂದರೆ ಕನ್ಯೆಯಾದವಳು

---

[1] ಟಿ.ಪಿ.ಅಶೋಕ ಆಯ್ಕೆಯ ವೈದೇಹಿ ವಾಚಿಕೆ. ಪ್ರಸ್ತಾವನೆ. ಸುಧಿಪುಸ್ತಕ–2009.

[2] ಕನ್ನಡ ಸಾಹಿತ್ಯದಲ್ಲಿ ಸ್ತ್ರೀ ಸಂವೇದನೆಯ ಸ್ವರೂಪ. ಪು.ಸಂ.169, ಕರ್ನಾಟಕ ಸಾಹಿತ್ಯ ಅಕಾಡೆಮಿ –2006.

ಪರಕೀಯ ಸಂಪತ್ತು ಇದನ್ನು ತಂದೆಯಾದವನು ನಿಧಿಯಂತೆ ಬಂಗಾರದಂತೆ ಜೋಪಾನವಾಗಿ ಕಾಪಾಡಿ ವರನ ಒಡೆತನಕ್ಕೆ ಒಪ್ಪಿಸಬೇಕು ಎಂದು ಹೇಳಿದ್ದಾನೆ. ಹೆಣ್ಣು ಪರರ ಸಂಪತ್ತಾದ್ದರಿಂದ ಆ ಸಂಪತ್ತನ್ನು ಹೇಗಾದರೂ ಮಾಡಿ ಸೇರಬೇಕಾದವರಿಗೆ ಸೇರಿಸಿ ಜವಾಬ್ದಾರಿ ಕಳೆದುಕೊಳ್ಳಲು ಹವಣಿಸುತ್ತಾರೆಯೇ ಹೊರತು ಹೆಣ್ಣಿನ ಸೂಕ್ಷ್ಮ ಭಾವನೆಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸುವುದಿಲ್ಲ. 'ಚಿಪ್ಪು' ಕಥೆಯಲ್ಲಿ ಬರುವ ರಂಗಜ್ಜಿ ತನ್ನ ಮೊಮ್ಮಗಳು ಯಶಿಯ ಮದುವೆಯ ವಿಚಾರವಾಗಿ ತನ್ನ ಕಿರಿಯ ಮಗ ಸದಾಶಿವನಿಗೆ ಯಶಿಯ ಮದುವೆಯ ಹೊಣೆ ನಿನಗೆ ಒಪ್ಪಿಸಿದ್ದೇವೆ "ಈ ವರ್ಷ ಅವಳನ್ನು ಹೊರಗೆ ಹಾಕಿದರೆ ಇವ ಬದುಕಿದ" ಎನ್ನುತ್ತಾರೆ. ಹಾಗೆಯೇ 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿ'ಗೆ ಕಥೆಯಲ್ಲಿ ಬರುವ ವಾಗತ್ತೆ ತನ್ನ ಮೊಮ್ಮಗಳ ಮದುವೆಗೆ ಬಂದಿದ್ದ ಕೆಳಮನೆ ವಾಸುದೇವನ ಮಗ ತನ್ನ ಮಗಳು ವಾರಿಜಳ ಪರಿಚಯ ಮಾಡಿಸಿದಾಗ ಹುಡುಗಿ ಬೆಳೆದಿದ್ದನ್ನು ಕಂಡು ಆದಷ್ಟು ಬೇಗ ಮದುವೆ ಮಾಡುವಂತೆ ಸೂಚಿಸುತ್ತಾಳೆ. "ಎಷ್ಟು ಬೇಗ ಮದುವೆ ಮಾಡಿದೆ ಅಷ್ಟು ಬೇಗ ಗೆದ್ದೆ ಅಂತಿಟ್ಟುಕೋ" ಎಂಬ ವಾಗತ್ತೆಯ ಮಾತಿನಲ್ಲೂ ರಂಗಜ್ಜಿಯ ಮಾತಿನಲ್ಲು ಹೆಣ್ಣಿನ ಆಸೆ ಅಭಿಪ್ರಾಯಗಳಿಗಿಂತ ಹೆಚ್ಚಾಗಿ ಅವಳನ್ನು ಯಾರಿಗಾದರೂ ಕಟ್ಟಿ ಜವಾಬ್ದಾರಿಯಿಂದ ಮುಕ್ತರಾದರೆ ಒಳ್ಳೆಯದು ಎಂಬ ಹಂಬಲವೇ ಎದ್ದು ಕಾಣುತ್ತದೆ.

ಸಂಪ್ರದಾಯದ ಪ್ರತೀಕವಾದ ರಂಗಜ್ಜಿ ಮತ್ತು ವಾಗತ್ತೆಯರಂತಹವರು ಹೆಣ್ಣು ಸ್ವತಂತ್ರ ಮನಸ್ಸಿರುವ ಜೀವಂತ ವ್ಯಕ್ತಿಯಂತೆ ಕಾಣುವುದಕ್ಕಿಂತ ಹೆಚ್ಚಾಗಿ ಮಾರುಕಟ್ಟೆಯಲ್ಲಿ ಮಾರಾಟಕ್ಕಿಟ್ಟ ತರಕಾರಿಯಂತೆ ಕಾಣುತ್ತಾರೆ. ಎಲ್ಲಿ ಮಾರಾಟವಾಗುವುದು ತಡವಾದರೆ ತರಕಾರಿ ಕೊಳೆತು ಹೋಗುವುದೋ ಎಂಬ ಭಯವನ್ನು ಅವರ ಮಾತುಗಳಲ್ಲಿ ಕಾಣಬಹುದು. ಇಲ್ಲಿ ಹೆಣ್ಣೇ ಹೆಣ್ಣಿನ ಭಾವನೆಗಳನ್ನು ಅರಿಯಲು ಪ್ರಯತ್ನಿಸದ ವ್ಯಂಗ್ಯ ಅಣಕಿಸುತ್ತದೆ. ಪುರುಷ ವ್ಯವಸ್ಥೆ ರೂಪಿಸಿದ ಸಂಪ್ರದಾಯ ಹೇಗೆ ಅವರ ಮೇಲೆ ಪ್ರಬಲ ಮುದ್ರೆಯೊತ್ತಿದೆ ಎಂಬುದನ್ನು ಇದರಿಂದ ಅರಿಯಬಹುದು ಅವರ ಪ್ರಕಾರ ಹೆಣ್ಣಿಗೆ ಯಾವ ವಯಸ್ಸಿಗೆ ಏನು ನಡೆಯಬೇಕೋ ಅದು ನಡೆದು ಹೋಗಬೇಕು. ಹೆಣ್ಣು ಗಂಡಿನ ಆಶ್ರಯದಲ್ಲಿದ್ದರೆ ಕ್ಷೇಮ ಆದ್ದರಿಂದ ಯಾರಿಗೋ ಕಟ್ಟಿ ಕೈ ತೊಳೆದುಕೊಂಡರೆ ಸಾಕು ಎಂದು ಭಾವಿಸುತ್ತಾರೆ.

ಸುಲಭವಾಗಿ ಒಪ್ಪದ ಹೆಣ್ಣು ಮಕ್ಕಳಿಗೆ ಹೊಟ್ಟೆ ಬಟ್ಟೆಯ ಪ್ರಶ್ನೆ ಎತ್ತಿ ಮದುವೆಗೆ ಒಪ್ಪಿಸಲು ಪ್ರಯತ್ನಿಸುತ್ತಾರೆ. 'ಅಂತರಂಗದ ಪುಟಗಳು' ಕಥೆಯಲ್ಲಿ ಬರುವ ಅಚಲ ಒಬ್ಬೊಬ್ಬರಾಗಿ ಹನ್ನೊಂದು ಜನ ಹುಡುಗರು ಬಂದು ನೋಡಿಕೊಂಡು ಹೋದರೂ ಮದುವೆಗೆ ಒಪ್ಪದಿದ್ದಾಗ "ಹೀಗೆ ಅವ ಬೇಡ ಇವ ಬೇಡ ಎಂದು ಕುಳಿತರೆ ಕಡೆಗೆ ಸಿಗುವುದು ಯಾಕೂ ಬೇಡದವ ಅಪ್ಪ, ಅಮ್ಮ

ಇರುವವರೆಗೆ ಸೈ. ಆಮೇಲೆ ನಿನ್ನನ್ನು ಯಾರು ನೋಡಿಕೊಳ್ಳುತ್ತಾರೆ?" ಎಂದ ಪುಟ್ಟತ್ತೆಯ ಮಾತುಗಳು ಈ ಮೇಲಿನ ಮಾತನ್ನು ಸಮರ್ಥಿಸುತ್ತವೆ ಹಿರಿಯರು ಸಂಪ್ರದಾಯ ಹಾಕಿಕೊಟ್ಟ ದಾರಿಯಲ್ಲಿ ಕುರುಡರಂತೆ ಬಂದವರೇ ಹೊರತು ತಮ್ಮ ಮನದ ಮಾತಿಗೆ ಬೆಲೆಕೊಟ್ಟು ಅದನ್ನು ಪ್ರಶ್ನಿಸಿದವರಲ್ಲ ಅವರ ಪ್ರಕಾರ ಹೆಣ್ಣಿಗೆ ಆಶ್ರಯ ನೀಡಲು ಗಂಡ ಎಂಬುವನು ಇರಬೇಕು ಅಷ್ಟೇ ಅವನು ಇಷ್ಟ ಆಗುವುದು ಬಿಡುವುದು ಮುಖ್ಯವಲ್ಲ. ಹಿಂದೆಲ್ಲ ಹೆಣ್ಣಿಗೆ ತನ್ನ ಇಷ್ಟ ಕಷ್ಟಗಳ ಅರಿವಾಗುವ ಮೊದಲೇ ಅಂದರೆ ಬಾಲ್ಯದಲ್ಲೇ ಮದುವೆಮಾಡಿ ಬಿಡುತ್ತಿದ್ದರು ಇದರಿಂದ ಎಷ್ಟೋ ಹೆಣ್ಣು ಮಕ್ಕಳು ಬಾಲ ವಿಧವೆಯರಾಗಿ ತಾವು ಬದುಕಿರುವವರೆಗೆ ತಮ್ಮ ಎಲ್ಲಾ ಬಯಕೆಗಳನ್ನು ಕೊಂದುಕೊಂಡು ತಲೆ ಬೋಳಿಸಿಕೊಂಡು ಕೆಂಪು ಸೀರೆಯುಟ್ಟು ಉಪ್ಪು, ಹುಳಿ, ಖಾರ ಇಲ್ಲದ ಊಟ ಮಾಡುತ್ತಾ ನೀರಸವಾಗಿ ಬದುಕು ಕಳೆಯಬೇಕಾದ ದಯನೀಯ ಸ್ಥಿತಿ ಹೆಣ್ಣಿನ ಪಾಲಿನದಾಗಿತ್ತು. ಬಾಲ ವಿಧವೆಯಾಗಿ ಜೀವನಪೂರ್ತಿ ಕಳೆದು ಈಗ ಜೀವನದ ಮುಸ್ಸಂಜೆಗೆ ಕಾಲಿಟ್ಟಿರುವ ಮಡಿ ಮಡಿ ಎನ್ನುವ ವಯಸ್ಸಾದ ಹೆಂಗಸರನ್ನು ವೈದೇಹಿಯವರ ಕಥೆಗಳಲ್ಲಿ ಕಾಣಬಹುದು.

'ಪುಟ್ಟಮ್ಮತೆ ಮತ್ತು ಮೊಮ್ಮಗಳು' ಕಥೆಯ ಪುಟ್ಟಮ್ಮತ್ತೆ ಚಿಕ್ಕ ವಯಸ್ಸಿನಲ್ಲಿ ತಾಯಿಯನ್ನು ಕಳೆದುಕೊಂಡು ಪಕ್ಕದ ಮನೆ ಅಜ್ಜಿ ಆಶ್ರಯದಲ್ಲಿ ಬೆಳೆದವಳು. ಕೊನೆಗೆ ಒಂದು ದಿನ ಅಜ್ಜಿಯು ತೀರಿ ಹೋದಳು ಒಂಟಿ ಹೆಣ್ಣಾದ ಪುಟ್ಟಮ್ಮನ ಮೇಲೆ ಪುರುಷನ ಕಾಮುಕ ಕಣ್ಣು ಬಿದ್ದಾಗ ಇನ್ನು ಈ ಹೆಣ್ಣನ್ನು ಒಂಟಿಯಾಗಿ ಬಿಡುವುದು ಸರಿಯಲ್ಲ ಒಂದು ಗಂಡಿನ ಆಶ್ರಯಬೇಕು ಎಂದು ತೀರ್ಮಾನಿಸಿ ಅವನು ಯೋಗ್ಯನೋ, ಸರಿಯಾದ ಜೋಡಿಯೋ, ಅಲ್ಲವೋ ಎಂಬುದನ್ನು ಯೋಚಿಸದೆ ಪುಟ್ಟಮ್ಮನ ಅಭಿಪ್ರಾಯವನ್ನು ಕೇಳದೆ ಮದುವೆಮಾಡಿ ಮುಗಿಸಿದರು. ಪುಟ್ಟಮ್ಮ ಗಂಡನನ್ನು ನೋಡಿದ್ದು ಮದುವೆಯ ದಿನವೆ ಎಂದರೆ ಹೆಣ್ಣಿಗೆ ಎಷ್ಟರ ಮಟ್ಟಿನ ಸ್ವಾತಂತ್ರ್ಯ ಇತ್ತು ಎಂಬುದನ್ನು ಅರಿಯಬಹುದು. ಯಾರಿಗೆ ಕಟ್ಟುತ್ತಾರೋ ಅವನೊಡನೆ ಹೇಗಿದ್ದರೂ ಹೊಂದಿಕೊಂಡು ಸಂಸಾರ ನಡೆಸಬೇಕಾದ ಅನಿವಾರ್ಯ ಸ್ಥಿತಿ ಹೆಣ್ಣಿನದಾಗಿತ್ತು.

ಸಂಪ್ರದಾಯವನ್ನು ಚಾಚು ತಪ್ಪದೆ ಪಾಲಿಸಿಕೊಂಡು ಬಂದಿರುವ ಹಿರಿಯರ ಪ್ರಕಾರ ಹೆಣ್ಣಿಗೆ ಶಿಕ್ಷಣ ಮುಖ್ಯವಲ್ಲ. ಅವಳೇನೇ ಇದ್ದರೂ ಮದುವೆಯಾಗಿ ಮಗುವನ್ನು ಹೆರಲಿಕ್ಕಷ್ಟೇ ಲಾಯಕ್ಕಾದವಳು. ಅದೇ ಅವಳ ಜೀವನದ ಪರಮೋದ್ದೇಶ ಅದಕ್ಕಾಗಿ ಚಿಕ್ಕವಯಸ್ಸಿನಿಂದಲೇ ತರಬೇತಿ ಕೊಡಲು ಆರಂಭಿಸಿ ಬಿಡುತ್ತಾರೆ. 'ಮರೆಯಾದವರು' ಕಥೆಯಲ್ಲಿ ಹುಡುಗಿಯೊಬ್ಬಳು ಮುಟ್ಟಿನ ಹೊಟ್ಟೆನೋವಿನಿಂದ ನರಳುತ್ತಿದ್ದರೆ – "ಎಸ್ಸೆಸ್ಸೆಲ್ಸಿ ಆಗಿಬಿಟ್ಟರೆ ಸಾಕು. ಮುಂದೆ ಕಳಿಸುವುದು

ಬೇಡ. ಮುಟ್ಟಿನ ಹೊತ್ತಿನಲ್ಲೆಲ್ಲಾ ಶಾಲೆಗೆ ಹೋಗುವುದು. ಉಳಿದವರನ್ನು ಮುಟ್ಟುವುದು. ಹಾರುವುದು ಕುಣಿಯುವುದು. ಯಾಕಾಗುತ್ತದೆ? ಮುಂದೆ ಹೆತ್ತುಹಿಡಿಯಬೇಕಾದವರು" ಎಂದು ಮನೆಯೊಳಗಿಂದ ಬರುವ ಧ್ವನಿಯು ಈ ಮೇಲಿನ ಅಭಿಪ್ರಾಯವನ್ನೇ ವ್ಯಕ್ತಪಡಿಸುವ ಜೊತೆಗೆ ಹೆಣ್ಣಿಗೆ ಸಹಜವಾದ ಋತುಚಕ್ರ, ತಾಯ್ತನ ಇತ್ಯಾದಿ ಸಂದರ್ಭದಲ್ಲಿ ಮಡಿ ಮೈಲಿಗೆಯ ನೆಪದಲ್ಲಿ ಹೆಣ್ಣು ಹಿಂಸೆ, ನಿರ್ಬಂಧಗಳಿಗೆ ಒಳಗಾಗುವುದನ್ನೂ ಧ್ವನಿಸುತ್ತದೆ. ಹೆಣ್ಣಿಗೆ ಶಿಕ್ಷಣ ನಿರಾಕರಿಸಲು ಮೇಲಿನ ಕಾರಣಗಳಷ್ಟೇ ಅಲ್ಲ ಶಾಲೆಗೆ ಹೋದರೆ ಎಲ್ಲಿ ಜಾತಿಗೀತಿ ನೋಡದೆ ತನಗೆ ಇಷ್ಟಬಂದ ಹುಡುಗನ ಜೊತೆ ಓಡಿಹೋಗುವಳೋ ಎಂಬ ಭಯವೂ ಸೇರಿರುವುದನ್ನು ಗುರುತಿಸಬಹುದು.

ಕಾಲದ ಸೆಲೆಯಲ್ಲಿ ಹೆಣ್ಣಿನ ಸ್ಥಿತಿಯಲ್ಲೂ ಬದಲಾವಣೆಯಾಗಿರುವುದನ್ನು ಮರೆತು ತಲೆತಲಾಂತರದಿಂದ ಬಂದ ಸಂಪ್ರದಾಯವನ್ನು ಮುಂದುವರಿಸಿಕೊಂಡು ಹೋಗುವ ಗುತ್ತಿಗೆ ಪಡೆದಂತೆ ವರ್ತಿಸುವ ಹಳೆಯ ತಲೆಮಾರಿನ ಹೆಂಗಸರ ಪ್ರಪಂಚ ಒಂದು ಕಡೆ ಹಾಗೂ ಇದಕ್ಕೆ ವಿರುದ್ಧವಾದ ಆಲೋಚನೆಗಳನ್ನು ಹೊಂದಿದ ಹಳೆಯ ಸಂಪ್ರದಾಯಕ್ಕೆ ಜೋತು ಬೀಳದೆ ತಮ್ಮತನವನ್ನು ಉಳಿಸಿಕೊಳ್ಳುವುದಕ್ಕಾಗಿ ಹೋರಾಡುವ ಇಂದಿನ ತಲೆಮಾರಿನ ಹೆಣ್ಣುಮಕ್ಕಳ ಪ್ರಪಂಚ ಇನ್ನೊಂದು ಕಡೆ ಇವೆರೆಡನ್ನೂ ಒಟ್ಟೊಟ್ಟಿಗೆ ತಮ್ಮ ಕಥೆಗಳಲ್ಲಿ ತಂದಿರುವ ವೈದೇಹಿಯವರು ಈ ಎರಡೂ ತಲೆಮಾರಿನ ಹೆಣ್ಣಿನ ಮನೋಭಾವದ ಅಂತರವನ್ನು ಸೂಕ್ಷ್ಮವಾಗಿ ಚಿತ್ರಿಸಿದ್ದಾರೆ.

ಶಿಕ್ಷಣ ಮಾಧ್ಯಮಗಳು ಹೆಣ್ಣಿನಲ್ಲಿ ಸಾಕಷ್ಟು ಜಾಗೃತಿಯನ್ನು ಉಂಟುಮಾಡಿವೆ. ಇದರಿಂದ ಇಂದಿನ ಹೆಣ್ಣು ಮಕ್ಕಳು ಸ್ವತಂತ್ರವಾಗಿ ಆಲೋಚಿಸತೊಡಗಿದ್ದಾರೆ. ತಮ್ಮ ಭವಿಷ್ಯದ ಬಗ್ಗೆ, ತಮ್ಮ ಬಾಳಸಂಗಾತಿ ಬಗ್ಗೆ ತಮ್ಮದೇ ಆದ ಕಲ್ಪನೆಗಳನ್ನು ಹೊಂದಿರುತ್ತಾರೆ. ಇದ್ಯಾವುದರ ಅರಿವು ಇರದ ಹಿರಿಯರು ಮದುವೆಯ ವಿಷಯದಲ್ಲಿ ಅವಳ ಆಸೆ ಅಭಿಪ್ರಾಯಗಳಿಗೆ ಬೆಲೆ ಕೊಡದೆ ತಮ್ಮ ಹೊರೆ ಕಳೆದುಕೊಳ್ಳಲು ನೋಡುತ್ತಾರೆ. ಇದು ನೂರಾರು ಆಸೆ ಕಲ್ಪನೆಗಳನ್ನು ಹೊಂದಿದ ಹೆಣ್ಣಿಗೆ ಕಿರಿಕಿರಿಯನ್ನುಂಟುಮಾಡುತ್ತದೆ. ಹಿರಿಯರ ಮಾತುಗಳನ್ನು ಧಿಕ್ಕರಿಸಲು ಆಗದೆ ತಮ್ಮ ಭಾವನೆಗಳೊಂದಿಗೆ ರಾಜಿ ಮಾಡಿಕೊಳ್ಳಲು ಆಗದೆ ತೊಳಲಾಡುವ ಹೆಣ್ಣಿನ ಅಸಹಾಯಕತೆ, ಅವರ ಮನದಾಳದಲ್ಲಿ ನಡೆಯುವ ಘರ್ಷಣೆ, ವ್ಯವಸ್ಥೆಯ ಬಲಿಪಶುಗಳಾಗಿ ನರಳುವ ಅವರ ಮಾನಸಿಕ ತುಮುಲಗಳನ್ನು ವೈದೇಹಿಯವರು ಸಮರ್ಥವಾಗಿ ಹಿಡಿದಿಟ್ಟಿದ್ದಾರೆ.

ವೈದೇಹಿಯವರ ಹೆಣ್ಣು ಬೌದ್ಧಿಕವಾಗಿ ಪ್ರಬುದ್ಧೆ. ಆಕೆ ಹಿಂದಿನಿಂದ ಬಂದ ಸಿದ್ಧ ಮಾದರಿಯಂತೆ ಇರಲು ಒಲ್ಲಳು. ಆಕೆ ತನ್ನ ಆಸೆ ಅಭಿಪ್ರಾಯಗಳಿಗೆ ಬೆಲೆ ಕೊಡುವ ಹೆಣ್ಣು. 'ಚಿಪ್ಪು'

ಕಥೆಯ ಯಶಿಯ ಆಲೋಚನೆಗಳಲ್ಲಿ ಇದನ್ನು ಕಾಣಬಹುದು. ಯಶಿ ತನ್ನ ಬಾಳ ಸಂಗಾತಿಯ ಬಗ್ಗೆ, ಹೊಸ ಬದುಕಿನ ಬಗ್ಗೆ ತನ್ನದೇ ಆದ ಕಲ್ಪನೆಗಳನ್ನು ಹೊಂದಿರುವವಳು. "ತನಗೆ ಹೊಸತು ಬೇಕು. ಹೊಚ್ಚ ಹೊಸ ಬಾಳುವೆ ಬೇಕು" ಎನ್ನುವ ಯಶಿ ಹೆಂಡತಿ ಎಂದರೆ ಹೀಗಿರಬೇಕು ಎಂದು ಹಿಂದಿನಿಂದ ಹಾಕಿಕೊಟ್ಟ ಸಂಪ್ರದಾಯದಂತೆ ಇರಲು ಬಯಸಳು. ತನ್ನ ಗಂಡನ ನಗುವಿನಲ್ಲೇ ತನ್ನ ನಗು ಕಾಣುವ, ಅವನ ಕೆಲಸ ಮಾಡುವುದರಲ್ಲೇ ಸುಖ ಕಾಣುವ, ಮನದಲ್ಲಿ ಬೇಸರವಿದ್ದರೂ ತುಟಿಯಲ್ಲಿ ಕೃತಕವಾಗಿ ನಗು ತಂದುಕೊಳ್ಳುವ ಅವನಿಗೆ ಬೇಕಾದಾಗ ತನಗೆ ಇಷ್ಟವಿಲ್ಲದಿದ್ದರೂ ಅವನ ಕಾಮನೆಗಳನ್ನು ಪೂರೈಸುವ ನಾಟಕೀಯ ಬದುಕು ಅವಳಿಗೆ ಬೇಡ. ಅವಳು "ತನ್ನ ದಾಂಪತ್ಯ ತಾನು ಕಂಡ ಅನೇಕ ದಾಂಪತ್ಯಗಳಂತೆ ಇರಬಾರದು. ಅಲ್ಲಿ ಪ್ರೀತಿ, ವಿಶ್ವಾಸ ಯಾಂತ್ರಿಕವಾಗಿದೆ. ಈ ಯಾಂತ್ರಿಕತೆಯನ್ನು ಒಡೆಯಬೇಕು. ಅದಕ್ಕೆ ಜೀವ ತುಂಬಬೇಕು. ಹೃದಯ ಹೃದಯವನ್ನು ಪ್ರೀತಿಸಬೇಕು" ಎಂದು ಬಯಸುತ್ತಾಳೆ.

ಸಂಪ್ರದಾಯಶೀಲರ ಪ್ರಕಾರ ಹೆಣ್ಣು ಎಂದರೆ ಹಿರಿಯರು ಹೇಳಿದ್ದಕ್ಕೆಲ್ಲ ಹೂಂಗುಡಬೇಕು, ಎದುರು ಮಾತನಾಡಬಾರದು ಅಂತಹವಳು ಮಾತ್ರ ಸುಸಂಸ್ಕೃತ ಒಳ್ಳೆಯ ಹೆಣ್ಣು. ಚಿಕ್ಕವರಿರುವಾಗಿನಿಂದಲೂ ಇದೇ ರೀತಿ ಹೆಣ್ಣು ಮಕ್ಕಳನ್ನು ತಯಾರು ಮಾಡಲಾಗುತ್ತದೆ ಹೆಣ್ಣು ಮಕ್ಕಳನ್ನು ಹೊಗಳಿ ಉಬ್ಬಿಸುವ ಮೂಲಕ ತಮ್ಮ ಸಿದ್ಧಾಂತಗಳನ್ನು ಅವರು ಒಪ್ಪಿಕೊಳ್ಳುವಂತೆ ಮಾಡಲಾಗುತ್ತದೆ. ಹಿರಿಯರಿಗೆ ತಗ್ಗಿ ಬಗ್ಗಿ ನಡೆಯುವ ಹೆಣ್ಣು ಮಾತ್ರ ಮುಂದೆ ಗಂಡನೊಂದಿಗೆ ಭಯ ಭೀತಿಯಿಂದ ಸಂಸಾರ ಮಾಡುವ ಮೂಲಕ ಒಳ್ಳೆಯ ಸಂಸಾರವಂತೆ ಎನಿಸಿಕೊಳ್ಳುತ್ತಾಳೆ ಎಂದು ಭಾವಿಸಲಾಗುತ್ತವೆ. 'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆಯ ಕೆಳಮನೆ ವಾಸುದೇವನ ಮಗ ತನ್ನ ಮಗಳು ವಾರಿಜಳಿಗೆ ವಾಗತ್ತೆಯ ಕಾಲಿಗೆ ನಮಸ್ಕರಿಸಲು ಹೇಳಿದಾಗ ಹುಡುಗಿ ಬುಡ್ಡೆಂದು ಅಡ್ಡ ಬಿದ್ದಾಗ "ಅಡ್ಡಿಲ್ಲ ಹೆಣ್ಣಿಗೆ ಒಳ್ಳೆಯ ಭಾಮ ಭಕ್ತಿ ಕಲಿಸಿದ್ದಿ. ಈಗಿನವರ ಹಾಗೆ ಧಿಮಿ ಧಿಮಿ ಅಲ್ಲ. ನಾಳೆ ಗಂಡನೊಟ್ಟಿಗೆ ಸಾಭೀತಿಯಿಂದ ಬಾಳೀತು" ಎಂದ ವಗತ್ತೆಯ ಮಾತಿನಲ್ಲಿ ಇದನ್ನು ಗುರುತಿಸಬಹುದು.

ಆದರೆ ಸಂಪ್ರದಾಯಶೀಲರ ಕೀಲುಗೊಂಬೆಯಂತೆ ಬದುಕಲು ಒಲ್ಲದ ಹೆಣ್ಣು ಮಕ್ಕಳು ಇದ್ದಾರೆ. ಆದರೆ ಅದನ್ನು ನೇರವಾಗಿ ಪ್ರಶ್ನಿಸುವ ಧೈರ್ಯವಿಲ್ಲದೆ ಮನದೊಳಗೆ ಕಿಡಿ ಕಿಡಿಯಾಗುತ್ತಾರೆ. ತನ್ನನ್ನು ಬಂಧಿಸಿಟ್ಟ ಸಂಪ್ರದಾಯದ ಬೇಲಿಯಿಂದ ಹೊರಬರಲು ಎಷ್ಟೇ ಪ್ರಯತ್ನಿಸಿದರೂ ಅದು ಸಾಧ್ಯವಾಗುತ್ತಿಲ್ಲ. 'ಚಿಪ್ಪು' ಕಥೆಯ ಯಶಿ "ಅಜ್ಜಿ, ಅಮ್ಮ ಅಪ್ಪ, ನೆರೆಹೊರೆಯವರು, ತಾನು ಹುಟ್ಟುವ ಮುಂಚೆಯೇ ಸೃಷ್ಟಿಸಿ ಇಟ್ಟ ಆ ಹಳೆಯ, ನಾರುವ,

ಬೋಳುಬೇಲಿಯ ಒಳಗೆ ನನ್ನ ನಾಲಿಗೆ ಬಂಧಿತವಾಗಬೇಕೆ?" ಈ ಬೇಲಿ ಹರಿದುಕೊಂಡು ಬರಬೇಕು ತಾನು ಎಂದು ಎಷ್ಟೇ ಅಂದುಕೊಂಡರೂ "ಮನಸ್ಸಿನೊಳಗೇ ಪ್ರಶ್ನೆ ಹಾಕಿ ಕೆಂಡಕಾರುವ ಅಭ್ಯಾಸವಾಗಿ ಹೋಗಿವೆ ಜೀವಕ್ಕೆ ಪ್ರತ್ಯಕ್ಷವಾಗಿ ಘರ್ಷಣೆ ಮಾಡುವುದೆಂದರೇನು ತಿಳಿಯದು" ಎಂದು ಅಸಹಾಯಕಳಾಗಿ ಕೈ ಚೆಲ್ಲಿಬಿಡುತ್ತಾಳೆ. ಅವಳೇ ಅಂದುಕೊಳ್ಳುವಂತೆ "ರಂಗಜ್ಜಿಯ ಬೊಚ್ಚುಬಾಯಿಂದ ಉದುರುತ್ತಿದ್ದ ಹುಡುಗಿಯೆಂದರೆ ಹೀಗಿರಬೇಕು. ಎನ್ನುವ ವರ್ಣನೆ ಕೇಳಿ ತನಗೇ ಅರಿಯದಂತೆ ಅವಳ ಸಿದ್ಧಾಂತಗಳಿಗೆ ವ್ಯಕ್ತಿತ್ವ ಬಾಗಿ ಕುಳಿತಿದೆ". ಆ ಒಳ್ಳೆಯ ಹುಡುಗಿ ಎಂಬ ಮುದ್ರೆಯಿಂದ ಹೊರಬರುಲು ಮನಸ್ಸು ಅಳುಕುತ್ತದೆ ಹೇಗೆ ಸಂಪ್ರದಾಯದ ಆವರಣ ನಮ್ಮ ಹೆಣ್ಣುಮಕ್ಕಳ ವ್ಯಕ್ತಿತ್ವವನ್ನು ರೂಪಿಸಿದೆ ಎಂಬುದನ್ನು ಯಶಿಯ ನಿದರ್ಶನದ ಮೂಲಕ ಅರಿಯಬಹುದಾಗಿದೆ.

ಸಾಂಪ್ರದಾಯಿಕ ಸಾಮಾಜಿಕ ವ್ಯವಸ್ಥೆ ರೂಪಿಸಿದ ನಿಯಮಗಳನ್ನು ಮೀರಲಾರದ ಹೆಣ್ಣು ಅಂತರಂಗದಲ್ಲಿ ನರಳುವುದನ್ನು ಅವಳ ಅನಿಸಿಕೆಗಳೆಲ್ಲ ಕೇವಲ ಸ್ವಗತಗಳಾಗುವುದನ್ನು 'ಸೌಗಂಧಿಯ ಸ್ವಗತಗಳು ಕಥೆಯ ಸೌಗಂಧಿಯ ಪಾತ್ರದಲ್ಲಿ ಕಾಣಬಹುದು. ಸೌಗಂಧಿ ವಿದ್ಯಾವಂತೆಯಾದ, ಉದ್ಯೋಗಸ್ಥೆಯಾದ, ಸಾಕಷ್ಟು ಸುಂದರವಾಗೂ ಇರುವ ಹುಡುಗಿಯಾದರೂ ಅವಿವಾಹಿತೆಯಗಿಯೇ ಉಳಿದಿರುವ ನತದೃಷ್ಟೆ ಪರಿಸ್ಥಿತಿಯ ಒತ್ತಡದಿಂದ ಆಕೆ ಅವಿವಾಹಿತಳಾಗಿಯೇ ಉಳಿದರೂ ಮನುಷ್ಯ ಸಹಜವಾದ ಕಾಮನೆಗಳು ಅವಳಲ್ಲೂ ಇವೆ. ಹಾಗೆಂದು ಆಕೆ ತನ್ನ ಕಾಮನೆಗಳನ್ನು ಈಡೇರಿಸಿಕೊಳ್ಳಲು ಅಡ್ಡದಾರಿ ಹಿಡಿಯುವ ಹೆಣ್ಣಲ್ಲ. ಏಕೆಂದರೆ ಒಳ್ಳೆಯ ನಿಯತ್ತಿನ ಹುಡುಗಿ ಎಂದು ಗುರುತಿಸಿಕೊಂಡಿರುವ ಹುಡುಗಿ. "ನಿಮ್ಮ ಹುಡುಗಿಯೇನೋ ಒಳ್ಳೆಯವಳೇ ಮುಖ ನೋಡಿದರೇ ತಿಳಿಯುತ್ತದೆ. ಆದರೆ ಪ್ರಪಂಚ ನಿಮಗೆ ಗೊತ್ತಲ್ಲ ಒಳ್ಳೆಯವರಾಗಿರಲು ಬಿಡುವುದಿಲ್ಲ. ಸ್ನೇಹದ ಹೆಸರಿನಲ್ಲಿ.... ಎಂದು ಮನೆಯೊಡತಿ ಅನುಮಾನ ವ್ಯಕ್ತಪಡಿಸಿದಾಗ "ಛೆಛೆ! ನಮ್ಮ ಸೌಗಂಧಿಯೇ ಗಂಡಸರ ನೆರಳನ್ನೂ ಹತ್ತಿರ ಸೇರಿಸದವಳು. ಅಷ್ಟು ನಿಯತ್ತಿನ ಹುಡುಗಿಯಾದ್ದರಿಂದ ನನಗೆ ಇಷ್ಟು ಧೈರ್ಯ" ಎಂದ ಸೌಗಂಧಿಯ ತಂದೆಯ ಮಾತು ಸೌಗಂಧಿಯು ಎಂತಹ ಹುಡುಗಿ ಎಂಬುದನ್ನು ಸೂಚಿಸುತ್ತದೆ. ಈ ರೀತಿ ಹೇಳಿಯೇ ನಯವಾಗಿ ಸೌಗಂಧಿಯನ್ನು ಕಟ್ಟಿಹಾಕಲಾಗಿದೆ. ಆದರೆ ಭಾವನೆಗಳಿಗೆ ಕಡಿವಾಣ ಹಾಕಲು ಸಾಧ್ಯವೇ? ಅವು ಸ್ವತಂತ್ರವಾಗಿ ಅಂತರಂಗದಲ್ಲಿ ವಿಹರಿಸುವಂತಹವು. ಒಳ್ಳೆಯ ಹುಡುಗಿ ಎಂಬ ಎಲರ ನಿರೀಕ್ಷೆ, ಮದುವೆಯಾಗದವಳು ಎಂದು ತಂದೆ, ತಾಯಿ, ಸಮಾಜ ತೋರುವ ಕರುಣೆ ಹಾಗೂ ಅವಳ ಅಂತರಂಗದ ಭಾವನೆಗಳ ನಡುವೆ ನಡೆಯುವ ಘರ್ಷಣೆ ಅವಳನ್ನು ಅಂತರ್ಮುಖಿಯಾಗಿ ಮಾಡುವುದರ ಜೊತೆಗೆ ಎಲ್ಲರಿಂದ ದೂರವಾಗಿ ಒಬ್ಬಂಟಿಯಾಗಿ ಬದುಕಬೇಕೆಂಬ ಭಾವನೆಯನ್ನು ಹುಟ್ಟುಹಾಕಿದೆ.

ಒಳ್ಳೆಯವರೋ ಕೆಟ್ಟವರೋ ಮನುಷ್ಯ ಸಹಜ ಕಾಮನೆಗಳು ಎಲ್ಲರನ್ನೂ ಬಾಧಿಸುತ್ತವೆ. ಮರ್ಯಾದಸ್ಥ ಮನೆತನದ ಹುಡುಗಿ ಎಂಬ ಆವರಣದಿಂದ ಹೊರಬರಲು ಆಗದೆ ತನ್ನ ಕಾಮನೆಗಳನ್ನು ನಿಗ್ರಹಿಸಲು ಆಗದೆ ತೊಳಲಾಡುವ ಸೌಗಂಧಿಯ ಅಂತರಂಗವನ್ನು ಒಂದು ಹೆಣ್ಣಾಗಿ ವೈದೇಹಿಯವರು ಸೂಕ್ಷ್ಮವಾಗಿ ಗ್ರಹಿಸಿದ್ದಾರೆ. "ಮರ್ಯಾದಸ್ಥ ಮನೆಯವಳು ತಾನು. ಮರ್ಯಾದೆ ಬಿಡುವ ತಾಕತ್ತಿಲ್ಲ. ಯಾರಾದರೂ ತೆಗೆಯಬೇಕಷ್ಟೆ. ತನಗೀಗ ಅನುಭವ ಬೇಕು. ಆವರಣದ ಕಾಪಟ್ಯ ಕಳೆಯಬೇಕು. ಅನಾವರಣಗೊಳ್ಳಬೇಕು ಹೇಗೆಂದರೆ ಯಾರೂ ತನ್ನ ಬಗ್ಗೆ ಕೆಟ್ಟದೆಣಿಸದಂತೆ". ಸೌಗಂಧಿಯ ಅಂತರಂಗದ ಈ ಮಾತುಗಳು ಅವಳ ತೊಳಲಾಟವನ್ನು ಸಮರ್ಥವಾಗಿ ಚಿತ್ರಿಸುತ್ತವೆ. ಸೌಗಂಧಿ, ಯಶಿಯಂತಹ ಪಾತ್ರಗಳು ಹೆಣ್ಣಿನ ಮೇಲೆ ಸಂಪ್ರದಾಯದ ಹಿಡಿತ ಎಷ್ಟು ಬಿಗಿಯಾಗಿದೆ ಎಂಬುದನ್ನು ಸೂಚಿಸುತ್ತದೆ.

ಸಂಪ್ರದಾಯದ ಚಿಪ್ಪಿನಲ್ಲಿ ಬಂಧಿಯಾದ ಹೆಣ್ಣುಮಕ್ಕಳಂತೆ ಸಂಪ್ರದಾಯಕ್ಕಿಂತ ತಮ್ಮ ಮನದ ಭಾವನೆಗೆ ಬೆಲೆ ಕೊಡುವ ಅದಕ್ಕಾಗಿ ವ್ಯವಸ್ಥೆಯೊಡನೆ ಸಂಘರ್ಷಕ್ಕಿಳಿಯುವ ಹೆಣ್ಣುಮಕ್ಕಳೂ ವೈದೇಹಿಯವರ ಕಥೆಗಳಲ್ಲಿ ಬರುತ್ತಾರೆ. 'ಅಂತರಂಗದ ಪುಟಗಳು' ಕಥೆಯ ಅಚಲ ತನ್ನ ಮನದ ಭಾವನೆಗಳಿಗೆ ಬೆಲೆ ಕೊಡುವ ತನ್ನ ಅಸ್ತಿತ್ವದ ಅರಿವಿರುವ ದಿಟ್ಟ ಹೆಣ್ಣು. ಫ್ರಿಡ್ಜ್, ಫ್ಯಾನ್, ಟೇಬಲ್, ಪಾತ್ರೆಪರಡಿ, ಸೈಟ್ ಇತ್ಯಾದಿ ಭೋಗ ವಸ್ತುಗಳಂತೆ ಹುಡುಗಿಯೂ ಬೇಕು ಎಂಬ ಗಂಡಿನ ಧೋರಣೆಯನ್ನು ಧಿಕ್ಕರಿಸಿ ಹಿರಿಯರ ಮಾತಿಗೆ ಕಟ್ಟುಬಿದ್ದು ತನ್ನ ಮನಸೊಪ್ಪದ ಹುಡುಗನನ್ನು ಮದುವೆಯಾಗಲು ಒಪ್ಪದೆ ಕನ್ಯಯಾಗಿಯೇ ಉಳಿಯುವ ಅಚಲ ನಿರ್ಧಾರದ ಹೆಣ್ಣು "ಮದುವೆಯಾದರೆ ಎಂತಹವನನ್ನು ಗೊತ್ತುಂಟ? ಅವನನ್ನು ಒರಗಿದರೆ ಸಾಕು, ಆಹ! ಎನಿಸುವಂತಿರಬೇಕು" ಎಂಬ ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆ ಮಾಡಿಕೊಳ್ಳದ ಅವಳ ದೃಢತೆ ನಿಜಕ್ಕೂ ಮೆಚ್ಚುವಂತಹುದು.

ತನ್ನ ಪಾಲಿಗೆ ಬಂದದ್ದನ್ನು ತನ್ನ ಹಣೆಬರಹ ಎಂದು ಒಪ್ಪಿಕೊಳ್ಳುತ್ತಿದ್ದ ಹೆಣ್ಣು ಇಂದು ತನ್ನ ಯೋಗ್ಯತೆಯ ಅರಿವಿರುವ ಹೆಣ್ಣಾಗಿ ತನ್ನ ಪಾಲಿಗೆ ಬಂದದ್ದನು ಒಪ್ಪಿಕೊಳ್ಳದೆ ಪ್ರಶ್ನಿಸುವ ಛಾತಿಯನ್ನು ಬೆಳೆಸಿಕೊಂಡಿದ್ದಾಳೆ ಅದಕ್ಕಾಗಿ ವ್ಯವಸ್ಥೆಯೊಡನೆ ಸಂಘರ್ಷಕ್ಕೂ ಇಳಿಯುತ್ತಾಳೆ. 'ಪುಟ್ಟಮ್ಮತೆ ಮತ್ತು ಮೊಮ್ಮಗಳು' ಕಥೆಯ ಕಮಲಾವತೀ ಚಿಕ್ಕ ವಯಸ್ಸಿನಲ್ಲೇ ತಾಯಿಯನ್ನು ಕಳೆದುಕೊಂಡು ಅಜ್ಜಿ ಪುಟ್ಟಮ್ಮತ್ತೆಯ ಆಶ್ರಯದಲ್ಲಿ ಬೆಳೆದವಳು. ಪುಟ್ಟಮ್ಮತೆ ಇನ್ನೊಬ್ಬರ ಮನೆಯಲ್ಲಿ ಕೇವಲ ಹೊಟ್ಟೆಪಾಡಿಗಾಗಿ ದುಡಿಯುತ್ತಿದ್ದವಳು. ತಾನು ದುಡಿದದ್ದಕ್ಕೆ ಎಂದೂ ದುಡ್ಡು ಕೇಳಿದವಳಲ್ಲ. ಆದರೆ ಕಮಲಾವತಿ ದುಡಿದದ್ದಕ್ಕೆ ದುಡ್ಡು ಕೇಳಿದರೆ ತಪ್ಪೇನು? ಎಂದು ಪ್ರಶ್ನಿಸುವ ದಿಟ್ಟೆ ನಮ್ಮ ದುಡಿಮೆಗೆ

ತಕ್ಕ ಪ್ರತಿಫಲ ನಮಗೆ ಸಿಗಬೇಕು ಎಂಬ ಅರಿವನ್ನು ಹೊಂದಿರುವವಳು. ತನ್ನ ಬಡತನದ ಕಾರಣವಾಗಿ ತನ್ನ ರೂಪ ಮತ್ತು ಯೋಗ್ಯತೆಗೆ ತಕ್ಕ ಗಂಡು ಸಿಗುವುದಿಲ್ಲ ಎಂಬ ನೋವು, ಹತಾಶೆಯಿಂದ ನರಳಿದರೂ ತನ್ನ ಹಣೆಬರಹ ಎಂದು ಕೈಕಟ್ಟಿ ಕುಳಿತುಕೊಳ್ಳುವ ಹೆಣ್ಣಲ್ಲ. ತನ್ನ ಮನ ಬಯಸುವ ಸಂಗಾತಿ ಸಿಗದಿದ್ದರೂ ತಾನು ಆರ್ಥಿಕವಾಗಿ ಸ್ವಾವಲಂಬಿಯಾಗಿ, ಸ್ವತಂತ್ರವಾಗಿ ಬದುಕಬೇಕು ಎಂಬ ಹಂಬಲವನ್ನು ಹೊಂದಿದವಳು.

ತನ್ನನ್ನು ಪ್ರೀತಿಸುವ ಜೀವವನ್ನು ಮುಗ್ಧವಾಗಿ ಪ್ರೀತಿಸುವ ಮತ್ತು ಆ ಪ್ರೀತಿಗೆ ಪ್ರಾಮಾಣಿಕವಾಗಿರುವ ಹೆಣ್ಣುಮಕ್ಕಳನ್ನು ವೈದೇಹಿಯವರ ಕಥೆಗಳಲ್ಲಿ ಕಾಣುತ್ತೇವೆ 'ಬದುಕೆಲ್ಲ ಜೆದಕಾಟ ಕಥೆಯ ಅಂಜು ಮದುವೆಯಾದ ಆರು ತಿಂಗಳಿಗೇ ಗಂಡನನ್ನು ಕಳೆದುಕೊಂಡು ವಿಧವೆಯಾಗಿ ಆತನ ನೆನಪಿನಲ್ಲೇ ತೊಳಲಾಡುತ್ತಿರುತ್ತಾಳೆ. ಆತ ಬದುಕಿದ್ದಾಗ ಅವನ ಪ್ರೀತಿ ಮಳೆಯಲ್ಲಿ ಮಿಂದು ಸಂತೋಷಸಾಗರದಲ್ಲೇ ಮುಳುಗಿದವಳು. ಅವಳ ಗಂಡನ ಎದೆಯಲ್ಲಿ ಮುಖವಡಗಿಸಿ "ನೀನಿಲ್ಲದೆ ನಾನಿಲ್ಲ...... ನೀವಿರದೆ ಒಂದು ಕ್ಷಣವೂ ನಾನು ಈ ಜಗತ್ತಿನಲ್ಲಿರಲಾರೆ" ಎನ್ನುತ್ತಿದ್ದ ಆದರೆ ಅವರು ಸತ್ತರೂ "ನಾನೇಕೆ ಸಾಯಲಿಲ್ಲ, ಒಂದು ಕ್ಷಣ ಅಜಿಟ್ಟಿರಲಾರೆ ಎಂದವಳು ಕಳೆಯುತ್ತಿರುವೆನಲ್ಲ! ಒಂದಲ್ಲ ಎಷ್ಟೋ ಕ್ಷಣಗಳನ್ನು, ನಾನು ವಂಚಿಕಿಯಲ್ಲವೇನು?" ಎಂಬ ಪಾಪಪ್ರಜ್ಞೆಯಲ್ಲಿ ನರಳುವ ಮುಗ್ಧೆ. ಕೊನೆಗೆ ತನ್ನನ್ನು ಅಷ್ಟೊಂದು ಪ್ರೀತಿಸುತ್ತಿದ್ದ ಗಂಡನಿರದ ಪ್ರಪಂಚದಲ್ಲಿ ಇರಲಾರದೆ ಆತ್ಮಹತ್ಯೆ ಮಾಡಿಕೊಂಡು, ತಾನು ನುಡಿದಂತೆ ನಡೆದು ಪ್ರಾಮಾಣಿಕ ಪ್ರೀತಿಯನ್ನು ಎತ್ತಿಹಿಡಿದವಳು.

'ಪದವೀಧರ' ಕಥೆಯ ಪದವೀಧರನು ಓದುವ ವಯಸ್ಸಲಿ ಓದದೆ ಲಂಚ ನೀಡಿ ಪದವೀಧರನಾದರೂ ಆತನ ಹೆಂಡತಿ ಅವನನ್ನು ನಿಜವಾದ ಪದವೀಧರನೆಂದೇ ನಂಬುವ ಮುಗ್ಧೆ ತಾನು ವಿದ್ಯಾವಂತನ ಹೆಂಡತಿ ಎಂದು ಹೆಮ್ಮೆ ಪಡುವ ಆಕೆಗೆ ಆತ ಸರಿಯಾಗಿ ಓದಲು ಬರೆಯಲು ಬಾರದವನು ಎಂಬುದು ತಿಳಿಯದು. ತನ್ನ ಬಾಣಂತನಕ್ಕೆಂದು ತವರುಮನೆಗೆ ಹೋದಾಗ ತನ್ನ ಗಂಡ ತಪ್ಪು ತಪ್ಪಾಗಿ ಬರೆದ ಪತ್ರವನ್ನು ತಮಾಷೆಯೆಂದು ನಂಬುವಷ್ಟು ಮುಗ್ಧತನದಿಂದಲೇ ತನ್ನ ಗಂಡನಿಗೆ ತನ್ನ ತಪ್ಪಿನ ಅರಿವಾಗುವಂತೆಮಾಡಿ ಅವನು "ನನ್ನ ಸಾಚಾ ಪತ್ರವನ್ನೇ ತಮಾಷೆಯೆಂದು ನಂಬಲು ಆಸೆಪಡುವ, ನನ್ನನ್ನು ಇನ್ನೂ ಮೇಲಕ್ಕೆ ಇರಿಸುವ ಅವಳ ದೃಷ್ಟಿಯಿಂದ ಖಂಡಿತ ನಾನು ಕೆಳಗಿಳಿಯಲಾರೆ ಆದರೆ ಇಳಿಯದಿರಲು ನನ್ನಿಂದ ಸಾಧ್ಯವಾದೀತೆ? ಎಂದು ನೊಂದುಕೊಳ್ಳುವಂತೆ ಮಾಡುತ್ತಾಳೆ.

ಅವಿದ್ಯಾವಂತೆಯಾದರೂ ಸಾಲಸೋಲವಿಲ್ಲದೆ ಸಂಸಾರವನ್ನು ಚೊಕ್ಕವಾಗಿ ನಿರ್ವಹಿಸಬಲ್ಲ ಜಾಣೆ ವೈದೇಹಿಯವರ ಹೆಣ್ಣು ತಾನು ವಿದ್ಯಾವಂತರಿಗಿಂತ ಏನೂ ಕಡಿಮೆ ಇಲ್ಲ ಎಂಬ ತನ್ನ ಕೊರತೆಯನ್ನು ಮೀರಿ ನಿಲ್ಲಬಲ್ಲ ಆತ್ಮವಿಶ್ವಾಸ ಆಕೆಗಿದೆ. ಆಕೆ ಎಷ್ಟು ಮುಗ್ಧೆಯೋ ಅಷ್ಟೇ ಚಾಣಾಕ್ಷೆ ತನ್ನ ಸಂಸಾರ ಮತ್ತು ಮಕ್ಕಳು ನಾಲ್ಕು ಜನರಿಗೆ ಸಮಾನವಾಗಿ ಇರಬೇಕು. ಅದರಲ್ಲೂ ಹೆಣ್ಣು ಮಕ್ಕಳಿಗೆ ಚಿನ್ನಬೆಳ್ಳಿ ಇದ್ದರೆ ಅವರ ಮದುವೆ ಮಾಡವುದಕ್ಕೆ ಅನುಕೂಲ ಎಂದು ಭಾವಿಸುವ ಆಕೆ ಅದಕ್ಕಾಗಿ ತಾನೂ ದುಡಿದು ಹೊಟ್ಟೆ-ಬಟ್ಟೆ ಕಟ್ಟಿ ಅಲ್ಪಸ್ವಲ್ಪ ಉಳಿಸುತ್ತಾಳೆ.

'ಓ ಜಗತ್ತೇ!' ಕಥೆಯ ಮಾಧು ಬಡವಿಯಾದರೂ ಜಾಣ್. ಹಿರಿಯ ಮಗ ಗೋವಿಂದ ಹಾಗೂ ಐದು ಜನ ಹೆಣ್ಣು ಮಕ್ಕಳನ್ನು ಕಟ್ಟಿಕೊಂಡು ಸಂಸಾರ ಸರಿದೂಗಿಸಲು ಆಕೆ ಪಡುವ ಪಾಡು ಹೇಳತೀರದು. ಅಂದು ದುಡಿದದ್ದು ಅಂದಿಗೆ ಅನ್ನುವಂತಿದ್ದರೂ ದುಡಿದಿದ್ದರಲ್ಲಿ ತನ್ನ ಮಗ ಹಾಗೂ ಮನೆಯವರಿಗೆ ಕಾಣದಂತೆ ಸ್ವಲ್ಪ ಹಣ ಉಳಿಸಿ ಹಿರಿಯಮಗಳು ವೆಂಕನಿಗೆ ಮೂಗುಬೊಟ್ಟು ಓಲೆ ಮಾಡಿಸಿ ಮಗ ಕೇಳಿದಾಗ "ಚಿಲ್ಲರೆ ಪಲ್ಲರೆ ಕೆಲಸಗಳಿಗೆ ಅಮ್ಮ ಕೊಟ್ಟ ದುಡ್ಡಿನಿಂದ ಮಾಡಿಸಿದೆ ಎಂದು ಮಾತು ಹಾರಿಸುವ ಮಾಧು "ಈ ಗಂಡು ಮಕ್ಕಳಿಗೆ ಪೂರಾ ಗುಟ್ಟು ಬಿಟ್ಟುಕೊಟ್ಟರೆ ನಾವು ಉಳಿಸಿದಂತೆ; ನಮ್ಮ ಹೆಣ್ಣು ಮಕ್ಕಳು ಚಿನ್ನ ಬಣ್ಣ ಕಂಡಂತೆ" ಎಂದು ಬಲ್ಲ ಚಾಣಾಕ್ಷೆ. "ಸಾಲಸೋಲವಿಲ್ಲದೆ ಆಯವ್ಯಯಗಳನ್ನು ಅಲ್ಲಿಂದಿಲ್ಲಿಗೆ ಮುಟ್ಟಿಸಿ ಅಚ್ಚುಕಟ್ಟಾಗಿ ತನ್ನ ಬದುಕನ್ನು ನಡೆಸುತ್ತಿದ್ದ ಮಾಧುವಿನ ಆದರ್ಶ ಎಷ್ಟು ಸುಧಾರಿತ ಜನರಿಗಿದೆ" ಎಂಬ ಮಾಧುವಿನ ಯಜಮಾನಿಯ ಮಾತು ಮಾಧುವಿನ ವ್ಯಕ್ತಿತ್ವವನ್ನು ಸೂಚಿಸುತ್ತದೆ.

'ಒಂದು ಅಪರಾಧ ತನಿಖೆ' ಕಥೆಯ ಬಾಬಿ ವಾಚಾಳಿಯಾದರೂ ತುಂಬಾ ಬುದ್ಧಿವಂತೆ. ತನ್ನ ಗಂಡನಿಗೆ ಕಾಣದಂತೆ ಹಾಲುಮಾರಿ ನಾಲ್ಕು ಕಾಸು ಸಂಪಾದಿಸಿ ಒಡವೆ ವಸ್ತು ಮಾಡಿಸುವ ಜಾಣೆ ಗಂಡಸರ ಕೈಕಾದರೆ ನಮಗಿದೆಲ್ಲ ಉಂಟಂತ ಮಾಡಿದರ ಗೌರಕ್ಕ? ನಮ್ಮ ಕೈಚಳಕಬೇಕು. ಸುಳ್ಳ?" ಎಂದು ಬಾಬಿ ಗೌರಕ್ಕನೊಂದಿಗೆ ಹೇಳುವ ಮಾತು ಅವಳು ಎಂತಹ ಸೂಕ್ಷ್ಮಮತಿ ಎಂಬುದನ್ನು ತೋರಿಸುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಆತನೇ ಪ್ರಧಾನ, ಆತ ನಡೆದದ್ದೇ ದಾರಿ. ಆತನ ಮೋಸಕ್ಕೆ ಒಳಗಾದ ಹೆಣ್ಣು ಮಕ್ಕಳ ಸಂಖ್ಯೆ ಕಡಿಮೆ ಇಲ್ಲ ಹೆಣ್ಣು ಸಹನಶೀಲೆ, ಕ್ಷಮಯಾಧರಿತ್ರಿ ಎಂದೆಲ್ಲ ಹೊಗಳಿ ಅಟ್ಟಕ್ಕೇರಿಸಿ ಆಕೆಯ ಮೇಲೆ ಎಸಗುತ್ತಿರುವ ದೌರ್ಜನ್ಯ ಅಷ್ಟಿಷ್ಟಲ್ಲ ಆದರೆ ಹೆಣ್ಣು ಗಂಡಿಗಿಂತ ದಿಟ್ಟೆ. ಬದುಕನ್ನು ಬಂದ ಹಾಗೆ ಸ್ವೀಕರಿಸಿ ಬಂದದ್ದೆಲ್ಲವನ್ನು ಸಹಿಸಿಕೊಂಡು ಬದುಕುವ ಮೂಲಕ

ಬದುಕಿಗೇ ಸವಾಲೆಸೆಯುವ ಗಟ್ಟಿಗಿತ್ತಿ ಗಂಡಿನ ಮೋಸಕ್ಕೆ ಒಳಗಾಗಿಯೂ ಬದುಕಿಗೆ ವಿಮುಖರಾಗದೆ ದಿಟ್ಟತನದಿಂದ ಬದುಕುವ ಹೆಣ್ಣುಮಕ್ಕಳನ್ನು ವೈದೇಹಿಯವರ ಕಥೆಗಳಲ್ಲಿ ಕಾಣಬಹುದು.

'ಭೂತ' ಕಥೆಯ ಪಾರ್ವತಿ ಶಾಲೆಯಲ್ಲಿ ಓದದೆ ಇದ್ದರೂ ಬದುಕಿನ ಶಾಲೆಯಲ್ಲಿ ಜೀವನಪಾಠವನ್ನು ಕಲಿತವಳು. ಮನೆ, ತೋಟ ಎರಡೂ ಕಡೆ ದುಡಿಯಬಲ್ಲ ಶ್ರಮಜೀವಿ. ಈ ಮೊದಲೇ ಮದುವೆಯಾಗಿದ್ದ ಅವಳ ಗಂಡ ಎರಡು ಹೆಣ್ಣು ಮಕ್ಕಳ ಸಹಿತ ಪಾರ್ವತಿಯನ್ನು ತವರಿಗೆ ಕಳುಹಿಸಿ ನಾಪತ್ತೆಯಾದ ಗಂಡನಿಂದ ಮೋಸ ಹೋದರೂ ಗೋಳಾಡದೆ ತನ್ನ ದುಃಖವನ್ನು ಮನದಲ್ಲೇ ನುಂಗಿ ಎರಡು ಹೆಣ್ಣು ಮಕ್ಕಳನ್ನು ಕಟ್ಟಿಕೊಂಡು ಧೈರ್ಯವಾಗಿ ಬದುಕನ್ನು ಎದುರಿಸುವ ಪಾರ್ವತಿ ಸುಖದುಃಖ ಎರಡನ್ನೂ ನಿರ್ಲಿಪ್ತತೆಯಿಂದ ಸ್ವೀಕರಿಸುವ ಪ್ರಬುದ್ಧೆ "ಅದಕ್ಕೆ ಮದುವೆ ಅಂದ್ ಹಿಗ್ಗೂ ಇದ್ದಿಲ್ಲೇ ಒಂದು ದಿನ ಹೀಗಾಯಿತು ನನ್ನ ಕತೆ ಎಂದು ಕಣ್ಣಲ್ಲಿ ನೀರು ಹಾಕಿದ ಹೇಳು. ಒಂದು ಜಾತಿ ಭೂತ ಅದು!" ಎಂದು ಪಾರ್ವತಿಯ ತಾಯಿ ಹೇಳುವ ಮಾತುಗಳಲ್ಲಿ ಪಾರ್ವತಿಯ ವ್ಯಕ್ತಿತ್ವವೇ ಮೈದಳೆದಂತಿದೆ.

'ಒಂದು ಅಪರಾಧ ತನಿಖೆ' ಕಥೆಯ ಬಾಬಿ ಕೂಡ ಗಂಡಿನ ಮೋಸಕ್ಕೆ ಒಳಗಾಗಿಯೂ ಧೈರ್ಯವಾಗಿ ಬದುಕನ್ನು ಎದುರಿಸಿದ ಹೆಣ್ಣು. ತನ್ನ ಗಂಡ ಈ ಮೊದಲೇ ಮದುವೆಯಾಗಿದ್ದವನು ಜೊತೆಗೆ ಸ್ತ್ರೀಲಂಪಟ ಬೇರೆ ಎಂಬ ವಿಷಯ ಮದುವೆಯ ನಂತರ ಬಾಬಿಗೆ ತಿಳಿದರೂ ತನ್ನ ಬಡತನದ ಕಾರಣ ಅಸಹಾಯಕಳಾಗಿ ಅವನನ್ನು ಒಪ್ಪಿಕೊಳ್ಳಬೇಕಾಗಿ ಬಂದರೂ, ತನ್ನ ಗಂಡನೊಡನೆ ಹೊಡೆದಾಡಿ ಆತನನ್ನು ಸರಿದಾರಿಗೆ ತರಲು ಪ್ರಯತ್ನಿಸುವ ಬಾಬಿಯ ಪಾಡು ಹೇಳತೀರದು. "ಚಿನ್ನವನ್ನು ಅವನು (ಬಾಬಿಯ ಗಂಡ) ಇವಳಿಗೆಂತ ಮಾಡಿಸಿ ಯಾವಳಿಗೋ ತೆಗೆದುಕೊಟ್ಟದ್ದು, ಇವಳು ಅವಳ ಮನೆ ಬಾಗಿಲಿಗೇ ಹೋಗಿ ಬಾಯಿ ಮಾಡಿ ಅದನ್ನು ವಾಪಸ್ಸು ಪಡೆದಿದ್ದು, ಮಂತ್ರವಾದಿಯ ಹತ್ತಿರ ಗಂಡ ಸೂಳೆ ಮನೆಗೆ ಹೋಗದಂತೆ ಮಾಟ ಮಾಡಿಸಿದ್ದು, ಅವತ್ತಿನಿಂದ ತಾನು ಕೂತುಕೋ ಎಂದರೆ ಕೂತು, ನಿಲ್ಲು ಎಂದರೆ ನಿಲ್ಲುವಂತೆ ತನ್ನ ಗಂಡ ಆದದ್ದು". ಎಲ್ಲವನ್ನೂ ಕಥೆಯ ರೂಪದಲ್ಲಿ ಹೇಳುವ ಬಾಬಿಯ ಪಾಡು ಹಾಸ್ಯಾಸ್ಪದವಾಗಿ ಕಂಡರೂ ಅವಳ ಧೈರ್ಯವನ್ನು ಮೆಚ್ಚಬೇಕಾದದ್ದೆ.

'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯ ಸೂಲಗಿತ್ತಿ ಲಿಲ್ಲಿಬಾಯಿ ಅವರಿವರ ಮನೆಯಲ್ಲಿ ಬಾಣಂತನದ ಕೆಲಸಮಾಡಿ ಜೀವನ ಸಾಗಿಸುವವಳು. "ಆಕೆಗೆ ಮುಂಚಿನಿಂದಲೂ ಬೇಗ ಶ್ರೀಮಂತಳಾಗಬೇಕೆಂಬ ಆಸೆ." ಆದರೆ "ಅವಳ ಗಂಡ ಕಲಾಯಿನಾಯಕ ದುಡ್ಡು ದುಡಿಯುವುದರಲ್ಲಿ

ದಷ್ಟ" ಪಾತ್ರೆಗೆ ಕಲಾಯಿ ಹಾಕುವ ಆತ ಮಜೂರಿ ಇಂತಿಷ್ಟು ಎಂದೂ ಕಟ್ಟುನಿಟ್ಟಾಗಿ ಹೇಳದೆ ಕೊಟ್ಟಷ್ಟು ತೆಗೆದುಕೊಳ್ಳುವವ. ಅಂತಹ ಗಂಡನನ್ನು ಕಟ್ಟಿಕೊಂಡು ತಾನು ಶ್ರೀಮಂತಳಾಗುವ ಆಕೆಯ ಕನಸು ಈಡೇರುವುದು ಹೇಗೆ? ಅದೂ ಅಲ್ಲದೆ ಕೆಲವರು ಊರಿನಿಂದ ಒಂದಷ್ಟು ದಿನ ಹೊರಹೋಗಿ ಶ್ರೀಮಂತರಾಗಿ ಬಂದದ್ದನ್ನು ಕಣ್ಣಾರೆ ಕಂಡಿದ್ದ ಅಲ್ಲಿಬಾಯಿಗೆ ತನ್ನ ಗಂಡನ ಬಗ್ಗೆ ಬೇಸರ. ತನ್ನ ಗಂಡನೂ ಎಲ್ಲಾದರೂ ಹೋಗಿ ಚೆನ್ನಾಗಿ ಸಂಪಾದಿಸಲಿ ಎಂದು ಬಯಸುವ ಆಕೆ "ಇದು ಕಲಿ ಊರು. ಇಲ್ಲೇ ಇದ್ದರೆ ಬರ್ಕತ್ತಿಲ್ಲ. ಒಂದಷ್ಟು ಸಮಯ ಎಲ್ಲಾದರೂ ಹೋಗಬೇಕು. ಮತ್ತೆ ಬರಬೇಕು ಎಲ್ಲ ಒಳ್ಳೆಯದಾಗುತ್ತದೆ" ಎನ್ನುವ ಜೊತೆಗೆ "ಸ್ವಲ್ಪ ಆಚೆ ಈಚೆ ಮಾಡುವುದನ್ನೂ ಕಲಿಯಬೇಕು" ಎಂದು ಗಂಡನಿಗೆ ಹರಾಮಖೋರತನವನ್ನೂ ಬೋಧಿಸಲು ಯತ್ನಿಸುತ್ತಾಳೆ. ಹರಾಮಖೋರತನದಿಂದಲಾದರೂ ಸರಿ ಶ್ರೀಮಂತಳಾಗಬೇಕೆಂದು ಬಯಸುವವಳು ಲಿಲ್ಲಿಬಾಯಿ. ಅವಳ ಹಿಂಸೆ ತಾಳಲಾರದೆ ಗಂಡ ಓಡಿಹೋದರೂ "ತಾನಾದರೂ ಏನಾದರೂ ಮಾಡಿ ದೊಡ್ಡವಳಾಗಬೇಕು" ಎಂಬ ಆಸೆ ಅವಳಿಗೆ. ಮುಂದೆ ಗುಲಾಬಿಟಾಕೀಸು ಅವಳ ಊರಿಗೆ ಬಂದಾಗ ಅಲ್ಲಿ ಬಾಯಿಗೆ ಮಹಿಳೆಯರ ಕಡೆಯ ಗೇಟ್ ಕೀಪರ್ ಕೆಲಸ ದೊರೆತದ್ದು ಸಿನೆಮಾ ಹುಚ್ಚಿನ ಅಲ್ಲಿಬಾಯಿಯ ಅದೃಷ್ಟದ ಬಾಗಿಲೇ ತೆರೆದಂತಾಯಿತು. ತನ್ನ ಸಿನೆಮಾ ಹುಚ್ಚು ತೀರುವುದರ ಜೊತೆಗೆ ಹಣ ಸಂಪಾದನೆಗೂ ದಾರಿಯಾಯಿತು. ಹೇಗಾದರೂ ಮಾಡಿ ಹಣ ಸಂಪಾದಿಸಿ ಬೇಗ ಶ್ರೀಮಂತಳಾಗುವ ಕನಸಿನ ಲಿಲ್ಲಿಬಾಯಿ ಎರಡು ಟಿಕೇಟಿಗೆ ನಾಲ್ಕು ಜನರನ್ನು ಬಿಡುವ ಹಾಗೂ ಒಬ್ಬರ ನಂತರ ಒಬ್ಬರನ್ನು ಬೇಗ ಬೇಗ ನೂಕಿಬಿಡುವ, ನಂತರ ಸಿನಿಮಾ ಶುರುವಾದ ಮೇಲೆ ಆ ಇಬ್ಬರಿಗೆ ಕೊಡಬೇಕಾದ ಟಿಕೇಟಿನ ಅರ್ಧ ಹಣವನ್ನು ಅವರು ಕುಳಿತಲ್ಲಿಗೇ ಬಂದು ಕತ್ತಲಲ್ಲಿ ಗುಟ್ಟಾಗಿ ಪಡೆದುಕೊಳ್ಳುವ ಹರಾಮಖೋರತನದ ವಿದ್ಯೆಯನ್ನೂ ಕಲಿತಳು. ಇದರ ಫಲವಾಗಿ ಆಕೆಯ ಆರ್ಥಿಕ ಸ್ಥಿತಿ ಸ್ವಲ್ಪವೇ ಸುಧಾರಿಸಿತು. ತನ್ನ ಆಸೆಯನ್ನು ಈಡೇರಿಸಿಕೊಳ್ಳಬೇಕೆಂಬ ಲಿಲ್ಲಿಬಾಯಿಯ ಉತ್ಕಟತೆ ತೀವ್ರ. ಅದಕ್ಕಾಗಿ ತಪ್ಪು ಮಾರ್ಗ ಅನುಸರಿಸಿದರೂ ಚಿಂತೆಯಿಲ್ಲ. ಈ ವಿಷಯದಲ್ಲಿ ಲಿಲ್ಲಿಬಾಯಿ ಯಾವ ಗಂಡಸಿಗೂ ಕಡಿಮೆ ಇಲ್ಲ ಎನ್ನಬಹುದು.

ಹೊಸದಾಗಿ ಬಂದ ಸಿನೆಮಾ ಹೇಗಿದೆ ಎಂದು ತಾನು ನೋಡಿದ ಮರುದಿನವೇ ಹೇಳುವ ಲಿಲ್ಲಿಬಾಯಿ ಬಂದರೆ "ಪೇಪರ್ ಬಂತಲ್ಲ!" ಎಂದು ಜನ ಹಾಸ್ಯ ಮಾಡುವ ರೀತಿಯಲ್ಲೇ ಆಕೆಯ ಸಿನೆಮಾ ಹುಚ್ಚಿನ ಪರಿಚಯ ಆಗುತ್ತದೆ. ಆ ಮೂಲಕ ಇತರ ಹೆಂಗಸರಿಗೂ ಸಿನೆಮಾ ಹುಚ್ಚು ಒಡಿಸಿದ ಮನೆಯಿಂದ ಹೊರಬರಲೂ ಅಂಜುತ್ತಿದ್ದ ಹೆಂಗಸರು ಸಿನೆಮಾ ನೋಡಲು ಬರುವಂತೆ

ಮಾಡಿದ ಶ್ರೇಯಸ್ಸು ಲಿಲ್ಲಿಬಾಯಿಗೆ ಸಲ್ಲಬೇಕು ಹೆಂಗಸರು ಮನೆಯಿಂದ ಹೊರಬರಲೂ ಅಂಜುತ್ತಿದ್ದ ಊರಿನಲ್ಲಿ ಲಿಲ್ಲಿಬಾಯಿಯಂತ ಜೋರಿನ ಹೆಣ್ಣೂ ಇದ್ದದ್ದು ವೈಚರಿತ್ರವೇ ಸರಿ.

ಬೇಜವಾಬ್ದಾರಿ ಗಂಡನನ್ನು ಕಟ್ಟಿಕೊಂಡು ಹೆಣ್ಣು ಪಡುವ ಪಾಡು ಅಷ್ಟಿಷ್ಟಲ್ಲ ಗಂಡು ನಿರ್ವಹಿಸಬೇಕಾದ ಸಂಸಾರದ ಜವಾಬ್ದಾರಿಯನ್ನೆಲ್ಲ ಹೆಣ್ಣೇ ನಿರ್ವಹಿಸಬೇಕಾಗುತ್ತದೆ. 'ಹಕ್ಕಿಲ್ಲದವರು' ಕಥೆಯ ಸಿರಿಯ ಗಂಡ ಜವಾಬ್ದಾರಿ ಇಲ್ಲದವನು ಹೋಟಲು ದಿವಾಳಿ ಎಬ್ಬಿಸಿ ಆಸ್ತಿ ಮಾರಿ ತಿಂದು ತನ್ನ ಹೆಂಡತಿಮಕ್ಕಳನ್ನು ಬೀದಿಗೆ ತಂದವನು. ಅದೇ ಸಮಯಕ್ಕೆ ಪೇಟೆಯಲ್ಲಿ ಉದ್ಯೋಗದಲ್ಲಿದ್ದ ಅವಳ ಅಣ್ಣ ಊರಿನಲ್ಲಿ ಏಕಾಂಗಿಯಾಗಿರುವ "ಅಮ್ಮಂಗೆ ಒಂದು ಜತೆ ಇರಲಿ; ಅಪ್ಪ ಹೋದ ಮೇಲೆ ಒಬ್ಬಳೇ ಆಗಿದ್ದಾಳೆ. ಅಲ್ಲಿ ಆ ತೋಟ ನನಗೆ ಬೇಡ. ನನ್ನ ಸಂಪಾದನೆ ನನಗುಂಟು ನೀನೇ ಇರು" ಎಂದು ಹೇಳಿ ಊರಿನಲ್ಲಿ ಬಂದು ನೆಲೆ ನಿಲ್ಲುವಂತೆ ಮಾಡಿದ. ತನ್ನ ಗಂಡ ತನ್ನನ್ನು ಮಕ್ಕಳನ್ನು ಬಿಟ್ಟು ಓಡಿಹೋದರೂ ಧೃತಿಗೆಡದ ಸಿರಿ, ಹಾಳು ಬಿದ್ದಿದ್ದ ಅಪ್ಪನ ತೋಟದಲ್ಲಿ ಗಂಡಿನಂತೆ ದುಡಿದು ಅದನ್ನು ಸುಸ್ಥಿತಿಗೆ ತಂದ ಛಲಗಾರ್ತಿ "ಈ ಸಿರಿ ಮನೆಯ ಗಂಡಸು, ಗಂಡಸರೆಲ್ಲ ಹೆಂಗಸರಾದರೆ ಹೆಂಗಸರು ಗಂಡಸರಾಗಬೇಕಲ್ಲ" ಎಂಬ ಜಲಜಮಾಯಿಯ ಮಾತಿನಿಂದ ಸಿರಿಯ ಗಂಡು ವ್ಯಕ್ತಿತ್ವದ ಪರಿಚಯವಾಗುತ್ತದೆ. ಗಂಡು ತನ್ನ ಹೆಂಡತಿ, ಮಕ್ಕಳು, ಸಂಸಾರವನ್ನು ನಿರ್ಲಕ್ಷಿಸಿ ಜವಾಬ್ದಾರಿಯಿಂದ ತಪ್ಪಿಸಿಕೊಂಡು ಓಡಿ ಹೋಗಬಹುದು. ಆದರೆ ಹೆಣ್ಣು ಎಂದೂ ಜವಾಬ್ದಾರಿಯಿಂದ ದೂರ ಸರಿಯುವವಳಲ್ಲ ಏಕಾಂಗಿಯಾಗಿಯೇ ಸಂಸಾರ ರಥವನ್ನು ಎಳೆಯಬಲ್ಲ ಸಮರ್ಥೆ ಇಂತಹ ಎಷ್ಟೋ ಹೆಣ್ಣು ಮಕ್ಕಳು ವೈದೇಹಿಯವರ ಕಥೆಗಳಲ್ಲಿ ಬರುತ್ತಾರೆ.

ತನ್ನ ಗಂಡ ಮತ್ತು ವ್ಯವಸ್ಥೆಯ ಕಾರಣದಿಂದ ಮಾನಸಿಕ ಅಸ್ವಸ್ಥಳಾದ 'ಅಕ್ಕು' ಕಥೆಯ ಅಕ್ಕುವಿನ ಸ್ಥಿತಿ ಪುರುಷ ಪ್ರಧಾನ ವ್ಯವಸ್ಥೆಯ ಕ್ರೂರತೆಗೆ ಹಿಡಿದ ಕನ್ನಡಿ. ಸ್ತ್ರೀಲಂಪಟನಾದ ಅಕ್ಕುವಿನ ಗಂಡ ಆಕೆಯನ್ನು ಉಪೇಕ್ಷೆಮಾಡಿ ಸನ್ಯಾಸಿಯ ಹಿಂದೆ ಹೋದದ್ದರಿಂದ ಅಕೆಯ ತಾಯ್ತನದ ಕನಸು ಕನಸಾಗಿಯೇ ಉಳಿಯುತ್ತದೆ. ಈ ಹತಾಶೆ ಆಕೆಯ ಮಾನಸಿಕ ಅಸ್ವಸ್ಥತೆಗೆ ಕಾರಣವಾಗುತ್ತದೆ. ಮಾನಸಿಕ ಅಸ್ವಸ್ಥಳಾದ ಅಕ್ಕು ಬಸುರಿ ಪಾರ್ಟು ಮಾಡುವುದು, ಹೊಟ್ಟೆ ನೋವು ಎಂದು ನರಳುವುದು, ಮಗುಗೆ ಹಾಲುಣಿಸುವುದು ಅವಳ ಈಡೇರದ ಕನಸನ್ನು ಹೀಗಾದರೂ ಈಡೇರಿಸಿಕೊಳ್ಳುವ ಪ್ರಯತ್ನವಾಗಿದೆ. ಅಕ್ಕುವಿನ ಈ ಬಸುರಿಪಾರ್ಟು ಪ್ರತಿದಿನ ನಡೆದೇ ಇದೆ. "ಮರುದಿನವೇ ಅಕ್ಕು ಮತ್ತೆ ಬುಸುರಿಯಾಗಿದ್ದಳು. ಈ ಬಸುರು ಕಳೆಯುವುದೂ ಇಲ್ಲ ಗಂಡ ಬರುತ್ತಲೂ ಇಲ್ಲ" ಎಂಬುದು ಅವಳ ತಾಯ್ತನದ ಕನಸು ಕನಸಾಗಿಯೇ ಉಳಿಯುವುದನ್ನು ಸೂಚಿಸುತ್ತದೆ.

'ಅಮ್ಮಚ್ಚಿಯೆಂಬ ನೆನಪು' ಕಥೆಯ ಅಮ್ಮಚ್ಚಿ ತಂದೆಯನ್ನು ಕಳೆದುಕೊಂಡ ಗಂಡು ದಿಕ್ಕಿಲ್ಲದ ಎಳೆಯಹುಡುಗಿ. ಆದರೆ ಆಕೆ ತನ್ನತನವ ಅರಿವಿರುವ ಬಂಡಾಯ ಮನೋಭಾವದ ಹುಡುಗಿ. ಅನ್ಯಾಯವನ್ನು ಸಹಿಸದ, ಇದ್ದುದನ್ನು ಇದ್ದ ಹಾಗೆ ಮಾತನಾಡುವ ಜೀಸುಮಾತಿನವಳು ಅಮ್ಮಚ್ಚಿ. "ಅವಳ ಜೀಸುಮಾತಿಗೆ ಎಲ್ಲರೂ ಹೆದರುವವರೇ. ಅವಳ ಓರಗೆಯವರಂತೂ ಹತ್ತಿರ ಕೂಡ ಸುಳಿಯುತ್ತಿರಲಿಲ್ಲ". ತನ್ನ ಇಚ್ಛೆಯಂತೆ ಇರಲು ಬಯಸುವ ಸ್ವತಂತ್ರ ಮನೋಭಾವದವಳು. ಗಂಡು ದಿಕ್ಕಿಲ್ಲದ ಮನೆಗೆ ನೆರವಾಗಿ ಬಂದ ವೆಂಕಪ್ಪಯ್ಯ ಕ್ರಮೇಣ ಅಮ್ಮಚ್ಚಿ ತನ್ನ ಸ್ವತ್ತು ಎಂಬಂತೆ ಅವಳ ಮೇಲೆ ಅಧಿಕಾರ ಚಲಾಯಿಸತೊಡಗುತ್ತಾನೆ. ಅವಳ ಆಸೆ ಆಕಾಂಕ್ಷೆಗಳಿಗೆ ಅಡ್ಡಿ ಬರುವ ವೆಂಕಪ್ಪಯ್ಯನನ್ನು ಕಂಡರೆ ಅಮ್ಮಚ್ಚಿಗೆ ಇಷ್ಟವಿಲ್ಲ ಅವನ ಒರಟುತನ ಅವಳಿಗೆ ಅವನ ಬಗ್ಗೆ "ಗದ್ದೆ ಉಳುವ ಕೋಣವಾದರೂ ಇವನಿಗಿಂತ ಊಂಚು...... ಒಡ್ಡ ಎಲ್ಲಿದ್ದೋ" ಎಂಬ ಭಾವನೆಯನ್ನು ಉಂಟುಮಾಡಿದೆ. ಆದರೆ ಅಮ್ಮಚ್ಚಿ ವೆಂಕಪ್ಪಯ್ಯನ ದೌರ್ಜನ್ಯಕ್ಕೆ ಒಳಗಾಗಿ ತನಗೆ ಇಷ್ಟವಿಲ್ಲದಿದ್ದರೂ ಮದುವೆಯಾಗಬೇಕಾಗಿ ಬಂದುದು ವ್ಯವಸ್ಥೆಯ ಅಣಕ. ಆಕೆಯ ಪ್ರತಿರೋಧ ವ್ಯರ್ಥವಾದರೂ ಹೆಣ್ಣಿನ ಬಂಡಾಯ ಮನೋಭಾವನೆಯ ಪ್ರತೀಕವಾಗಿ ನಿಲ್ಲುತ್ತಾಳೆ ಅಮ್ಮಚ್ಚಿ.

'ಸಬಿತಾ' ಕಥೆಯಲ್ಲಿ ಬರುವ ಸಬಿತಾ ವಿದ್ಯಾವಂತ ಉದ್ಯೋಗಸ್ಥ ಏಕಾಂಗಿ ಹುಡುಗಿ. ಇತರರ ಬಳಿ ಇರುವುದನ್ನು ನೋಡಿ ತನ್ನ ಬಳಿ ಇಲ್ಲವಲ್ಲ ಎಂದು ಚಿಂತಿಸುವ ಅತೃಪ್ತ ಮನೋಭಾವದ ಸಬಿತಾಗೆ ಶ್ರೀಮಂತಿಕೆಯ ಬಗ್ಗೆ ಏನೋ ಒಂದು ರೀತಿಯ ಆಕರ್ಷಣೆ. "ಮನುಷ್ಯರ ಕುರಿತು ಹೇಳಬೇಕೆಂದರೆ ಮೊದಲು ಅವರ ಅಂತಸ್ತು ಹೇಳುವವಳು. ಶ್ರೀಮಂತರು ಎನ್ನುವಾಗ ಆಸೆಯಿಂದೆಂಬಂತೆ ಉಗುಳು ನುಂಗುತ್ತಾಳೆ." ಈ ಮಾತು ಕೇಳಿದರೆ ಸಬಿತಾಳಿಗೆ ಶ್ರೀಮಂತಿಕೆಯ ಬಗ್ಗೆ ಇರುವ ಸೆಳೆತದ ಅರಿವಾಗುತ್ತದೆ. ಅವಳ ಅತೃಪ್ತ ಮನೋಭಾವವು ಅವಳನ್ನು ವಾಚಾಳಿಯನ್ನಾಗಿ ಮಾಡಿದೆ. ತನ್ನ ಕೊರತೆಯನ್ನು ಮುಚ್ಚಿಟ್ಟುಕೊಳ್ಳಲು ಅತಿಯಾಗಿ ಮಾತಾಡುವ ಸಬಿತಾಳ ಮಾತುಗಳಲ್ಲಿ ಅತೃಪ್ತಿ ಇಣುಕುತ್ತದೆ. ಬೇರೆಯವರಿಗೆ ಇರುವ ಸುಖ ತನಗಿಲ್ಲವಲ್ಲ ಎಂಬ ಅತೃಪ್ತಿಯಲ್ಲಿಯೇ ತನಗೆ ಸಿಗುವ ಸುಖವನ್ನೂ ಕಳೆದುಕೊಳ್ಳುತ್ತಿರುವುದರ ಬಗ್ಗೆ ಸಬಿತಳಿಗೆ ಅರಿವೇ ಇಲ್ಲ.

ಕೆಲವರು ತಮ್ಮ ನೋವನ್ನು ಮರೆಯಲು ಮೌನಕ್ಕೆ ಶರಣಾದರೆ, ಕೆಲವರು ಅಂತರ್ಮುಖಿಯಾಗುತ್ತಾರೆ. ಇನ್ನು ಕೆಲವರು ವಾಚಾಳಿಯಾಗುತ್ತಾರೆ. ಹೀಗೆ ಒಬ್ಬೊಬ್ಬರು ಒಂದೊಂದು ರೀತಿ ವರ್ತಿಸುತ್ತಾರೆ. 'ನಟ' ಕಥೆಯ ರತ್ನ ಬಹಿರ್ಮುಖಿ. ಎಲ್ಲರೊಡನೆಯು ಸರಳವಾಗಿ ಬೆರೆಯುವ ವ್ಯಕ್ತಿತ್ವ ಅವಳದು. ರತ್ನ ಪಾರ್ಸು (ಯಾರನ್ನೋ ಮಾತು ಅಭಿನಯದ

ಮೂಲಕ ಕಣ್ಣೆದುರು ಕಟ್ಟಿ ನಿಲ್ಲಿಸಿಕೊಡುವುದು) ಮಾಡುವುದರಲ್ಲಿ ಎತ್ತಿದ ಕೈ ನಾಲ್ಕು ಜನ ಸೇರುವ ಯಾವುದೇ ಸಮಾರಂಭಕ್ಕೆ ರತ್ನ ಬಂತು ಎಂದರೆ ಅಲ್ಲಿ ಅವಳಿಂದ ಪಾರ್ಸು ನಡೆಯಲೇಬೇಕು. ಆರತಕ್ಷತೆಯಲ್ಲಿ ಎಲ್ಲರ ಒತ್ತಾಯದ ಮೇರೆಗೆ ಅವರಿವರ ಪಾರ್ಸು ಮಾಡುವ ರತ್ನ ಕೊನೆಗೆ ತನ್ನದೇ ಪಾರ್ಸು ಮಾಡುವುದು ಅವಳ ಎದೆಯ ಸಂಕಟವನ್ನು ಹೊರಹಾಕುವ ವಿಧಾನವಾಗಿದೆ. ಮೇಲ್ನೋಟಕ್ಕೆ ನಗುತ್ತಾ ಇರುವ ರತ್ನಳನ್ನು ನೋಡಿದ ಯಾರಿಗೂ ಅವಳ ಎದೆಯಲ್ಲಿ ಮಗುವನ್ನು ಕಳೆದುಕೊಂಡ ನೋವು ಮಡುಗಟ್ಟಿದೆ ಎಂಬುದು ಗೋಚರವಾಗುವುದೇ ಇಲ್ಲ. ರತ್ನಳ ಮಗು ಕಾಯಿಲೆಯಿಂದ ತೀರಿ ಹೋದಾಗ ಗಂಡ ಎಲ್ಲಿ ಹೋಗಿರುವನೆಂದು ತಿಳಿಯದ ರತ್ನಳ ಸ್ಥಿತಿ ಊಹಿಸಲಸಾಧ್ಯ. ಇಂತಹ ಸ್ಥಿತಿಯಲ್ಲೂ ನೋವನ್ನು ನುಂಗಿ ಕರ್ತವ್ಯನಿರ್ವಹಿಸಲು ಮುಂದಾಗುವ ರತ್ನಳಿಗೆ ಹೆಣ್ಣು ಬೆಂಕಿ ಇಡುವುದು "ಶಾಸ್ತ್ರ ಪ್ರಕಾರ ದೋಷ ಇಲ್ಲೆ" ಎಂದು ಭಟ್ಟರು ಹೇಳಿದಾಗ "ದೋಷ ಇದ್ರೂ ಸಮನೆ, ಇಲ್ಲೀರೂ ಸಮನೆ ನಾನೆ ಹೆತ್ತ್ ಮಗು ಅಲ್ವ ಭಟ್ರೇ ದೋಷ್ ಇಪ್ಪಾರೂ ಹ್ಯಾಂಗೆ?" ಎಂದು ಕೇಳುವ ಅವಳ ಪ್ರಶ್ನೆಯಲ್ಲಿ ಶಾಸ್ತ್ರ ಸಂಪ್ರದಾಯಕ್ಕಿಂತ ತಾಯಿಯ ಮಮತೆ ದೊಡ್ಡದು ಎಂಬ ಅಂಶವನ್ನು ಗುರುತಿಸಬಹುದು. ತನ್ನ ಮಗುವಿಗೆ ಬೆಂಕಿ ಇಡುವ ಮೂಲಕ ಇದುವರೆಗೂ ಹೆಣ್ಣು ಬೆಂಕಿ ಇಡಬಾರದು ಎಂಬ ಸಾಂಪ್ರದಾಯಿಕ ನಿಯಮವನ್ನು ಮುರಿದ ಹೆಣ್ಣಾಗಿ ರತ್ನ ಕಾಣುತ್ತಾಳೆ. ಬೆಂಕಿ ಕೊಟ್ಟು ಕೈ ಕೊಡವುವ ಹಾಗೆ ಪಾರ್ಸು ಮಾಡುವ ರತ್ನ 'ಇಟ್ಕಂಡ್' ಕಾಯ್ತ ಕೂಕಂಡೇ ಬಿಡುನಾ ನಾನು? ಹ್ಹ ! ಎಂದು ನಗುತ್ತಾಳೆ. ಆ ನಗುವಿನಲ್ಲಿ ತನ್ನ ನೋವನ್ನು ಮರೆಮಾಚಲು ಯತ್ನಿಸುವ ರತ್ನಳ ವ್ಯಕ್ತಿತ್ವ ದೊಡ್ಡದು ಜೊತೆಗೆ ಗಂಡ ಎಲ್ಲಿ ಹೋಗಿರುವನೆಂದೇ ತಿಳಿಯದೆ ಇರುವಾಗ ಮಗುವಿಗೆ ಬೆಂಕಿ ಕೊಡದೆ ಅವನು ಬರುವವರೆಗೆ ಯಾಕೆ ಬಿಡಬೇಕು ಎಂಬ ಅವಳ ನಿಲುವು ಅವಳ ದಿಟ್ಟತನಕ್ಕೆ ಸಾಕ್ಷಿ. ತನ್ನ ಸ್ಥಿತಿಯನ್ನೇ ಪಾರ್ಸುಮಾಡಿ ತೋರುವ ರತ್ನಳ ನಿರ್ಲಿಪ್ತತೆ ನಿಜಕ್ಕೂ ಅಚ್ಚರಿ ತರುವಂತಹುದು.

ವೈದೇಹಿಯವರ ಕಥೆಗಳಲ್ಲಿ ಸಾಂಪ್ರದಾಯಿಕ ಮನೋಭಾವದ ಅಪ್ಪಟ ಭಾರತೀಯ ಹೆಣ್ಣು ಮಕ್ಕಳಿರುವಂತೆ ಮುಂದುವರಿದ ಪಾಶ್ಚಾತ್ಯ ಸಂಸ್ಕೃತಿಯ ಅನುಕರಣೆಮಾಡುವ ಆಧುನಿಕ ಹೆಣ್ಣು ಬರುತ್ತಾಳೆ. 'ಆಭಾ' ಕಥೆಯಲ್ಲಿ ಪರಸ್ಪರ ವಿರುದ್ಧ ವ್ಯಕ್ತಿತ್ವದ ಎರಡು ಹೆಣ್ಣುಗಳನ್ನು ಕಾಣಬಹುದು. ಸಮಿತಾ ವಿದ್ಯಾವಂತೆ, ಬುದ್ಧಿವಂತೆ, ಧೈರ್ಯವಂತೆಯಾದರೂ ತನ್ನತನದ ಅರಿವಿರುವ ತನ್ನ ಇತಿಮಿತಿಯನ್ನು ಮೀರಿ ಹೋಗದ ಹೆಣ್ಣು. ಆದರೆ ಅಭಾ ಇದಕ್ಕೆ ವಿರುದ್ಧ ವ್ಯಕ್ತಿತ್ವದ ಮುಂದುವರಿದ, ಪಾಶ್ಚಾತ್ಯ ಸಂಸ್ಕೃತಿಯ ಪ್ರತೀಕ ಎನಿಸಿಕೊಂಡ ಆಧುನಿಕ ಮಹಿಳೆ. "ನಾನು ಸಣ್ಣದಿರುವಾಗ ಮದುವೆಮನೆಗೆ ಹೋದಾಗೆಲ್ಲ ಯಾಕೆ ಗಂಡಸನ್ನೇ ಮದುವೆಯಾಗಬೇಕು ಅನ್ನಿಸುತ್ತಿತ್ತು. ಅಜ್ಜನೊಡನೆ

ಹೇಳುತ್ತಿದ್ದೆ ಕೂಡ. ನಾನು ಮದುವೆಯಾಗುವುದು ಹುಡಗಿಯನ್ನೇ" ಎನ್ನುವ ಅಭಾ ಸ್ತ್ರೀಸಮಾನತೆ, ಸ್ತ್ರೀ ಸ್ವಾತಂತ್ರ್ಯವನ್ನು ಪ್ರತಿಪಾದಿಸುವ ಅಪ್ಪಟ ಸ್ತ್ರೀವಾದಿ. "ಪತಿ-ಸಂಶೋಧಕ ಮಗಳು ಬ್ರಿಲಿಯಂಟ್, ಪತಿಯ ಮಾರ್ಗದರ್ಶನವಲ್ಲಿ ಸಂಶೋಧನೆ ಮಾಡಲು ಹಾತೊರೆಯುವ ಎಕ್ಸಲೆಂಟ್ ವಿದ್ಯಾರ್ಥಿ ವಿದ್ಯಾರ್ಥಿನಿಯರು, ತನ್ನ ಕವಿತೆಗಳು, ಪ್ರಾಧ್ಯಾಪಕಿಯಾಗಿರುವ ತನ್ನ ಜನಪ್ರಿಯತೆ"ಯ ಬಗ್ಗೆ ಜಂಭದಿಂದೆಂಬಂತೆ ಹೇಳಿಕೊಳ್ಳುವ ಅಭಾ ಮೇಲ್ನೋಟಕ್ಕೆ ಯಶಸ್ವಿ, ದಿಟ್ಟ, ತೃಪ್ತಿಕರ ಸಾಂಸಾರಿಕ ಹೆಣ್ಣು ಎಂಬಂತೆ ತೋರಿಸಿಕೊಂಡರೂ, ಸಂಸಾರಿಕ ಜೀವನದಲ್ಲಿ ಅತೃಪ್ತಿಯಿಂದ ನರಳುತ್ತಿರುವ ಆಭಾ ಇಲ್ಲಿ ಸಿಗದ ತೃಪ್ತಿಯನ್ನು ಹುಡುಕಿಕೊಂಡು ಬೇರೊಬ್ಬನ ಹಿಂದೆ ಹೋಗುತ್ತಾಳೆ. ಇಲ್ಲಿ ಆಭಾ ಎಷ್ಟೇ ವಿದ್ಯಾವಂತ, ಧೈರ್ಯವಂತ, ಸುಂದರ ಯಶಸ್ವಿ ಮಹಿಳೆ ಎನಿಸಿಕೊಂಡರೂ ಅತೃಪ್ತ ಹೆಣ್ಣಾಗಿ ಕಾಣುತ್ತಾಳೆ. ಆದರೂ ತನ್ನ ಜೀವನವನ್ನು ತನಗೆ ಬೇಕಾದಂತೆ ಜೀವಿಸುವ, ತನಗೆ ಬೇಕಾದ್ದನ್ನು ಆರಿಸಿಕೊಳ್ಳುವ ಸ್ವಾತಂತ್ರವಿರುವ ಹೆಣ್ಣನ್ನು ಆಭಾಳಲ್ಲಿ ಕಾಣುತ್ತೇವೆ.

ಪುರುಷ ಪ್ರಧಾನ ವ್ಯವಸ್ಥೆ ಎಷ್ಟು ಬಲವಾಗಿದೆ ಎಂದರೆ ಎಲ್ಲವನ್ನು ಗಂಡಿನ ದೃಷ್ಟಿಯಿಂದಲೇ ನೋಡುತ್ತದೆ. ಅವನ ಸ್ತ್ರೀಲಂಪಟತನ, ಮೋಸ, ಅನ್ಯಾಯ ಎಲ್ಲವನ್ನು ಏನಾದರೂ ಕಾರಣ ನೀಡಿ ಬಲವಾಗಿ ಸಮರ್ಥಿಸುತ್ತದೆ. ಆ ವ್ಯವಸ್ಥೆ ಹೆಣ್ಣಿನ ಅಂತರಂಗವನ್ನು ಅರಿಯುವ ಪ್ರಯತ್ನವನ್ನೇ ಮಾಡುವುದಿಲ್ಲ. ಪುರಾಣಕಾಲದಿಂದ ಇಂದಿನವರೆಗೂ ಹೆಣ್ಣಿನ ಸ್ಥಿತಿ ತೀರಾ ಭಿನ್ನವಾಗೇನು ಇಲ್ಲ. ದುಷ್ಯಂತನಂತಹ ಸ್ತ್ರೀಲಂಪಟ ಪುರುಷನ ಮೋಸಕ್ಕೆ ಒಳಗಾದವಳು ಶಕುಂತಲೆ ಆದರೆ ಇದುವರೆವಿಗೂ ದುಷ್ಯಂತನ ಮೋಸವನ್ನು ದೂರ್ವಾಸರ ಶಾಪ ಎಂಬ ಪರದೆಯಿಂದ ಮರೆಮಾಡಲಾಗಿತ್ತು. ದುಷ್ಯಂತನ ಮೋಸಕ್ಕೂ ಒಂದು ಕಾರಣ ನೀಡಿ ಸಮರ್ಥಿಸಲಾಗಿತ್ತೇ ವಿನಃ ಶಕುಂತಲೆಯ ಅಂತರಂಗವನ್ನು ಪ್ರಪಂಚಕ್ಕೆ ಅಪರಿಚಿತವಾಗಿಯೇ ಇರಿಸಲಾಗಿತ್ತು.

ವೈದೇಹಿಯವರು ಒಂದು ಹೆಣ್ಣಾಗಿ ಇಡೀ ಶಕುಂತಲೆಯ ಕಥೆಯನ್ನು ಅವಳ ದೃಷ್ಟಿಯಿಂದ ಜಗತ್ತಿಗೆ ತೋರಿಸಿದ್ದಾರೆ. ಗಂಡಿನ ಲಂಪಟತ್ವವನ್ನು ಸುಳ್ಳಿನ ಜಾಲ ಹೆಣೆದು ಮುಚ್ಚಿಡುವ ಕ್ರೂರ ಪುರುಷ ವ್ಯವಸ್ಥೆಗೆ ಹೆಣ್ಣಿನ ಆರ್ತನಾದ ಕೇಳುವುದೇ ಇಲ್ಲ ದುಷ್ಯಂತನು ತನ್ನನ್ನು ಸ್ವೀಕರಿಸಲು ನಿರಾಕರಿಸಿದಾಗ ಗರ್ಭಿಣಿಯಾಗಿದ್ದರೂ ಆತನನ್ನು ಬೇಡಿಕೊಳ್ಳದೆ, ಕಣ್ವರ ಆಶ್ರಮಕ್ಕೂ ಹಿಂದಿರುಗದೆ, ಮಾರೀಚರ ಆಶ್ರಮದಲ್ಲಿ ಉಳಿದು ಏಕಾಂಗಿಯಾಗಿ ಭರತನಿಗೆ ಜನ್ಮವಿತ್ತ ಸ್ವಾಭಿಮಾನಿ. ಪ್ರೀತಿಸಿದವನಿಂದ ತಿರಸ್ಕೃತಳಾದ ಗರ್ಭಿಣಿ ಶಂಕುಂತಲೆ ಜಗದ ನಿಂದನೆಗೆ ಹೆದರದೆ ಬದುಕಿ ತೋರಿದವಳು. "ಬದುಕಲು ಕಲಿತೆ, ವಿಮುಖತೆಯನ್ನಲ್ಲ ಮಗುವನ್ನು ದಟ್ಟ ಕಾಡಿನಲ್ಲಿ ತ್ಯಜಿಸಿ ತಪ್ಪಿ ಓಡುವುದಲ್ಲ ಭೂಮಿಯೇ ಬಾಯಿ ತೆರೆ ಎಂದು ಚೀರಾಡುವುದಲ್ಲ" ಎಂಬ ಅವಳ ಮತು ಅವಳ

ದಿಟ್ಟತನಕ್ಕೆ ಸಾಕ್ಷಿ ದುಷ್ಯಂತ ತನಗೆ ಮೋಸ ಮಾಡಿದರೂ "ಪರಿಶುದ್ಧವಾಗಿ ಪ್ರೇಮಿಸುವಂತಹ ಅನುಭವ ನೀಡಿದ ಆತನಿಗೆ ಕೃತಜ್ಞತೆ ಅರ್ಪಿಸಬೇಕು" ಎನ್ನುವ ವಿಶಾಲ ಹೃದಯಿ. ಸಿಂಹಾಸನಕ್ಕೆ ಉತರಾಧಿಕಾರಿ ಬೇಕೆಂದು ಭರತನಿಗಾಗಿ ಬಂದ ದುಷ್ಯಂತ ತನ್ನನ್ನು ಅವರಮನೆಗೆ ಕರೆದಾಗ "ನನಗಾತ ಅನಿವಾರ್ಯನೆಂದ ಮಾತ್ರಕ್ಕೆ ನಾನು ಆತನಿಗೆ ಅನಿವಾರ್ಯವಾಗಬೇಕಿಲ್ಲ" ಎಂಬ ಸತ್ಯವನ್ನು ಅರಿತ ಶಕುಂತಲೆ ಮಗನನ್ನು ದುಷ್ಯಂತನೊಡನೆ ಕಳುಹಿಸಿ ಏಕಾಂಗಿಯಾಗಿ ಉಳಿಯುತ್ತಾಳೆ. ಎಲ್ಲವನ್ನು ಮೌನವಾಗಿ ಸ್ವೀಕರಿಸಿ ನಿರ್ಲಿಪ್ತಳಾಗಿ ಉಳಿದ "ಈಕೆ ಯಾರು? ಪ್ರೇಮಿಯೇ. ವಿರಹಿಣಿಯೇ. ತಪಸ್ವಿನಿಯೇ? ಅಥವಾ ಎಲ್ಲವೂ ಆಗಿ ಎಲ್ಲವನ್ನೂ ಕಳೆದು ಚೊಕ್ಕವಾದ ತಾಜಾಪ್ರಕೃತಿಯೇ" ಎಂಬ ಪ್ರಶ್ನೆ ಪಶ್ನೆಯಾಗಿಯೇ ಉಳಿಯುತ್ತದೆ.

ಭಾರತದ ವಿಭಜನೆ ಒಂದು ದೊಡ್ಡ ದುರಂತ ಆ ದುರಂತದ ಪರಿಣಾಮವನ್ನು ನಾವೆಲ್ಲ ಇಂದಿಗೂ ಅನುಭವಿಸುತ್ತಿದ್ದೇವೆ. ಭಾರತದ ವಿಭಜನೆಯ ದುರಂತ ವೈಯಕ್ತಿಕ ನೆಲೆಯಲ್ಲಿ ಉಂಟುಮಾಡಿದ ಪರಿಣಾಮವನ್ನು ವಿವರಿಸುವುದರ ಜೊತೆಗೆ ಇಂತಹ ದುರಂತಗಳು ಹೆಣ್ಣಿನ ಜೀವನದ ಮೇಲೆ ಎಂತಹ ದುಷ್ಪರಿಣಾಮ ಬೀರುತ್ತವೆ ಎಂಬುದನ್ನು 'ಕ್ರೌಂಚ ಪಕ್ಷಿಗಳು' ಕಥೆಯಲ್ಲಿ ಮನಮುಟ್ಟುವಂತೆ ವಿವರಿಸಿದ್ದಾರೆ. "ಮನುಷ್ಯ ಮನುಷ್ಯನಾಗಿರೋದು ಸಾಮಾನ್ಯ ಸ್ಥಿತಿಯಲ್ಲಿ ಮಾತ್ರ, ಸಿದ್ಧಾಂತ ತತ್ವ ರೀತಿ ನೀತಿಗಳ ಬುಡ ತುಸುವೇ ಅಲ್ಲಾಡಿದರೂ ಮೊದಲು ಬಲಿಯಾಗೋದು ಮಹಿಳೆ, ಅವಳ ದೇಹ, ಅವಳ ಮನಸ್ಸು, ಅವಳ ಬದುಕು". ಇದಕ್ಕೆ ಭಾರತ ವಿಭಜನೆಯ ದುರಂತ ಅತ್ಯುತ್ತಮ ನಿದರ್ಶನ. ಶತಮಾನಗಳಿಂದ ಸಹೋದರರಂತೆ ಬದುಕಿದ್ದ ಜನ ಪರಸ್ಪರ ಶತ್ರುಗಳಾಗಿ ಹೋದರು ಈ ದುರಂತದಿಂದ ಹೆಚ್ಚು ಸಂಕಷ್ಟಕ್ಕೀಡಾದವರು ಮಹಿಳೆಯರು ಇಂತಹ ವಿಷಮ ಸ್ಥಿತಿಯಲ್ಲಿ ಮೃಗದಂತೆ ವರ್ತಿಸುವ ಪುರುಷನ ದೌರ್ಜನ್ಯಕ್ಕೆ ಮಿತಿಯೇ ಇಲ್ಲ. ಪುರುಷ ತನ್ನ ಪೌರುಷವನ್ನು ತೋರಿಸಲು ಆಯ್ದುಕೊಳ್ಳುವುದು ಮಹಿಳೆಯರನ್ನು, ಅವರ ದೇಹವನ್ನು ಇಂತಹ ಸಂದರ್ಭದಲ್ಲಿ ಪರಸ್ಪರ ಎರಡೂ ಕಡೆಯಲ್ಲೂ ಅತ್ಯಾಚಾರಕ್ಕೊಳಗಾದ ಮಹಿಳೆಯರೆಷ್ಟೋ, ಅಪಹರಣಕ್ಕೀಡಾದ ಮಹಿಳೆಯರೆಷ್ಟೊ, ಅದುವರೆಗೆ ಶಾಂತವಾಗಿದ್ದ ಅವರ ಬದುಕನ್ನು ವಿಭನೆಯ ದುರಂತ ಕಲಕಿಬಿಟ್ಟಿತು. ಅವರನ್ನು ನಿರಾಶ್ರಿತರನ್ನಾಗಿ ಮಾಡಿಬಿಟ್ಟಿತು. ಸರ್ಕಾರದ ಮಟ್ಟದಲ್ಲಿ ಮಾತುಕತೆ ನಡೆದು ಎರಡೂ ಕಡೆಯ ನಿರಾಶ್ರಿತರನ್ನು ಕರೆತರಲು ಸರ್ಕಾರದ ಪ್ರತಿನಿಧಿಯಾಗಿ ಹೋದ ವಿಶಾಖ ಬೆನ್‌ರನ್ನು ಸಂತ್ರಸ್ಥೆಯೊಬ್ಬಳು "ಬರಬೇಕೆ ನಾನು? ಬಂದರೆ ಅವಮಾನವಿಲ್ಲದ ಬದುಕಿನ ಆಶ್ವಾಸನೆ ಕೊಡುತ್ತೀರಾ?" ಎಂದು ಮುಗ್ಧವಾಗಿ ಕೇಳಿದ ಪ್ರಶ್ನೆ ಮಹಿಳೆಯರ ಅತಂತ್ರ ಸ್ಥಿತಿಗೆ ಹಿಡಿದ ಕನ್ನಡಿಯಾಗಿದೆ.

ಇದೇ ಕಥೆಯಲ್ಲಿ ಬರುವ ಲಕ್ಷ್ಮಮ್ಮ ವಿಭಜನೆಯ ದುರಂತದ ಪರಿಣಾಮವನ್ನು ವೈಯಕ್ತಿಕವಾಗಿ ಕಂಡುಂಡವರು ಪುರಾಣಕಾಲದಿಂದಲೂ ಹೆಣ್ಣಿನ ಸ್ಥಿತಿ ಅತಂತ್ರವಾಗಿರುವುದನ್ನು ನಾವು ಕಾಣಬಹುದು. ಶೀಲ ಎಂಬುದು ಹೆಣ್ಣಿಗೆ ಮಾತ್ರ ಇರಬೇಕಾದ ವಿಶೇಷಗುಣ ಅಂದು ರಾವಣನಿಂದ ಅಪಹರಣಕ್ಕೀಡಾದ ಸೀತೆಯ ಶೀಲವನ್ನು ಶಂಕಿಸಿ ರಾಮ ಆಕೆಯಿಂದ ಅಗ್ನಿಪ್ರವೇಶ ಮಾಡಿಸಿದ. ಅವನನ್ನು ಆದರ್ಶಪುರುಷ ಎಂದು ನಂಬುವ ನಾಡಿನ ಗಂಡಸು ಎಂದ ಮೇಲೆ ಅವನ ಆದರ್ಶವನ್ನು ಪಾಲಿಸದೆ ಇರಲಾದೀತೆ? ಕಿಡಿಗೇಡಿಗಳಿಂದ ಅಪಹರಣಕ್ಕೀಡಾದ ಲಕ್ಷ್ಮಮ್ಮ ಅವರಿಂದ ಬಿಡುಗಡೆ ಹೊಂದಿ ನಿರಾಶ್ರಿತರ ಶಿಬಿರದಲ್ಲಿದ್ದಾಗ ಅವರನ್ನು ಗುರುತಿಸಲು ಬಂದ ಅಶ್ವಾರ್ಣಭಟ್ಟರು ಒಂದು ವರ್ಷಕ್ಕೂ ಮಿಕ್ಕಿ ಎಲ್ಲೋ ಇದ್ದ ಹೆಂಡತಿಯನ್ನು ಮತ್ತೆ ಕರೆದುಕೊಳ್ಳುವುದು ಹೇಗೆಂದು ಗುರುತಿಸಿಯೂ ಗುರುತಿಸದಂತೆ ಹೊರಟುಹೋದದು ಪುರುಷನ ಕಲ್ಲು ಹೃದಯಕ್ಕೆ ಸ್ವಾರ್ಥಕ್ಕೆ ಸಾಕ್ಷಿ. ತನ್ನ ಗಂಡ ತನ್ನನ್ನು ಗುರುತಿಸಿ ಕರೆಯುತ್ತಾನೆ ಎಂದು ಕಾಯುತ್ತಿದ್ದ ಹೆಣ್ಣು ಹೃದಯಕ್ಕೆ ಇದರಿಂದ ಎಂತಹ ಆಘಾತವಾಗಿರಬೇಕು ಎಂಬುದು ಅನುಭವಿಸಿದವರಿಗಷ್ಟೇ ಗೊತ್ತು. ಅಪಹರಣಕಾರರಿಂದ ಬಿಡುಗಡೆ ಹೊಂದಿ ಬಂದರೂ ಗಂಡನಿಂದ ತಿರಸ್ಕೃತಳಾದ ಲಕ್ಷ್ಮಮ್ಮನ ಸ್ಥಿತಿ ಹೆಣ್ಣಿನ ಅತಂತ್ರ ಸ್ಥಿತಿಯ ಪ್ರತಿಬಿಂಬ. ಪುರಾಣ ಕಾಲದ ಸೀತೆ, ಶಕುಂತಲೆಯರಿಂದ ಹಿಡಿದು ಇಂದಿನ ಲಕ್ಷ್ಮಮ್ಮನವರೆಗೆ ಹೆಣ್ಣಿನ ಬದುಕು ಯಾವತ್ತೂ ಅತಂತ್ರ. ಅವರ ನಿಸ್ವಾರ್ಥ ಪ್ರೇಮಕ್ಕೆ, ಪ್ರಾಮಾಣಿಕತೆಗೆ ಸಿಕ್ಕಿದ್ದು, ಕೇವಲ ತಿರಸ್ಕಾರ, ಏಕಾಂಗಿತನ. ತನ್ನ ಇಂಥ ಸ್ಥಿತಿಯನ್ನು ನಿರ್ಲಿಪ್ತತೆಯಿಂದ ಸ್ವೀಕರಿಸುವ ಗಟ್ಟಿತನವನ್ನು ಹೆಣ್ಣು ತೋರಿದ್ದಾಳೆ ನಿಜ ಹೇಳಬೇಕೆಂದರೆ ಈ ಏಕಾಂಗಿತನ ಹೆಣ್ಣಿಗೆ ತನ್ನತನವನ್ನು ಕಂಡುಕೊಳ್ಳಲು, ಬದುಕಿನಲ್ಲಿ ಪಕ್ವವಾಗಲು ನೆರವಾಯಿತೆಂದು ಹೇಳಬಹುದು. ತನ್ನ ಕಥೆಯನ್ನು ಹೇಳಿಕೊಂಡ ಸೀತೆ, ಶಕುಂತಲೆಯರ ಪ್ರತಿನಿಧಿಯಂತಿರುವ ಲಕ್ಷ್ಮಮ್ಮನ ಸ್ವರದಲ್ಲಿ ಸಿಟ್ಟಿನ ಕಾವು ಪೂರ್ಣವಾಗಿ ತಣಿಯದಿದ್ದರೂ ಶೋಕ ಮಾತ್ರ ಇರಲಿಲ್ಲ. "ಏಕಾಂತದಲ್ಲಿ ಚಿಂತಿಸಿ ಪಕ್ವವಾದವರ ಧ್ವನಿಯೇ ಹೀಗೆಯೇ ಇರುತ್ತದೆಯೇನೋ, ಸೀತೆ, ಶಕುಂತಲೆಯರಂತೆ; ನೆನಪುಗಳು ಖಾಲಿ ನೆನಪುಗಳಾಗಿ; ಸಿಹಿ–ಕಹಿ ಪದರ ಕಳಚಿ; ಅವರದೇ ಭಾಷೆಯಲಿ 'ಭ್ರಮಾಮಯಕಾಯ' ಕಳಚಿ" ಇಂತಹ ಒಂದು ಪಕ್ವ ಸ್ಥಿತಿಯನ್ನು ತಲುಪಲು ಹೆಣ್ಣಿಗಷ್ಟೇ ಸಾಧ್ಯ ಈ ದೃಷ್ಟಿಯಿಂದ ಹೆಣ್ಣು ನಿಜವಾಗಿಯೂ ಗಂಡಿಗಿಂತ ವಿಶಿಷ್ಟ.

ಹೆಣ್ಣಿಗೆ ವಿಶಿಷ್ಟವಾದುದು ತಾಯ್ತನ. ಈ ತಾಯ್ತನವೆಂಬುದು ಹೆಣ್ಣಿಗೆ ಒಂದು ವಿಶೇಷ ಗಾಂಭೀರ್ಯವನ್ನು ತಂದುಕೊಡುತ್ತದೆ. ಎಂತಹ ಚೆಲ್ಲು ಚೆಲ್ಲು ಹುಡುಗಿಯಾದರೂ ತಾಯಿಯದಾಗ ಅವಳಿಗೆ ತಿಳಿಯದಂತೆ ಅವಳ ಚೆಲ್ಲು ಸ್ವಭಾವ ಮರೆಯಾಗಿ ತಾಯ್ತನದ ಗಾಂಭೀರ್ಯ

ಬಂದಿರುತ್ತವೆ. 'ಚಂದಲೆ' ಕಥೆಯ ಜೀನ ಹದಿನಾರು ವರ್ಷ ವಯಸ್ಸಿನ ತುಂಟ ಹುಡುಗಿ ಹದಿಹರೆಯದಲ್ಲಿ ಸಹಜವಾದ ಬಯಕೆಗಳನ್ನು, ಚೆಲ್ಲಾಟಗಳನ್ನು ಆಕೆಯಲ್ಲೂ ಕಾಣಬಹುದು. "ಇದ್ದರೆ ಸೂಳೆಯಂತಿರಬೇಕು ಏನು ಮಜಾ ಆಗ !" ಎಂದು ತನ್ನ ಬಯಕೆಯನ್ನು ನಿರ್ಭಯವಾಗಿ ವ್ಯಕ್ತಪಡಿಸುವ ಜೀನ ಆ ವಯಸ್ಸಿನ ಹೆಣ್ಣುಮಕ್ಕಳ ಚಂಚಲ ಮನೋಭಾವಕ್ಕೆ ಹಿಡಿದ ಕನ್ನಡಿ. ಮಿನಿ ಸ್ಕರ್ಟ್ ತೊಟ್ಟು ನಿಂತಲ್ಲಿ ನಿಲ್ಲದೆ ಚಿಗರೆಯಂತೆ ಜಿಗಿಯುತ್ತ "ನನಗೆ ಯಾವ ಜವಾಬ್ದಾರಿಯೂ ಬೇಡ. ನನಗೆ ಬೇಕಾದ ಹಾಗೆ ಇರುವವಳು ನಾನು" ಎನ್ನುತ್ತಿದ್ದ ಜೀನಳಲ್ಲಿ ತಾಯಿಯಾದ ನಂತರ ಹಿಂದಿದ್ದ ಚಂಚಲತೆ, ಬೇಜಾವಾಬ್ದಾರಿತನ ಮಾಯವಾಗಿ ತಾಯ್ತನದ ಗಾಂಭೀರ್ಯ ಬಂದಿದ್ದು, ಹೆಣ್ಣು ಹೇಗೆ ವಿವಿಧ ಅವಸ್ಥೆಗಳಿಗೆ ತಕ್ಕಂತೆ ತಂತಾನೆ ಬದಲಾಗುವ ಸರಳ ವ್ಯಕ್ತಿತ್ವದವಳು ಎಂಬುದು ಗೋಚರವಾಗುತ್ತದೆ.

ಇದೇ ಕಥೆಯ ಚಂದಲೆ ತನ್ನ ಪರಿಸ್ಥಿತಿಯ ಹಾಗೂ ಪುರುಷಪ್ರಧಾನ ವ್ಯವಸ್ಥೆಯ ಒತ್ತಡದಿಂದ ವೇಶ್ಯೆಯಾದವಳು. ಹೆಣ್ಣನ್ನು ತನ್ನ ಭೋಗದ ವಸ್ತು ಎಂಬಂತೆ ನೋಡುವ ಪುರುಷನ ಸೃಷ್ಟಿ ಚಂದಲೆ. ಹೆಣ್ಣು ಹೇಗೆ ಪುರುಷವ್ಯವಸ್ಥೆಯ ಅನುಕೂಲಕ್ಕೆ ತಕ್ಕಂತೆ ತನ್ನತನವನ್ನು ಬಲಿಕೊಟ್ಟು ಆತನ ಭೋಗದ ಸಾಧನವಾಗಬೇಕು ಎಂಬುದಕ್ಕೆ ಚಂದಲೆಯೇ ಸಾಕ್ಷಿ. ಇಂತಹ ಹೆಣ್ಣು ಮಕ್ಕಳನ್ನು ಸಮಾಜ ಯಾವ ರೀತಿ ನೋಡುತ್ತದೆ ಎಂಬುದನ್ನು ಚಂದಲೆ ಕಥೆಯಲ್ಲಿ ಕಾಣುತ್ತೇವೆ. ಪುರುಷನ ಕಾಮುಕತೆ ಇಂತಹ ಹೆಣ್ಣುಮಕ್ಕಳನ್ನು ಸೃಷ್ಟಿಸಿದರೂ ಹೆಣ್ಣನ್ನು ಮಾತ್ರ ತಪ್ಪಿತಸ್ಥಳಂತೆ ನೋಡುವ ಸಮಾಜ 'ಗಂಡು' ಎಂಬ ಕಾರಣಕ್ಕೆ ಅವನಿಗೆ ತಪ್ಪಿತಸ್ಥ ಎಂಬ ಪಟ್ಟದಿಂದ ವಿನಾಯಿತಿ ನೀಡುತ್ತದೆ. ಅವನೇನು ಗಂಡು ಇವಳಿಗೆ ಬುದ್ಧಿ ಬೇಡವೇ? ಎಂಬ ದೋರಣೆ ಸಮಾಜದಲ್ಲಿ ಮನೆಮಾಡಿದೆ. ಗಂಡಿನ ತಪ್ಪಿಗೂ ಹೆಣ್ಣಿಗೇ ಶಿಕ್ಷೆ ನೀಡಲಾಗುತ್ತದೆ. ಏಕೆಂದರೆ ಇದು ಪುರುಷ ಪ್ರಧಾನ ಸಮಾಜ ಇಂತಹ ಸಮಾಜ ಇರುವವರೆಗೆ ಚಂದಲೆಯಂತಹವರು ಇದ್ದೇ ಇರುತ್ತಾರೆ. ಸಾಂಪ್ರದಾಯಿಕ ಕುಟುಂಬದಲ್ಲಿ ಹುಟ್ಟಿ ಬೆಳೆದಿದ್ದರೂ ವೈದೇಹಿಯವರ ಕೇವಲ ಸಮಾಜದಲ್ಲಿ ಗೌರವಯುತರಾದ ಹೆಣ್ಣುಮಕ್ಕಳನ್ನಷ್ಟೇ ಅಲ್ಲದೇ ವೇಶ್ಯೆಯರನ್ನೂ ತಮ್ಮ ಕಥೆಗಳಲ್ಲಿ ತಂದಿರುವುದು ವೈದೇಹಿಯವರು ಹೆಣ್ಣಿನ ಎಲ್ಲ ಸ್ಥಿತಿಗಳನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸಿದ್ದಾರೆ ಎಂಬುದನ್ನು ಸೂಚಿಸುತ್ತದೆ.

ತಾಯ್ತನ ಎಂಬುದು ಹೇಳಿಕೊಟ್ಟು ಬರುವಂತಹುದಲ್ಲ ತಾಯಿಯಾದಾಗ ಹೆಣ್ಣಿಗೆ ತಾನಾಗೇ ಬರುತ್ತದೆ. ಆದರೆ 'ಅವಲಂಬಿತರು' ಕಥೆಯ ಅಹಲ್ಯ ಶಾರದಳ ಮಗುವನ್ನು ನೋಡಿಕೊಳ್ಳಲು ಬಂದ ಹದಿನೈದು ವರ್ಷದ ಹುಡುಗಿ. ತಾಯಿಯಾಗದಿದ್ದರೂ ತಾಯ್ತನದ ತಾದಾತ್ಮ್ಯತೆ ಅವಳಲ್ಲಿ ಮೂಡಿತ್ತು. ಮಗುವಿಗೆ ಎಣ್ಣೆ ಹಾಕಿ ಸ್ನಾನ ಮಾಡಿಸಿ ಲಾಲಿ ಹಾಡಿ ಮಲಗಿಸುವ ಆ ಎಳೆಯ

ಹುಡುಗಿಯಲ್ಲಿ "ಅಜ್ಜಿ ಅಮ್ಮ ಎಲ್ಲರೂ ಇದ್ದಾರೆ ಅಲ್ಲಿ ಎನಿಸುತ್ತಿತ್ತು" ಈ ರೀತಿ ಎಳೆಯ ವಯಸ್ಸಿಗೇ ತಾಯಿಯ ಪ್ರಬುದ್ಧತೆ ಇರುವ ಹೆಣ್ಣು ಮಕ್ಕಳು ಇರುವಂತೆ, ವಯಸ್ಸಾಗಿ ತಾಯಿಯಾದರೂ ಇನ್ನೊಬ್ಬರ ಮೇಲೆ ಅವಲಂಬಿತರಾಗಿರುವ ಹೆಂಗಸರೂ ಇದ್ದಾರೆ ಇದೇ ಕಥೆಯ ಶಾರದಾ ತಾಯಿಯಾಗಿದ್ದರೂ ಮಗುವನ್ನು ನೋಡಿಕೊಳ್ಳಲು ಬಂದ ಎಳೆಯ "ಅಹಲ್ಯೆಗಿಂತ ತುಂಬ ಚಿಕ್ಕವಳಾಗಿ ಅಹಲ್ಯೆ ಶಾರದೆಯ ಅಮ್ಮನೋ ಅತ್ತೆಯೋ ಅಜ್ಜಿಯೋ ಆಗಿ ಕಂಡು ಶಾರದೆ ಅವಳ ರಕ್ಷಣೆಯಲ್ಲಿ ಮುಚ್ಚಟೆಯಾಗಿರುವಂತೆ" ಕಾಣುವುದು ವಿಪರ್ಯಾಸವೇ ಸರಿ.

ಹೆಣ್ಣಿನ ಜೀವನದ ಪ್ರಮುಖ ಘಟ್ಟ ತಾಯ್ತನ. ಪ್ರಕೃತಿ ಹೆಣ್ಣಿಗೇ ವಿಶೇಷವಾಗಿ ನೀಡಿರುವ ಶಕ್ತಿ. ಹೆಣ್ಣನ್ನು ಗಂಡಿಗಿಂತ ವಿಶಿಷ್ಠ ಸ್ಥಾನದಲ್ಲಿರಿಸುವುದು ಈ ತಾಯ್ತನ. ಪುಟ್ಟ ಕಂದನ ನಗು, ಅಳು, ತುಂಟಾಟ ಎಲ್ಲವೂ ಆಕರ್ಷಕ. ಮಗು ಕವುಚಿದ್ದೂ ಕೂಡ ಒಂದು ದೊಡ್ಡ ಸಂಭ್ರಮದ ಸಂಗತಿ. ಹಂತ ಹಂತವಾಗಿ ಮಗುವಿನ ಬೆಳವಣಿಗೆಯನ್ನು ಕಂಡು ತಾಯಿ ಸಂಭ್ರಮ ಪಡುತ್ತಾಳೆ. ಇಂತಹ ಸಂಭಮಕ್ಕಾಗಿ ಹಂಬಲಿಸುವ ಹೆಣ್ಣು 'ಗುಲಾಬಿ ಮೃದು ಪಾದಗಳು' ಕಥೆಯ ಸರಿತ. ಪ್ರತಿದಿನ ಆಫೀಸಿಗೆ ಹೋಗುವ ದಾರಿಯಲ್ಲಿ ಒಂದು ದಿನ ಮಗುವಿನ ಗುಲಾಬಿ ಪಾದಗಳನ್ನು ಕಂಡ ಸರಿತಳಲ್ಲಿ ಮಿಂಚಿನ ಸಂಚಾರವಾಯಿತು. ತಾಯ್ತನಕ್ಕಾಗಿ ಹಂಬಲಿಸುತ್ತಿದ್ದ ಸರಿತಳಿಗೆ ಪ್ರತಿದಿನ ಆ ರಸ್ತೆಯಲ್ಲಿ ಹಾದುಹೋಗುವಾಗ ಮಗುವಿದ್ದ ಮನೆಯಕಡೆ ಗಮನಿಸುವುದೇ ಕೆಲಸವಾಯಿತು. ತಂತಿಗಳ ಮೇಲೆ ಒಣಗಲು ಹಾಕಿದ್ದ ಪುಟ್ಟ ಪುಟ್ಟ ಅಂಗಿಗಳು, ನ್ಯಾಪ್‌ಕಿನ್‌ಗಳು, ಹಾಸು ಹೊದಿಕೆಗಳು, ಮಗುವಿನ ಅಳು, ನಗು ಅದರ ಗೆಜ್ಜೆಯ ಝಿಣಿ ಝಿಣಿ ನಾದ ಮಗು ಕವುಚಿದ ಸುದ್ದಿ, ಮಗುವಿನ ನಾಮಕರಣದ ಸಂಭ್ರಮ ಎಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುವುದು ಸರಿತಳ ತಾಯ್ತನದ ಬಯಕೆ ಎಷ್ಟು ಅದಮ್ಯವಾದುದು ಎಂಬುದನ್ನು ಸಂಕೇತಿಸುತ್ತದೆ.

ಮಗುವಿಗಾಗಿ ಇಷ್ಟೊಂದು ಹಂಬಲಿಸುವ ಸರಿತ ಕೊನೆಗೂ ಆ ಮಗುವನ್ನು ನೋಡದೆಯೇ ಹೋಗುವುದು ಆಕೆಯ ತಾಯ್ತನದ ಬಯಕೆ ಬಯಕೆಯಾಗಿಯೇ ಉಳಿದಿರುವುದನ್ನು ಸೂಚಿಸುವಂತಿದೆ. ಗುಲಾಬಿ ಮೃದು ಪಾದಗಳಿಗಾಗಿನ ಅವಳ ಹುಡುಕಾಟ ಹುಡುಕಾಟವಾಗಿಯೇ ಉಳಿದಿರುವುದನ್ನು ಸಂಕೇತಿಸುತ್ತದೆ.

ಕಣ್ಣಿಗೆ ಕಾಣುವ ದೇವರು ಎಂದರೆ ತಾಯಿ, ಒಂಭತ್ತು ತಿಂಗಳು ತನ್ನ ಗರ್ಭದಲ್ಲಿ ತನ್ನ ಮಗುವನ್ನು ಹೊತ್ತುಕೊಂಡಿದ್ದರು ಆಕೆಗೆ ಭಾರ ಎನಿಸುವುದೇ ಇಲ್ಲ. ತನ್ನ ಮಕ್ಕಳಿಗಾಗಿ ಎಂತಹ ತ್ಯಾಗವನ್ನಾದರೂ ಮಾಡುತ್ತಾಳೆ. ಅವರ ಖುಷಿಯಲ್ಲೇ ತನ್ನ ಖುಷಿ ಕಾಣುತ್ತಾಳೆ. ಆದರೆ ಅದೇ

ಮಕ್ಕಳು ಬೆಳೆದು ದೊಡ್ಡವರಾದ ಮೇಲೆ ವಯಸ್ಸಾದ ತಾಯಿಯನ್ನು ತಮಗೆ ಭಾರ ಎಂಬಂತೆ ನೋಡುತ್ತಾರೆ. ಆ ಭಾರವನ್ನು ಇಳಿಸಿಕೊಳ್ಳುವ ದಾರಿಯನ್ನು ಹುಡುಕುತ್ತಾರೆ. 'ಮರ ಗಿಡ ಬಳ್ಳಿ' ಕಥೆಯಲ್ಲಿ ವಯಸ್ಸಾಗಿ ಕಾಯಿಲೆ ಬಿದ್ದ ತಾಯಿಯ ಜವಾಬ್ದಾರಿಯನ್ನು ಹೊರಲು ಮಕ್ಕಳು ಸಿದ್ಧರಾಗದೆ ತಮ್ಮ ಸ್ವಾರ್ಥಕ್ಕಾಗಿ ತಾಯಿಯನ್ನು ನೋಡಿಕೊಳ್ಳಲು ಒಬ್ಬ ನರ್ಸನ್ನು ಗೊತ್ತುಮಾಡಿ ಜಾರಿಕೊಳ್ಳಲು ಸಿದ್ಧರಾದರೂ ತಾಯಿ "ಪಾಪ, ಬೆಳೆಯುವ ವಯಸ್ಸು ಕಂಡ ದಿನಗಳಿಗಿಂತ ಕಾಣದ ದಿನಗಳೇ ಹೆಚ್ಚು ಭರವಸೆಯ ದಿನಗಳಿಗಾಗಿ ಹಾತೊರೆಯುವ ದಿನಗಳು ಈ ಮಕ್ಕಳದು! ನಾನೊಂದು ಜಿಗುಪ್ಸೆಯ ವಸ್ತುವಾಗಿ ಅವರ ನಡುವಿರಲು ನನಗೆ ಹಕ್ಕಿದೆಯೇ? ಬಿದ್ದು ಹೋಗುವ ಈ ದೇಹಕ್ಕಾಗಿ, ಇದನ್ನು ಬಿಟ್ಟು ಇನ್ನೊಂದು ಹೊಸ ಬದುಕನ್ನು ಪ್ರವೇಶಿಸಲು ಸನ್ನದ್ಧವಾಗುತ್ತಿರುವ ಈ ಆತ್ಮಕ್ಕಾಗಿ, ಈ ಜೀವಗಳೆಲ್ಲ ಕಳವಳಿಸಬೇಕೆ?" ಎಂದು ಯೋಚಿಸುವುದು ತಾಯಿಯ ವ್ಯಕ್ತಿತ್ವ ಎಷ್ಟು ದೊಡ್ಡದು ಎಂಬುದನ್ನು ತೋರಿಸುತ್ತದೆ. ಸಾಯುವ ಕ್ಷಣದಲ್ಲೂ ತಾಯಿ ತನ್ನ ಮಕ್ಕಳ ಬಗ್ಗೆಯೇ ಅವರ ಭವಿಷ್ಯದ ಬಗ್ಗೆಯೇ ಯೋಚಿಸುತ್ತಾಳೆ ಇದು ಅವಳ ನಿಸ್ವಾರ್ಥ ವ್ಯಕ್ತಿತ್ವಕ್ಕೆ ಸಾಕ್ಷಿ.

ತಾಯಿಯಾಗಿ ಮಕ್ಕಳ ಬಗ್ಗೆ, ಹೆಂಡತಿಯಾಗಿ ಗಂಡನ ಬಗ್ಗೆ ಯೋಚಿಸುವ ಹೆಣ್ಣು ಮದುವೆಯಾದ ನಂತರ ಮಗಳಾಗಿ ತಾಯಿಯ ಬಗ್ಗೆ ಯೋಚಿಸುವುದು ಕಡಿಮೆ. ಆ ಜವಾಬ್ದಾರಿ ತನ್ನ ಅಣ್ಣ ತಮ್ಮಂದಿರದು ಎಂದು ತನ್ನ ಜವಾಬ್ದಾರಿಯಿಂದ ನುಣಚಿಕೊಳ್ಳುತ್ತಾಳೆ. "ತಾನು ಕೊಟ್ಟ ಹೆಣ್ಣಲ್ಲವೆ?" ಎಂದು ತನಗೆ ತಾನೆ ಸಮಾಧಾನ ಹೇಳಿಕೊಳ್ಳುವ ಹೆಣ್ಣುಮಕ್ಕಳು ಇಂತಹ ಸಮಯದಲ್ಲಿ ಬಹಳ ಬೇಗ ಪರಕೀಯರಾಗಲು ಇಷ್ಟಪಡುತ್ತಾರೆ. ತನ್ನನ್ನು ಒಂಭತ್ತು ತಿಂಗಳು ಹೊತ್ತು, ಹೆತ್ತು ಸಾಕಿ ಬೆಳೆಸಿ ಮದುವೆಮಾಡಿಕೊಟ್ಟ ಋಣವನ್ನು ಮರೆಯುತ್ತಾರೆ. ತಾಯಿಯಾಗಿ ತನ್ನ ಜವಾಬ್ದಾರಿ ನಿರ್ವಹಿಸುವ ಹೆಣ್ಣು ಮಗಳಾಗಿ ಬವಾಬ್ದಾರಿಯಿಂದ ನುಣಚಿಕೊಳ್ಳಲು ಯತ್ನಿಸುವುದು ಹೆಣ್ಣಿನ ಬೇರೆ ಬೇರೆ ವ್ಯಕ್ತಿತ್ವಗಳನ್ನು ಪ್ರದರ್ಶಿಸುತ್ತದೆ.

ಹೆಣ್ಣು ಏಕಕಾಲದಲ್ಲಿ ತಾಯಿಯೂ ಹೌದು, ಅತ್ತೆಯೂ ಹೌದು, ತಾಯಿಯಾಗಿ ಎಲ್ಲ ಮಕ್ಕಳನ್ನು ಸಮನಾಗಿ ನೋಡಿಕೊಳ್ಳುವ ಕರ್ತವ್ಯ ಇರುವಂತೆ, ಅತ್ತೆಯಾಗಿಯೂ ತನ್ನ ಕರ್ತ್ಯವ್ಯ ನಿರ್ವಹಿಸಬೇಕಾದ ಜವಾಬ್ದಾರಿ ಇರುತ್ತದೆ. ಹೊಸದಾಗಿ ಮನೆ ಮಾಡಿದ ಕಿರಿಯ ಮಗಳಿಗೂ, ತುಂಬು ಗರ್ಭಿಣಿಯಾಗಿದ್ದ ಹಿರಿಯ ಮಗಳಿಗೂ ಹಾಗೂ ಒಂದು ಮಗುವಿಗೆ ಜನ್ಮ ನೀಡಿ ಆಪರೇಷನ್ ಆದ ಕಾರಣದಿಂದ ನಿತ್ರಾಣಳಾಗಿದ್ದ ಸೊಸೆಗೂ ತನ್ನ ಅಗತ್ಯ ಇರುವುದನ್ನು ಕಂಡು ತಾಯಿಯಾಗಿ ತನ್ನ ಇಬ್ಬರು ಮಕ್ಕಳು ಹಾಗೂ ಅತ್ತೆಯಾಗಿ ಸೊಸೆಗೆ ಸಂಬಂಧಿಸಿದಂತೆ ಏಕಕಾಲದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸುವ ದಾರಿ ಕಾಣದೆ ಸಂದಿಗ್ಧ ಸ್ಥಿತಿಯಲ್ಲಿ ನರಳುವ ಹೆಣ್ಣನ್ನು 'ಸಂಸಾರ'

ಕಥೆಯಲ್ಲಿ ಕಂಡರೆ 'ವರ್ತುಲ' ಕಥೆಯಲ್ಲಿ ಅತ್ತೆಯಾಗಿ ತನ್ನ ಮಗನನ್ನು ದೂರ ಮಾಡಿದವಳು ಎಂಬ ಭಾವನೆಯಿಂದ ಸೊಸೆಯನ್ನು ನೋಡುವ ಹೆಣ್ಣು ತಾಯಿಯಾಗಿ ತನ್ನ ಮಗಳ ವಿಷಯದಲ್ಲಿ ಇದಕ್ಕೆ ವಿರುದ್ಧವಾಗಿ ಯೋಚಿಸುತ್ತಾಳೆ. ಸೊಸೆ ನಮ್ಮ ಸೇವೆ ಮಾಡಿಕೊಂಡು ನಮ್ಮ ಜೊತೆ ಇರಲಿ ಎಂದು ಬಯಸುವ ಅತ್ತೆ, ತಾಯಿಯಾಗಿ ಹತ್ತು ಹದಿನೈದು ಜನ ಇರುವ ತುಂಬಿದ ಮನೆಯಲ್ಲಿ ಮಡಿಮೈಲಿಗೆ ಗಲಾಟೆಯಲ್ಲಿ ನನ್ನ ಮಗಳು ನಿಜಕ್ಕೂ ಇದ್ದಾಳೆಯೇ ಎಂದು ಅದಕ್ಕೆ ಹುಡುಗ ಆ ಮನೆಯಿಂದ ದೂರ ಮದರಾಸಿನಲ್ಲಿ ಕೆಲಸದಲ್ಲಿ ಇರುವ ಕಾರಣ ಮಗಳನ್ನು ಮದುವೆ ಮಾಡಿಕೊಡಲು ಯೋಚಿಸುತ್ತಾಳೆ. ಸೊಸೆಗೆ ಒಂದು ನೀತಿ ಮಗಳಿಗೆ ಒಂದು ನೀತಿ ಎಂಬ ಧೋರಣೆಯಲ್ಲಿ ಸ್ತ್ರೀಯರ ಸಂಬಂಧಗಳಲ್ಲಿ ಇರುವ ತಾರತಮ್ಯ ಗೋಚರವಾಗುತ್ತದೆ.

"ಎಲ್ಲೋ ಹುಟ್ಟಿ ಎಲ್ಲೋ ಬೆಳೆದ ಕೆಲ ಹೆಂಗಸರು ಮದುವೆಯಾಗಿ ಮನೆ ಹೊಗ್ಗಿದ ಕೂಡಲೇ ಹೇಗೆ ಗಂಡನ ಮನೆಯವರೊಂದಿಗೆ ನೀರಿನಲ್ಲಿರುವ ಮೀನಿನಂತೆ ಬೆರೆತುಬಿಡುತ್ತಾರೆ." [1] ಎಂತಹ ಆಶ್ಚರ್ಯ ತಾನು ಹುಟ್ಟಿ ಬೆಳೆದ ಮನೆ, ತಂದೆ-ತಾಯಿ, ಸಹೋದರ, ಸಹೋದರಿ, ಸ್ನೇಹಿತರು ಎಲ್ಲವನ್ನು ಬಿಟ್ಟು ಬರುವ ಹೆಣ್ಣು ತಾನು ಮದುವೆಯಾಗಿ ಹೋದ ಮನೆಗೆ, ಅಲ್ಲಿನ ಜನರಿಗೆ ಹೊಂದಿಕೊಳ್ಳಲು ಯತ್ನಿಸುತ್ತಾಳೆ. ಆದರೂ ಅವಳನ್ನು ಪರಕೀಯಳಂತೆ ಕಾಣುವುದರ ಜೊತೆಗೆ ತಮ್ಮ ಮಗನನ್ನು ತಮ್ಮಿಂದ ದೂರ ಮಾಡಿದ ಅಪರಾಧಿಯಂತೆ ಕಾಣುತ್ತಾರೆ. ಮಗ ಏನೇ ಮಾಡಿದರೂ ಹಿಂದೆ ಸೊಸೆಯ ಪಾತ್ರವಿದೆ ಎಂದೇ ಭಾವಿಸುತ್ತಾರೆ. ಎಲ್ಲದಕ್ಕೂ ಸೊಸೆಯಾಗಿ ಬಂದ ಹೆಣ್ಣನ್ನೇ ದೂಷಿಸುತ್ತಾರೆ. 'ವರ್ತುಲ' ಕಥೆಯ ಕುಸುಮಳ ಅತ್ತೆ ತನ್ನ ಮಗ ತಮ್ಮಿಂದ ದೂರವಾಗಲು ಸೊಸೆಯೇ ಕಾರಣ ಎಂಬ ಭಾವನೆಯಿಂದ ಮಾತು ಮಾತಿಗೆ ಸೊಸೆಯನ್ನೇ ದೂಷಿಸುತ್ತಾರೆ. ಮದುವೆಯಾಗುವವರೆಗೆ ನೆಪಮಾತ್ರಕ್ಕೆ ವ್ಯವಸಾಯ ಮಾಡಿಕೊಂಡಿದ್ದ ಮಗ ಕುಸುಮಳನ್ನು ಮದುವೆಯಾದ ವರ್ಷವೇ ಕೆಲಸ ಸಿಕ್ಕಿ ಹೊರ ಬಿದ್ದದ್ದು ಅವರಲ್ಲಿ ಇದಕ್ಕೆಲ್ಲ ಕುಸುಮಳೇ ಕಾರಣ ಎಂಬ ಭಾವನೆ ಬೇರು ಬಿಡಲು ಕಾರಣವಾಯಿತು. ಇನ್ನೊಂದು ಮನೆಯ ಹೆಣ್ಣು ಸೊಸೆಯಾಗಿ ತನ್ನ ಮನೆಗೆ ಬಂದರೂ ಅವಳನ್ನು ತನ್ನ ಮಗಳಂತೆ ಎಂದು ಒಪ್ಪಿಕೊಳ್ಳದ ಅತ್ತೆಯ ಮನಸ್ಥಿತಿಯನ್ನು ಇದು ಸೂಚಿಸುತ್ತದೆ. ಅತ್ತೆಯ ನಿಂದನೆಯಿಂದ ಮನನೊಂದ ಕುಸುಮ ತನ್ನ ಗಂಡನಿಗೆ ಕೆಲಸಕ್ಕೆ ರಾಜೀನಾಮೆ ನೀಡಿ ತೋಟ ಮನೆ ನೋಡಿಕೊಂಡು ಊರಿನಲ್ಲೇ ಇರೋಣ ಎಂದರೂ ಅದಕ್ಕೆ ಒಪ್ಪದ ಗಂಡ, ಮಗ ದೂರಾಗಲು ಸೊಸೆಯೇ ಕಾರಣ ಎಂದು ದೂಷಿಸುವ ಅತ್ತೆ ಇವರ ಮಧ್ಯೆ

---

[1] ಅಲೆಗಳಲ್ಲಿ ಅಂತರಂಗ (2006), ಕ್ರೌಂಚಪಕ್ಷಿಗಳು, ಒಗಟು ಪು.ಸಂ.636

ಕುಸುಮ ಮಾನಸಿಕವಾಗಿ ಜರ್ಜರಿತಳಾಗುತ್ತಾಳೆ. ಗಂಡಿನ ತಪ್ಪಿಗೂ ಹೆಣ್ಣು ಹೆಣ್ಣನ್ನೇ ದೂಷಿಸುವುದನ್ನು ಇಲಿ ನಾವು ಕಾಣಬಹುದು.

ಹೆಣ್ಣನ್ನು ಯಾವಾಗಲೂ ತಾಯಿ, ಹೆಂಡತಿ, ಸಹೋದರಿ, ಮಗಳು ಈ ಚೌಕಟ್ಟಿನಲ್ಲಿ ಮಾತ್ರ ನೋಡುವ ಸಮಾಜ ಅವಳು ಸ್ವತಂತ್ರಳಾಗಿರುವುದನ್ನು ಸಹಿಸುವುದಿಲ್ಲ. ಅವಳು ಯಾವಾಗಲೂ ಗಂಡಿನ ಆಶ್ರಯದಲ್ಲಿದ್ದರೆ ಮಾತ್ರ ಅವಳಿಗೆ ಬೆಲೆ ಇಲ್ಲದಿದ್ದರೆ ಅವಳನ್ನು ಸಮಾಜ ನೋಡುವ ರೀತಿಯೇ ಬೇರೆಯಾಗಿರುತ್ತದೆ. ಆದ್ದರಿಂದ ಗಂಡ ಎಂತಹವನಾದರೂ, ಎಷ್ಟೇ ಹಿಂಸೆ ನೀಡಿದರೂ, ಏನೇ ಮಾಡಿದರೂ ಸಹಿಸಿಕೊಂಡು ಅವನ ಜೊತೆಯೇ ಇರಬೇಕಾದ ಅನಿವಾರ್ಯಸ್ಥಿತಿ ಹೆಣ್ಣಿನದಾಗಿತ್ತು. ಒಂದು ವೇಳೆ ಗಂಡನಿಂದ ದೂರಾದರೆ ಆಕೆಯನ್ನು ಆರೋಪಿ ಸ್ಥಾನದಲ್ಲಿರಿಸಿ ನೂರಾರು ಪ್ರಶ್ನೆ ಕೇಳಿ ಹಿಂಸಿಸುವುದನ್ನು ಕಾಣುತ್ತೇವೆ.

'ಒಂದು ಅಪರಾಧ ತನಿಖೆ' ಕಥೆಯ ಕುಸುಮ ಗಂಡನನ್ನು ಬಿಟ್ಟು ಬಂದಿದ್ದರಿಂದ ಅವಳು ಏನೋ ಅಪರಾಧಮಾಡಿದಂತೆ ಅವಳನ್ನು ಆರೋಪಿ ಸ್ಥಾನದಲ್ಲಿರಿಸಿ ಬಾಬಿ ನೂರಾರು ಪ್ರಶ್ನೆಗಳನ್ನು ಕೇಳುವ ಮೂಲಕ ತನಿಖೆ ನಡೆಸುವುದನ್ನು ಕಾಣಬಹುದು. "ಅಲ್ಲ ಗಂಡನ್ನ ಬಿಟ್ಟು ಬಂದದ್ದು ಯಾಕೆ ಎಂತ? ಕುಡುಕನ, ಸೂಳೆಗಾರನ, ಅಥವಾ ನಿಮಗೆ ಹೊಡೆಯುತ್ತಿದ್ದನ......" "ಇಷ್ಟಕ್ಕೂ ಗಂಡನ ಮನೆಯಿಂದ ಓಡಿ ಬಂದದ್ದು ಯಾಕೆ ಅಂತ? ಅಷ್ಟು ಜನರಿಗೆ ನೀವೊಬ್ಬರು ಆಗಲಿಲ್ಲ ಎಂದರೆ ನಿಮ್ಮದೇ ತಪ್ಪಿರಬೇಕು...... ನೀವು ಉತ್ತರವೇ ಕೊಡದಿದ್ದರೆ ನಮಗೆ ಹೇಗೆ ತಿಳಿಯಬೇಕು?" ನೀವು ಕೊನೆಯ ಪ್ರಶ್ನೆ, ನೀವೇ ಬಿಟ್ಟು ಬಂದಿರಾ...? ಅಥವಾ ನಿಮ್ಮ ಗಂಡನೇ ನಿಮ್ಮನ್ನ ಬಿಟ್ಟನಾ......? ಅಥವಾ ಅವರೆಲ್ಲ ಸೇರಿ ಓಡಿಸಿದರ... ಎಂದೆಲ್ಲ ಪ್ರಶ್ನೆಗಳನ್ನು ಕೇಳುವ ಬಾಬಿ ಇಲ್ಲಿ ಸಮಾಜವನ್ನು ಪ್ರತಿನಿಧಿಸುತ್ತಾಳೆ. ಸಮಾಜ ಕುಸುಮ ಗಂಡನನ್ನು ಬಿಟ್ಟು ಬಂದದ್ದು ಅವಳ ವೈಯಕ್ತಿಕ ವಿಷಯವಾದರೂ ಅದರ ಬಗ್ಗೆ ತಿಳಿದುಕೊಳ್ಳುವ ಕುತೂಹಲ ಸಮಾಜಕ್ಕೆ. ಸಮಾಜದ ನೂರಾರು ಪ್ರಶ್ನೆಗಳ ಬಾಣಗಳು ಕುಸುಮಳನ್ನು ಹಿರಿದು ಹಿಂಸಿಸುತ್ತವೆ, ಆ ಹಿಂಸೆಯ ಕೂಪದಿಂದ ಕುಸುಮ ಹೊರಬಂದರೂ ಸಮಾಜದ ಪ್ರಶ್ನೆಗಳೆಂಬ ಬಾಣಗಳು ಹಿಂಸಿಸಿ ಆಕೆಯನ್ನು ನೆಮ್ಮದಿಯಿಂದ ಬದುಕಲು ಬಿಡುವುದಿಲ್ಲ.

ಗಂಡನಿಂದ ದೂರಾದ ಹೆಣ್ಣನ್ನು ಹೆಣ್ಣೇ ಕೀಳಾಗಿ ನೋಡುವುದನ್ನು ಕಾಣುತ್ತೇವೆ. 'ಚಿಪ್ಪು' ಕಥೆಯ ಉಷೆ ಗಂಡನಿಂದ ವಿಚ್ಛೇದನ ಪಡೆದುಕೊಂಡು ಬೇರೆಯಾಗಿ ಬದುಕುತ್ತಿರುವ ಹೆಣ್ಣು ಮದುವೆಯ ವಿಷಯದಲ್ಲಿ ಗೊಂದಲದಲ್ಲಿದ್ದ ಯಶಿಗೆ ತನ್ನ ಅನುಭವದಿಂದ ಕೆಲವು ಬುದ್ಧಿಮಾತು

ಹೇಳುತ್ತಾಳೆ ಅದನ್ನು ಕೇಳಿ ಮನದಲ್ಲಿ ಯೋಚಿಸುತ್ತಾ ಒಳ ಬಂದ ಯಶಿಗೆ ಅವಳ ತಾಯಿ "ಆ ದರಿದ್ರಗೆಟ್ಟವಳೊಡನೆ ಇವಳಿಗೆ ಮಾತುಕತೆ. ಬಾಲ ಹೋದ ನರಿ ಅವಳು. ಅವಳೊಡನೆ ಇವಳಿಗೇಕೆ ಸ್ನೇಹ?" ಎಂದು ಬೈಯ್ಯುವುದು ಪುರುಷ ಪ್ರಧಾನ ನಿರ್ಮಿತ ಸಮಾಜ ಗಂಡನಿಂದ ದೂರಾದ ಹೆಣ್ಣನ್ನು ಯಾವ ರೀತಿ ನೋಡುತ್ತದೆ ಎಂಬುದಕ್ಕೆ ನಿದರ್ಶನ. ಯಶಿಯ ತಾಯಿಯು ಹೆಣ್ಣಾಗಿ ಇನ್ನೊಂದು ಹೆಣ್ಣಿನ ಬಗ್ಗೆ ಈ ರೀತಿ ಕೀಳಾಗಿ ಮಾತನಾಡುವುದು ವಿಪರ್ಯಾಸವಾದರೂ ಸತ್ಯ ಏಕೆಂದರೆ ಯಶಿಯ ತಾಯಿಯ ಮನಸ್ಸನ್ನು ನಿರ್ಮಿಸಿರುವುದು ತಲೆತಲಾಂತರದಿಂದ ಬಂದ ಪುರುಷಕೇಂದ್ರಿತ ಸಮಾಜ. ಉಷೆಯನ್ನು ಬಾಲ ಹೋದ ನರಿಗೆ ಹೋಲಿಸಿರುವುದು ಬಾಲ ಇದ್ದರೆ ಮಾತ್ರ ನರಿ ಹೇಗೆ ಲಕಣವೋ. ಹಾಗೆಯೇ ಗಂಡನಿದ್ದರೆ ಮಾತ್ರ ಹೆಣ್ಣಿಗೆ ಲಕ್ಷಣ ಎಂಬ ಧೋರಣೆಯನ್ನು ಸೂಚಿಸುತ್ತದೆ. ಅಂತಹ ಹೆಣ್ಣು ಸ್ನೇಹಕ್ಕೂ ಯೋಗ್ಯವಲ್ಲ ಎಂದು ವ್ಯವಸ್ಥೆ ತೀರ್ಮಾನಿಸಿ ಬಿಡುತ್ತದೆ. ಸಮಾಜದಲ್ಲಿ ಆಕೆಗೆ ಯಾವುದೇ ಬೆಲೆ ಸಿಗುವುದಿಲ್ಲ ಇದಕ್ಕೆ ಹೆದರಿಯೇ ಎಷ್ಟೋ ಹೆಣ್ಣು ಮಕ್ಕಳು ಗಂಡನೊಡನೆ ಎಷ್ಟೇ ಘರ್ಷಣೆ ನಡೆದರೂ, ಗಂಡನ ಮನೆಯವರು ಎಷ್ಟೇ ಹಿಂಸೆ ನೀಡಿದರೂ ಅದರಿಂದ ಹೊರ ಬರಲು ಹೆದರುತ್ತಾರೆ. ಹೆಣ್ಣನ್ನು ಹಿಡಿತದಲ್ಲಿಟ್ಟುಕೊಳ್ಳುವ ಪುರುಷ ವ್ಯವಸ್ಥೆಯ ಹುನ್ನಾರ ಇದು ಹೆಣ್ಣನ್ನು ಮಾನಸಿಕವಾಗಿ ಕುಗ್ಗಿಸಿ ವ್ಯವಸ್ಥೆಯೊಳಗೆ ಬಂಧಿಯಾಗಿರಿಸುವ ತಂತ್ರ. ಈ ಎಲ್ಲ ನಿಯಂತ್ರಣಗಳನ್ನು ಮೀರಿ ಸ್ವತಂತ್ರವಾಗಿ ಬದುಕನ್ನು ನಡೆಸುವ ಹೆಣ್ಣುಮಕ್ಕಳನ್ನೂ ಸಮಾಜದಲ್ಲಿ ಕಾಣುತ್ತೇವೆ.

ವೈದೇಹಿಯವರ ಕಥೆಗಳಲ್ಲಿನ ಸ್ತ್ರೀ ಪ್ರಪಂಚ ಬಹಳ ವಿಶಾಲವಾದದ್ದು. ಅಲ್ಲಿ ಬಗೆ ಬಗೆಯ ವ್ಯಕ್ತಿತ್ವದ ಹೆಣ್ಣನ್ನು ಕಾಣಬಹುದು. "ವಾಣಿಮಾಯಿ" ಕಥೆಯ ವಾಣಿಮಾಯಿ ಕೇವಲ ಮೆಟ್ಟಿಗಾಗಿ ಅಷ್ಟೊಂದು ಹಂಬಲಿಸುವುದು ನೋಡಿದವರಿಗೆ ಹಾಸ್ಯ ಎನಿಸುವಂತಿದ್ದರೂ ವಾಣಿಮಾಯಿಗೆ ಅದೊಂದು ಗಂಭೀರ ವಿಷಯವೇ ಆಗಿದೆ. ಏಕೆಂದರೆ ಹೆಣ್ಣು ಮಕ್ಕಳು ಮೆಟ್ಟು ಧರಿಸುವುದಕ್ಕೂ ಹೋರಾಡಬೇಕಾದ ಸ್ಥಿತಿ ನಮ್ಮ ಸಮಾಜದಲ್ಲಿ ಇತ್ತು. ಮೆಟ್ಟು ಧರಿಸುವುದು ಏನಿದ್ದರೂ ಗಂಡಿನ ಹಕ್ಕು. ಹೆಣ್ಣು ಮಕ್ಕಳಿಗೆ ಮೆಟ್ಟು ಧರಿಸುವ ಸ್ವಾತಂತ್ರ್ಯವೂ ಇರಲಿಲ್ಲ. ಅಂತಹ ಹೆಣ್ಣುಮಕ್ಕಳನ್ನು ಕೀಳಾಗಿ ನೋಡಲಾಗುತ್ತಿತ್ತು. "ಮೆಟ್ಟು ಹಾಕುವುದು ಒಂದೋ ಬೊಂಬಾಯಿ ಸೂಳೆಯರು, ಇಲ್ಲ, ಊರ ನಾಯಕಸಾನಿಯರು. ಹೊರತು ಮರ್ಯಾದಸ್ಥರಲ್ಲ" ಎಂಬ ಭಾವನೆ ಇದ್ದ ಸನ್ನಿವೇಶದಲ್ಲಿ ವಾಣಿಮಾಯಿ ಮೆಟ್ಟು ಹೊಂದುವುದು ಸುಲಭವಾದ ಸಂಗತಿಯೇನೂ ಆಗಿರಲಿಲ್ಲ. ಹಾಗೆಂದು ಸುಮ್ಮನಿರುವ ಜಾಯಮಾನದ ಹೆಣ್ಣು ವಾಣಿಮಾಯಿ ಅಲ್ಲ. ಕೊನೆಗೆ ಹಠಮಾಡಿ ಮೆಟ್ಟು ಹೊಂದಬೇಕೆಂಬ ತನ್ನ ಆಸೆಯನ್ನು ಈಡೇರಿಸಿಕೊಳ್ಳುವುದು ವಿಶೇಷವೇ ಆಗಿದೆ. ಹೆಣ್ಣು ಕೇವಲ

ಕಾಲಿಗೆ ಧರಿಸುವ ಮಟ್ಟಿಗಾಗಿ ಇಷ್ಟೊಂದು ಹೋರಾಟ ಮಾಡಬೇಕಾದ ಸನ್ನಿವೇಶ ಇದ್ದುದ್ದು ಹೆಣ್ಣಿನ ಸ್ಥಿತಿ ಹೇಗಿತ್ತೆಂಬುದನ್ನು ಸೂಚಿಸುತ್ತದೆ.

ಕೇವಲ ಮಟ್ಟಿಗಾಗಿ ಹಠಮಾಡುವ ಹೆಣ್ಣನ್ನು ವಾಣಿಮಾಯಿ ಕಥೆಯಲ್ಲಿ ಕಂಡರೆ 'ಬರೀ ಒಂದು ಪೆಟ್ಟಿಗೆ' ಕಥೆಯಲ್ಲಿ ಬರೀ ಒಂದು ಪಟ್ಟಿಗೆಯನ್ನು ಪಡೆದೇ ತೀರಬೇಕೆಂದು ಹಠಮಾಡಿ ಕೊನೆಗೂ ತನ್ನ ಹಠವಲ್ಲಿ ಗೆಲ್ಲುವ ಹೆಣ್ಣನ್ನು ಕಾಣುತ್ತೇವೆ. ತನ್ನ ಗತ ಜೀವನದೊಂದಿಗೆ ಸಂಬಂಧ ಹೊಂದಿದ್ದ ಪೆಟ್ಟಿಗೆಯನ್ನು ಹಳೆಯ ನೆನೆಪುಗಳ ಪ್ರತೀಕವಾಗಿ ತಾನು ಪಡೆದುಕೊಳ್ಳಬೇಕೆಂದು ಹಂಬಲಿಸುವ ದೊಡಮ ಅದಕ್ಕಾಗಿ ಸಾಕಷ್ಟು ಪ್ರಯತ್ನಿಸಿ ಸೋತರೂ ಪ್ರಯತ್ನವನ್ನು ಬಿಡದೆ ಕೊನೆಗೆ ಪೆಟ್ಟಿಗೆಯನ್ನು ಪಡೆದುಕೊಳ್ಳುವುದು ಹೆಣ್ಣಿನ ಇಚ್ಛಾಶಕ್ತಿಯ ಪ್ರತೀಕ.

ಸದಾ ನಿಯಂತ್ರಣದಲ್ಲಿರುವ ಹೆಣ್ಣಿನ ಮನಸ್ಸು, ತನಗೆ ಇಷ್ಟ ಬಂದಂತೆ ಇರಲು ಬಯಸುವುದು ಸಹಜ ಇಂತಹ ಒಂದು ಬಯಕೆಯನ್ನು 'ಗೂಡಿನೊಳಗೆ ಒಂದು ಹಕ್ಕಿ' ಕಥೆಯ ಮಾಲತಿಯಲ್ಲಿ ಕಾಣಬಹುದು. ಚಿಕ್ಕಂದಿನಿಂದಲೂ ಹೀಗಿರಬೇಕು, ಹಾಗಿರಬೆಕು ಎಂಬ ಚೌಕಟ್ಟಿನೊಳಗೆ ಬೆಳೆಯುವ ಹೆಣ್ಣಿಗೆ ಸ್ವತಂತ್ರವೆಂದರೇನು ಎಂಬುದರ ಅರಿವೇ ಇಲ್ಲದೆ ಬಂಧನದಲ್ಲಿರುವಂತೆ ಭಾಸವಾಗುತ್ತದೆ. ಆದರೆ ವೈದೇಹಿಯವರ ಹೆಣ್ಣು ಇಂತಹ ನಿರ್ಬಂಧಗಳನ್ನು ಸಹಿಸದೆ ಸ್ವತಂತ್ರವಾಗಿ ಇರಲು ಬಯಸುವುದು ಎಲ್ಲ ಹೆಣ್ಣುಮಕ್ಕಳ ಬಯಕೆಯೇ ಆಗಿದೆ.

'ಬಾಬುಲಿ, ತಾಯಿ ಮತ್ತು ನಸೀಬು' ಕಥೆಯ ಬಾಬುಲಿ ತಾಯಿ ಶ್ರಮಜೀವಿ, ಕಾಯಕವೇ ಕೈಲಾಸ ಎಂಬುದನ್ನು ಅಕ್ಷರಸಃ ಅರ್ಥಮಾಡಿಕೊಂಡು ಅದರಂತೆ ನಡೆಯುವವಳು. "ಮನುಷ್ಯನಿಗೆ ಸ್ವಂತದ್ದು ಅಂತ ಒಂದು ಮನೆ ಬೇಕು. ನನ್ನ ಮನೆ ನನ್ನ ಅಂಗಳ ಅಂತ ಇಲ್ಲದಿದ್ದರೆ ಅವ ಈ ಭೂಮಿ ಮೇಲೆ ಇರಬಾರದು" ಎನ್ನುವ ಬಾಬುಲಿ ತಾಯಿ ಅದಕ್ಕಾಗಿ ಇದ್ದ ಚಿನ್ನ ಚಿಗುರು ಎಲ್ಲವನ್ನು ಮಾರಿ ಜೊತೆಗೆ ಸ್ವಲ್ಪ ಸಾಲಮಾಡಿ ಸ್ವಂತ ಮನೆ ಹೊಂದಬೇಕೆಂಬ ತನ್ನ ಕನಸನ್ನು ಈಡೇರಿಸಿಕೊಳ್ಳುವ ಛಲವಾದಿ ಆ ಸಾಲ ತೀರಿಸಲು ಆಕೆ ಮಾಡದ ಕೆಲಸವಿಲ್ಲ. ಹಾಲು, ಮಜ್ಜಿಗೆ ಮಾರುವುದು ಕಸೂತಿ ಹಾಕುವುದು, ಗರಿ ಎಣೆಯುವುದು, ಬಗೆ ಬಗೆಯ ತಿಂಡಿಗಳನ್ನು ಮಾಡಿ ಮಾರುವುದು, ಒಂದೇ ಎರಡೇ "ಎಷ್ಟೊತ್ತಿಗೆ ಕಂಡರೂ ಕೆದರಿದ ತಲೆ, ವಿಶ್ರಮಿಸದ ಕಣ್ಣಿನ" ಬಾಬುಲಿ ತಾಯಿ ಅಷ್ಟು ಆಸೆಯಿಂದ ಶ್ರಮಪಟ್ಟು ಕೊಂಡುಕೊಂಡ ಮನೆಯನ್ನು ಮಾರಿಕೊಳ್ಳಬೇಕಾಗಿ ಬಂದದ್ದು ವ್ಯವಸ್ಥೆಯ ಅಣಕವೇ ಸರಿ. ಸ್ವಂತ ಮನೆಯ ತನ್ನ ಆಸೆಯನ್ನು ಈಡೇರಿಸಿಕೊಂಡರೂ ಕೊನೆಗೆ ಅದನ್ನು ಉಳಿಸಿಕೊಳ್ಳಲಾಗದ ನೋವಿನಲ್ಲಿ ನರಳುವ ಹೆಣ್ಣಾಗಿ ಬಾಬುಲಿ ತಾಯಿ ಕಾಣುತ್ತಾಳೆ.

ಹೆಣ್ಣಿನ ಅಂತರಂಗದಲ್ಲಿ ನಡೆಯುವ ವ್ಯಾಪಾರವನ್ನು ವೈದೇಹಿಯವರು ಯಾವ ಮುಚ್ಚುಮರೆ ಇಲ್ಲದೆ ತೆರೆದಿಟ್ಟಿದ್ದಾರೆ. ಹದಿಹರೆಯದಲ್ಲಿ ಗಂಡಸ್ನು ನೋಡಿದಾಗ, ಹೆಣ್ಣಿನ ಮನದಲ್ಲಿ ಉಂಟಾಗುವ ಭಾವನೆಗಳನ್ನು ಅವರ 'ಮರೆಯಾದವರು' ಕಥೆಯಲ್ಲಿ ಕಾಣಬಹುದು. ಆ ಮನಸ್ಸಿನಲ್ಲಿ ತಮ್ಮ ಸಂಪರ್ಕಕ್ಕೆ ಬರುವ ಗಂಡಸರ ಬಗ್ಗೆ ಏನೋ ಒಂದು ಆಕರ್ಷಣೆ ಹೆಣ್ಣಿನಲ್ಲಿ ಉಂಟಾಗುತ್ತದೆ. ತಮ್ಮ ಶಿಕ್ಷಕರಿರಬಹುದು, ಜೊತೆಯಲ್ಲಿ ಓದುವ ಹುಡುಗನಿರಬಹುದು, ಎಲ್ಲೋ ನೋಡಿದ ಹುಡುಗನಿರಬಹುದು ಎಲ್ಲರನ್ನು ನೋಡುವ ದೃಷ್ಟಿ ಒಂದೇ ಆಗಿರುತ್ತದೆ. ಆದರೆ ಸಮಾಜದ ನಿರ್ಬಂಧಗಳಿಗೆ ಹೆದರಿ ಆ ಭಾವನೆಗಳನ್ನೆಲ್ಲ ಎದೆಯಲ್ಲಿ ಬಚ್ಚಿಟ್ಟುಕೊಂಡರೂ ಎಂದಾದರೂ ಒಮ್ಮೆ ಆ ನೆನಪುಗಳ ಸುರುಳಿ ಬಿಚ್ಚಿಕೊಳ್ಳುತ್ತದೆ. ಏಕೆಂದರೆ ಭಾವನೆಗಳನ್ನು ನಿಯಂತ್ರಿಸಲು ಯಾರಿಂದಲೂ ಸಾಧ್ಯವಿಲ್ಲ.

ಸುಮನ ಮನೀಷನನ್ನು ಮದುವೆಯಾಗಿದ್ದರೂ ತನ್ನ ಮನದಲ್ಲಿ ಚಿತ್ರಿಸಿಕೊಂಡಿದ್ದ ಕಲ್ಪನೆಯ ವ್ಯಕ್ತಿ ಆತನಾಗಿ ಸುಮನಳನ್ನು ಕಾಡುವುದನ್ನು 'ಆತ' ಕಥೆಯಲ್ಲಿ ಕಾಣಬಹುದು. ಪ್ರತಿಯೊಂದು ಹೆಣ್ಣು ತನ್ನ ಬಾಳ ಸಂಗಾತಿಯ ಚಿತ್ರವನ್ನು ತನ್ನ ಮನದಲ್ಲಿ ಕಲ್ಪಿಸಿಕೊಂಡಿರುತ್ತಾಳೆ. ಆದರೆ ಅವಳ ಕಲ್ಪನೆಯ ವ್ಯಕ್ತಿ ಸಿಗದಿದ್ದರೂ ಆ ಚಿತ್ರ ಅವಳ ಮನದಲ್ಲಿ ಶಾಶ್ವತವಾಗಿ ಉಳಿದುಕೊಂಡು ಆಕೆಯನ್ನು ಕಾಡುತ್ತಿರುತ್ತದೆ. ಹೆಣ್ಣಿನ ಅಂತರಂಗದ ವ್ಯಾಪಾರವನ್ನು ಇಷ್ಟು ಚೆನ್ನಾಗಿ ಚಿತ್ರಿಸಲು ವೈದೇಹಿಯವರಂತಹ ಸಂವೇದನಶೀಲ ಲೇಖಕಿಗೆ ಮಾತ್ರ ಸಾಧ್ಯ.

ವಿದಿಧ ಜಾತಿಯ, ವಿವಿಧ ವಯಸ್ಸಿನ, ವಿವಿಧ ಅಂತಸ್ತಿನ, ವಿವಿಧ ಸ್ವಭಾವದ, ವಿವಿಧ ವ್ಯಕ್ತಿತ್ವದ, ವಿವಿಧ ಪಾತ್ರದ ಹೆಣ್ಣುಗಳ ಚಿತ್ರವನ್ನು ಅದ್ಭುತವಾಗಿ ಕಟ್ಟಿಕೊಟ್ಟಿರುವ ವೈದೇಹಿಯವರ ಹೆಣ್ಣು ಕೇವಲ ಕಥೆ ಹೇಳುವುದಕ್ಕೆ ಸೃಷ್ಟಿಸಿದ, ಉತ್ಪ್ರೇಕ್ಷೆಯಿಂದ ಕೂಡಿದ ಪಾತ್ರದಂತೆ ಕಾಣದೆ ನಮ್ಮ ನಡುವಿನ ಜೀವಂತ ವ್ಯಕ್ತಿಯಂತೆ ಕಾಣುವುದು ವಿಶೇಷವಾಗಿದೆ. ವೈದೇಹಿಯವರ ಹೆಣ್ಣು ವಾಸ್ತವತೆಗೆ ಹಿಡಿದ ಕನ್ನಡಿಯಂತೆ ಅಲ್ಲಿ ಕಲ್ಪನೆಗೆ, ವರ್ಣನೆಗೆ ಉತ್ಪ್ರೇಕ್ಷೆಗೆ ಅವಕಾಶವಿಲ್ಲ.

ವೈದೇಹಿಯವರ ಕಥೆಗಳಲ್ಲಿ ಹೆಣ್ಣಿನ ಪ್ರತಿಭಟನೆ

ಸಮಾಜವಲ್ಲಿ ಎಲ್ಲೆಲ್ಲೂ ಶೋಷಣೆ ಮಾಡುವವರು ಇದ್ದೇ ಇರುತ್ತಾರೆ. ಶೋಷಣೆ ಮಾಡಿಸಿಕೊಂಡು ಸುಮ್ಮನಿರುವುದು ಶೋಷಕರನ್ನು ಪ್ರೋತ್ಸಾಹಿಸಿದ ಹಾಗೆ. ಆದ್ದರಿಂದ ಶೋಷಣೆ ಮಾಡುವವರನ್ನು ಪ್ರತಿಭಟಿಸುವುದು ಶೋಷಣೆಯನ್ನು ಕೊನೆಗಾಡಿಸುವ ಒಂದು ಮಾರ್ಗ. ಏಕೆಂದರೆ ಜನ ಬಗ್ಗಿದರೆ ಜುಟ್ಟು ಹಿಡಿಯುತ್ತಾರೆ ಎದ್ದರೆ ಕಾಲು ಹಿಡಿಯುತ್ತಾರೆ. ಪುರಂದರದಾಸರೇ ಹೇಳುವಂತೆ "ಶಕ್ತನಾದರೆ ನಂಟರೆಲ್ಲ ಹಿತರು ಅಶಕ್ತನಾದರೆ ಆಪ್ತ ಜನರೇ ವೈರಿಗಳು."[1] "ಶಕ್ತಿಯೇ ಜೀವನ ದುರ್ಬಲತೆಯೇ ಮರಣ"[2] ಎಂದು ಶ್ರೀ ಕೃಷ್ಣ ಹೇಳಿದ್ದಾನೆ. ಆದ್ದರಿಂದ ದುರ್ಬಲರಾಗಿ ಶೋಷಿಸಿಕೊಳ್ಳದೆ ಪ್ರತಿಭಟಿಸುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು. ಪ್ರತಿಭಟನೆ ಎಂಬುದು ಬೇರೆ ಎಲ್ಲೂ ಇರುವುದಿಲ್ಲ ಅದು ವ್ಯಕ್ತಿಯೊಳಗೆ ಗುಪ್ತಗಾಮಿನಿಯಂತೆ ಹರಿಯುತ್ತಿರುತ್ತದೆ ಶೋಷಣೆ ಮಿತಿಮೀರಿದಾಗ ಸೂಕ್ತ ಸಂದರ್ಭದಲ್ಲಿ ತಾನೇ ಹೊರಹೊಮ್ಮುತ್ತದೆ.

ಪ್ರತಿಭಟನೆಯಲ್ಲಿ ನಾವು ಎರಡು ರೀತಿಯನ್ನು ಕಾಣಬಹುದು. ಒಂದು ವ್ಯವಸ್ಥೆಗೆ ಎದುರಾಗಿ ನಿಂತು ಉಗ್ರವಾಗಿ ಪ್ರತಿಭಟಿಸುವುದು, ಎರಡನೆಯದಾಗಿ ವ್ಯವಸ್ಥೆಯೊಳಗೆ ಇದ್ದುಕೊಂಡೇ ಸೌಮ್ಯವಾಗಿ ಪ್ರತಿಭಟಿಸುವುದು. ವೈದೇಹಿಯವರ ಕಥೆಗಳಲ್ಲಿ ಬರುವ ಪಾತ್ರಗಳು ಎರಡನೆಯ ವರ್ಗಕ್ಕೆ ಸೇರಿದವುಗಳಾಗಿವೆ. ಇವರ ಕಥೆಗಳಲ್ಲಿನ ಹೆಣ್ಣು ಮಕ್ಕಳಿಗೆ ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಯ ಅರಿವಿದೆ. ಅದನ್ನು ಪ್ರತಿಭಟಿಸಬೇಕೆಂಬ ದಿಟ್ಟತನವೂ ಇದೆ. ಇವರ ಕಥೆಗಳ ಹೆಣ್ಣು ಬಂಡಾಯದ ಅರಿವನ್ನು ಒಳಗಿಟ್ಟುಕೊಂಡಿರುವವಳು. ಗಟ್ಟಿಯಾದ ವೈಯಕ್ತಿಕತೆ ಇರುವವಳೂ ಆಗಿದ್ದಾಳೆ. ಆದರೆ ಅದಕ್ಕಾಗಿ ಉಗ್ರವಾದ ಪ್ರತಿಭಟನೆಯ ಮಾರ್ಗವನ್ನು ಆಕೆ ಆರಿಸಿಕೊಂಡಿಲ್ಲ. ಇದಕ್ಕೆ ಬಹುಶಃ ವೈದೇಹಿಯವರು ಬರೆಯುತ್ತಿದ್ದ ಕಾಲಘಟ್ಟ ಕಾರಣವಿರಬಹುದು. ವೈದೇಹಿಯವರು ಪುರುಷವ್ಯವಸ್ಥೆಯ ಶೋಷಣೆಯನ್ನು ಪ್ರತಿಭಟಿಸಲು, ಹೆಣ್ಣಿಗೆ ತನ್ನತನದ ಅರಿವನ್ನು ಮೂಡಿಸಲು ಎಂದೂ ಉಗ್ರವಾದ ಸ್ತ್ರೀವಾದಿ ಧೋರಣೆಯನ್ನು ಅನುಸರಿಸಿದವರಲ್ಲ.

---

[1] ಬದುಕಲು ಕಲಿಯಿರಿ, (2001) ಭಾಗ-1, ಶಕ್ತಿಯೇ ಜೀವನ, ಸ್ವಾಮಿ ಜಗದಾತ್ಮನಂದ, ಪು.ಸಂ.61, ಶ್ರೀರಾಮಕೃಷ್ಣ ಆಶ್ರಮ, ಮೈಸೂರು.

[2] ಅದೇ

“ಸ್ತ್ರೀವಾದಿ ಧೋರಣೆ ಎಂಬುದು ವೈದೇಹಿಯವರ ಕಥನದ ನೇಯ್ಗೆಯಲ್ಲಿ ಮತ್ತು ಕೇಂದ್ರಪಾತ್ರದ ನಿರೂಪಣೆಯಲ್ಲೇ ಅಂತರ್ಗತವಾಗಿದ್ದು ಎಲ್ಲೂ ಅದು ಬುದ್ಧಿಪೂರ್ವಕವಾಗಿ ಮೇಲಿನಿಂದ ಸೇರಿಸಿದಂತೆ ಅನ್ನಿಸುವುದಿಲ್ಲ.”[1] – ಶಾಂತಿನಾಥ ದೇಸಾಯಿ.

ಶಾಂತಿನಾಥ ದೇಸಾಯಿಯವರ ಹೇಳಿಕೆಯಂತೆ ವೈದೇಹಿಯವರು ಉದ್ದೇಶಪೂರ್ವಕವಾಗಿ ಸ್ತ್ರೀವಾದಿ ಧೋರಣೆಯನ್ನು ಎಳೆದು ತಂದವರಲ್ಲ ಅದು ತಂತಾನೆ ಪಾತ್ರಗಳೊಳಗೆ ಬೆರೆತುಹೋಗಿರುವುದನ್ನು ಕಾಣಬಹುದು.

ಹೆಣ್ಣಿನ ಶೋಷಣೆ ಇಂದು ನಿನ್ನೆಯದಲ್ಲ. ತಲೆತಲಾಂತರದಿಂದಲೂ ನಡೆದುಕೊಂಡು ಬಂದಿರುವಂತಹದು. ಹೆಣ್ಣಿನ ಶೋಷಣೆ ಎಷ್ಟು ವಿಚಿತ್ರವಾಗಿತ್ತು ಎಂದರೆ ಹೆಣ್ಣಿಗೆ ತನ್ನ ಮೇಲಾಗುತ್ತಿರುವ ಶೋಷಣೆಯ ಅರಿವಾಗದಂತೆ, ಒಂದು ವೇಳೆ ಅರಿವಾದರೂ ಅದನ್ನೆಲ್ಲ ಸಹಿಸಿಕೊಂಡು ಪುರುಷನನ್ನು ಕ್ಷಮಿಸುವುದು ಆದರ್ಶಗುಣ ಎಂಬಂತೆ ಬಿಂಬಿಸಿ ಆಕೆಯೇ ಮೌನವಾಗಿ ಒಪ್ಪಿಕೊಳ್ಳುವಂತೆ ಮಾಡಲಾಗಿತ್ತು. ಜೊತೆಗೆ ಪುರುಷ ವ್ಯವಸ್ಥೆ ತಾನು ಮಾಡುತ್ತಿರುವ ಶೋಷಣೆಯ ಅರಿವು ಆಕೆಗೆ ಆಗದಿರಲೆಂದು ಆಕೆಯನ್ನು ಶಿಕ್ಷಣದಿಂದಲೂ ವಂಚಿಸಿತ್ತು. ಆದರೆ ಪಾಶ್ಚಾತ್ಯರ ಆಗಮನ, ಸಮಾಜ ಸುಧಾರಕರ ಹೋರಾಟದ ಫಲದಿಂದ ಹೆಣ್ಣು ನಿಧಾನವಾಗಿ ಶಿಕ್ಷಣಕ್ಕೆ ತೆರೆದುಕೊಳ್ಳುತ್ತಿದ್ದಂತೆ ಆಕೆಗೆ ಪುರುಷ ವ್ಯವಸ್ಥೆಯ ಶೋಷಣೆಯ ಕಂಬಧ ಬಾಹುಗಳ ಅರಿವಾಗತೊಡಗಿತು. ಶಿಕ್ಷಣ ಅವರನ್ನು ಜಗತ್ತಿನ ಆಗುಹೋಗುಗಳಿಗೆ ತೆರೆದುಕೊಳ್ಳುವಂತೆ ಮಾಡಿತು. ಇದರಿಂದ ಜಗತ್ತಿನ ಇತರ ದೇಶಗಳ ಸ್ತ್ರೀಯರ ಸ್ಥಿತಿಗತಿ ಅವರಲ್ಲಿ ಪುರುಷ ಶೋಷಣೆಯ ವಿರುದ್ಧ ಮೂಡಿದ್ದ ಜಾಗೃತಿ ನಮ್ಮ ಭಾರತೀಯ ಹೆಣ್ಣುಮಕ್ಕಳ ಮೇಲೆ ಪರಿಣಾಮ ಬೀರಿ ನಿಧಾನವಾಗಿ ಅವರಿಗೆ ತಮ್ಮತನದ ಅರಿವಾಗತೊಡಗಿತು. ಹೆಣ್ಣಿಗೆ ಹಿಂದಿನಿಂದಲೂ ಪುರುಷ ಶೋಷಣೆಯ ಅರಿವಿದ್ದರೂ ಆಕೆಗೆ ಪ್ರತಿಭಟಿಸುವ ಧೈರ್ಯ ಇರಲಿಲ್ಲ. ಕಾರಣ ಆಕೆ ಆರ್ಥಿಕವಾಗಿ ಪರಾವಲಂಬಿಯಾಗಿದ್ದದ್ದು. ಆದರೆ ಶಿಕ್ಷಣ ತಂದುಕೊಟ್ಟ ಉದ್ಯೋಗವಕಾಶ ಆಕೆ ಆರ್ಥಿಕವಾಗಿ ಸ್ವಾವಲಂಬಿಯಾಗುವಂತೆ ಮಾಡಿದ್ದು, ಹೆಣ್ಣು ತನ್ನ ಮೇಲಾಗುತ್ತಿರುವ ದೌರ್ಜನ್ಯವನ್ನು ಪ್ರತಿಭಟಿಸುವ ಧೈರ್ಯ ತಂದುಕೊಟ್ಟಿತು.

ಹೆಣ್ಣಿನ ಶೋಷಣೆ ಹೇಗೆ ಇಂದು ನಿನ್ನೆಯದಲ್ಲವೋ ಹೆಣ್ಣಿನ ಪ್ರತಿಭಟನೆಯು ಇಂದು ನಿನ್ನೆಯಲ್ಲ. ಶೋಷಣೆ ಹುಟ್ಟಿದಂದೆ ಪ್ರತಿಭಟನೆಯು ಹುಟ್ಟಿರುತ್ತದೆ. ಆದರೆ ಅದು ಸುಪ್ತವಾಗಿದ್ದು

[1] ಅಲೆಗಳಲಿ ಅಂತರಂಗ, ಅಮ್ಮಚ್ಚಿಯೆಂಬ ನೆನಪು. ಮುನ್ನುಡಿ

ಸಮಯ ಬಂದಾಗ ಜ್ವಾಲಾಮುಖಿಯಂತೆ ಹೊರ ಚಿಮ್ಮುತ್ತದೆ. ಪುರುಷಕೇಂದ್ರಿತ ವ್ಯವಸ್ಥೆಯ ವಿರುದ್ಧ ಹೆಣ್ಣು ಪ್ರತಿಭಟಿಸುತ್ತಾ ಬಂದಿದ್ದರೂ ಆ ಪ್ರತಿಭಟನೆ ಇಂದಿನಷ್ಟು ವ್ಯಾಪಕವಾಗಿರಲಿಲ್ಲ ಎಲ್ಲೋ ಬೆರಳೆಣಿಕೆಯ ಸ್ತ್ರೀಯರು ತಮ್ಮ ಮೇಲೆ ಆಗುತ್ತಿದ್ದ ಶೋಷಣೆಯನ್ನು ಪ್ರತಿಭಟಿಸಿದ್ದಾರೆ. ಇಂತಹ ಸ್ತ್ರೀಯರಿಗೆ ಅತ್ಯುತ್ತಮ ನಿದರ್ಶನ ಅಕ್ಕಮಹಾದೇವಿ. ಹೆಣ್ಣಿನ ಪ್ರತಿಭಟನೆಯ ಪ್ರತೀಕ ಅಕ್ಕ. ಆಕೆ ಹನ್ನೆರಡನೇ ಶತಮಾನದಲ್ಲೇ ಪುರುಷ ಪ್ರಧಾನ ವ್ಯವಸ್ಥೆಯ ಹಾಗೂ ತನ್ನ ಆಸೆ ಆಕಾಂಕ್ಷೆಗಳಿಗೆ ಬೆಲೆ ಕೊಡದ ಸಮಾಜದ ವಿರುದ್ಧ ದಿಟ್ಟತನದಿಂದ ಪ್ರತಿಭಟನೆ ವ್ಯಕ್ತಪಡಿಸಿದ್ದಾಳೆ. ಸಮಾಜದ ಮರ್ಯಾದೆಯ ಪ್ರತೀಕವಾದ ವಸ್ತ್ರವನ್ನೇ ತ್ಯಜಿಸಿದ ಆಕೆಯ ದಿಟ್ಟತನ ಅವಳ ಪ್ರತಿಭಟನೆಯ ತೀವ್ರತೆ ಎಂತಹುದು ಎಂಬುದನ್ನು ಸಾರುತ್ತದೆ. ಹೆಣ್ಣನ್ನು ಭೋಗ ವಸ್ತುವೆಂದು ಭಾವಿಸಿದ್ದ, ತಾನು ಇಷ್ಟಪಟ್ಟದ್ದು ತನಗೆ ಬೇಕೆಂಬ ಧೋರಣೆಯ ಪುರುಷ ದೌರ್ಜನ್ಯದ ವಿರುದ್ಧ ಪ್ರತಿಭಟಿಸಿದ ದಿಟ್ಟೆ. ತನ್ನ ಆತ್ಮಕ್ಕೆ ದ್ರೋಹ ಮಾಡಿಕೊಳ್ಳದೆ ಆತ್ಮದ ಕರೆಗೆ ಓಗೊಟ್ಟು 'ಲೋಕದ ಗಂಡಂದಿರನ್ನೆಲ್ಲ ಒಲೆಯೊಳಗಿಕ್ಕು" ಎಂದು ತಾನು ಒಲಿದ ತನ್ನ ಆರಾಧ್ಯದೈವವನ್ನು ಅರಸುತ್ತ ಹೋದ ಅವಳ ದಾರ್ಷ್ಟ್ಯ ಪುರುಷ ದೌರ್ಜನ್ಯದ ವಿರುದ್ಧ ಹೆಣ್ಣಿನ ಪ್ರತಿಭಟನೆಗೆ ಹಿಡಿದ ಕನ್ನಡಿ. ಆದರೆ ಈ ರೀತಿ ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರತಿಭಟಿಸುವ ದಿಟ್ಟತನ ಎಲ್ಲ ಹೆಣ್ಣುಮಕ್ಕಳಲ್ಲೂ ಇರುವುದು ಸ್ವಲ್ಪ ಕಷ್ಟವೇ. ಏಕೆಂದರೆ ವ್ಯವಸ್ಥೆಯ ವ್ಯೂಹ ಆಕೆಯನ್ನು ಪ್ರತಿಭಟಿಸಲಾಗದಂತೆ ಬಂಧಿಸಿರುತ್ತದೆ. ಏನೆ ಆದರೂ ಹೆಣ್ಣು ತನ್ನ ಮೇಲಾಗುವ ದೌರ್ಜನ್ಯವನ್ನು ತಾನೇ ವಿರೋಧಿಸಬೇಕು. ಆಗ ಮಾತ್ರ ಆಕೆಗೆ ಅದರಿಂದ ಮುಕ್ತಿ ಸಿಗುವುದು.

ಹೆಣ್ಣು ಕೌಟುಂಬಿಕ ಆವರಣದೊಳಗೆ ವಿವಿಧ ಪಾತ್ರಗಳನ್ನು ನಿರ್ವಹಿಸುವುದರ ಜೊತೆಗೆ ಹೊರಗೆ ದುಡಿಯುವ ಉದ್ಯೋಗಸ್ಥೆಯಾಗಿ ಪಾತ್ರ ನಿರ್ವಹಿಸಬೇಕಾಗಿರುವುದರಿಂದ ಒಳಗೆ ಮತ್ತು ಹೊರಗೆ ಎರಡೂ ಕಡೆ ವಿವಿಧ ಶೋಷಣೆಗೆ ಒಳಗಾಗುವ ಸಾಧ್ಯತೆ ಇರುತ್ತದೆ. ಹೆಣ್ಣು ಹೊರಗಿನವರಿಂದ ಶೋಷಣೆಗೆ ಒಳಗಾದಾಗ ಪ್ರತಿಭಟಿಸುವಷ್ಟು ಸುಲಭವಾಗಿ ಕೌಟುಂಬಿಕ ಆವರಣದೊಳಗೆ ನಡೆಯುವ ಶೋಷಣೆಯನ್ನು ಪ್ರತಿಭಟಿಸುವುದು ಕಷ್ಟ. ಏಕೆಂದರೆ ಕೌಟುಂಬಿಕ ಆವರಣದೊಳಗಿರುವಾಗ ಆ ಸಂಬಂಧಗಳನ್ನು ಉಳಿಸಿಕೊಳ್ಳುವ ಜವಾಬ್ದಾರಿಯೂ ಇರುತ್ತದೆ. ಆದರೂ ಹೆಣ್ಣು ಕೌಟುಂಬಿಕ ಮತ್ತು ಸಾಮಾಜಿಕ ಚೌಕಟ್ಟಿಗೆ ಸಂಪೂರ್ಣವಾಗಿ ವಿರುದ್ಧವಾಗಿ ಹೋಗದೆ ತನ್ನ ಇತಿಮಿತಿಯೊಳಗೆ ತನ್ನ ಮೇಲಿನ ದೌರ್ಜನ್ಯವನ್ನು ಪ್ರತಿಭಟಿಸುವುದನ್ನು ವೈದೇಹಿಯವರ ಕಥೆಗಳಲ್ಲಿ ಕಾಣಬಹುದು.

ವೈದೇಹಿಯವರ ಅಕ್ಕು, ಅಮ್ಮಚ್ಚಿ, ಪುರಾಣಕಾಲದ ಶಕುಂತಲೆ, ಕಮಲಾವತಿ, ಅಚಲ, ವಾಣಿಮಾಯಿ, ಸೌಗಂಧಿ, ಲಕ್ಷ್ಮಮ್ಮ, ಸಿರಿ ಯಾರೇ ಆಗಿರಬಹುದು ಒಂದಲ್ಲ ಒಂದು ರೀತಿಯಲ್ಲಿ ಪುರುಷ ಪ್ರಧಾನ ವ್ಯವಸ್ಥೆಯ ಶೋಷಣೆಗೆ ಒಳಗಾಗಿ ಅದನ್ನು ತಮ್ಮದೇ ಆದ ರೀತಿಯಲ್ಲಿ ಪ್ರತಿಭಟಿಸಿದವರೇ ಆಗಿದ್ದಾರೆ. ಕೆಲವರು ಬಹಿರಂಗವಾಗಿ ಪ್ರತಿಭಟಿಸಿದರೆ, ಕೆಲವರು ತಮ್ಮ ಮೌನವನ್ನೇ ಪ್ರತಿಭಟನೆಯ ಅಸ್ತ್ರವನ್ನಾಗಿ ಮಾಡಿಕೊಳ್ಳುವುದನ್ನು, ಇನ್ನೂ ಕೆಲವರು ಬಹಿರಂಗವಾಗಿ ಪ್ರತಿಭಟಿಸದೆ ಅಂತರಂಗದಲ್ಲೇ ಪ್ರತಿಭಟಿಸುವುದನ್ನು ಕಾಣುತ್ತೇವೆ.

ವೈದೇಹಿಯವರ 'ಅಕ್ಕು' ಕಥೆಯ ಅಕ್ಕು ಮಾನಸಿಕ ಅಸ್ವಸ್ಥಳಾದರೂ ಪುರುಷ ವ್ಯವಸ್ಥೆಯ ವಿರುದ್ಧ ನಡೆಸುವ ಪ್ರತಿಭಟನೆ ಮನನೀಯ. ಹೆಣ್ಣಿಗೆ ಸಹಜವಾದ ಸಾಂಸಾರಿಕ ಸುಖದ ಬಯಕೆ ಅಕ್ಕುವಿಗೂ ಇದೆ. ತಾನು ತಾಯಿಯಾಗಬೇಕು ಎಂಬ ಬಲವಾದ ಹಂಬಲ ಅಕ್ಕುವಿಗಿದೆ. ಆದರೆ ಲಂಪಟನಾದ ಗಂಡ ಸಂಕಪ್ಪಯ್ಯ ಸನ್ಯಾಸಿಯ ಹಿಂದೆ ಹೋದದ್ದರಿಂದ ಅಕ್ಕುವಿನ ಬಯಕೆ ಬಯಕೆಯಾಗಿಯೇ ಉಳಿದು ಆಕೆ ಮಾನಸಿಕ ಅಸ್ವಸ್ಥಳಾಗುವಂತೆ ಮಾಡಿತು. ಮಾನಸಿಕ ಅಸ್ವಸ್ಥಳಾದರೂ ತಾಯಿಯಾಗಬೇಕೆಂಬ ಬಯಕೆ ಅಕ್ಕುವಿನಲ್ಲಿ ಅದಮ್ಯವಾಗಿರುವುದನ್ನು ನಾವು ಕಾಣುತ್ತೇವೆ. ಮಾನಸಿಕ ಅಸ್ವಸ್ಥಳಾದ ಅಕ್ಕು ತನ್ನ ಈ ಸ್ಥಿತಿಗೆ ಕಾರಣವಾದಂತಹ ಪುರುಷವ್ಯವಸ್ಥೆಯನ್ನು ಪ್ರತಿಭಟಿಸುತ್ತಾಳೆ. ಅಕ್ಕು ತಾನು ಸ್ವಸ್ಥಳಾಗಿ ಮೀರಲಾಗದಿದ್ದ ಪುರುಷಕೇಂದ್ರಿತ ವ್ಯವಸ್ಥೆಯನ್ನು ಮಾನಸಿಕ ಅಸ್ವಸ್ಥಳಾಗಿ ಮೀರುತ್ತಾಳೆ. ಕುಟುಂಬ ಹಾಗೂ ಸಮಾಜದಲ್ಲಿ ತನ್ನದೇ ಆದ ನಿಯಮಗಳು ಮತ್ತು ಶಿಷ್ಟಾಚಾರಗಳಿರುತ್ತವೆ. ಅದರ ಸದಸ್ಯರುಗಳು ಅವುಗಳಿಗೆ ನಿಷ್ಠರಾಗಿರಬೇಕು. ಅಕ್ಕು ಅವುಗಳಿಗೆ ವಿರುದ್ಧವಾಗಿ ನಡೆದುಕೊಳ್ಳುವುದು ಅವಳ ಪ್ರತಿಭಟನೆಯ ವಿಧಾನವೇ ಆಗಿದೆ.

"ಅಜ್ಜಯ್ಯನ ಮನೆಯಲ್ಲಿ ಯಾರೂ ಸ್ವತಂತ್ರರಲ್ಲ" ತಮ್ಮ ತಮ್ಮ ಕೆಲಸಗಳಲ್ಲಿ ನಿರತರಾಗಿರುವ ಅವರು "ಮನೆಯ ಕಂಬಗಳಂತೆ. ತಲೆಯ ಮೇಲೆ ಭಾರವಿದ್ದರು ತುಟಿ ಎರಡು ಮಾಡರು" ಇಂತಹ ನಿರ್ಬಂಧವಿರುವ ಮನೆಯಲ್ಲಿ "ಯಾವ ನಿರ್ಬಂಧವೂ ಇಲ್ಲದಿರುವವಳೆಂದರೆ ಅಕ್ಕು". ಆಕೆ ತನ್ನ ಇಷ್ಟಬಂದ ಕಡೆ ಹೋಗಬಹುದು, ಇಷ್ಟ ಬಂದದ್ದನ್ನು ತಿನ್ನಬಹುದು. "ಅಕ್ಕು ಬಿಡದೆ ಹೋಗುವ ಊಟಗಳೆಂದರೆ ಬಸುರಿ–ಬಯಕೆಯ ಊಟ ಮತ್ತು ನಾಮಕರಣದ್ದು" ತಾಯಿಯಾಗಬೇಕೆಂಬ ತನ್ನ ಹಂಬಲ ಈಡೇರದೆ ಹತಾಶೆಗೆ ಒಳಗಾದ ಅಕ್ಕು ವರ್ತಿಸುವ ರೀತಿ ತನ್ನ ದುಸ್ಥಿತಿಗೆ ಕಾರಣವಾದ ಪುರುಷ ವ್ಯವಸ್ಥೆಯ ವಿರುದ್ಧದ ಪ್ರತಿಭಟನೆಯಾಗಿದೆ. "ಗಂಡ ಸನ್ಯಾಸಿ ಹಿಂದೆ ಹೋದ ಲಾಗಾಯ್ತಿನಿಂದ ಬಸುರಿ ಪಾರ್ಟಿ ಮಾಡುವ ಅಕ್ಕುವಿಗೆ ಒಂದು ಸಲವಾದರೂ ಅದು ಸುಳ್ಳು ಅನಿಸಿದ್ದಿಲ್ಲ" ಹೊಟ್ಟೆನೋವು ಎಂದು ರಂಪ ಮಾಡುವ ಅಕ್ಕು ದೊಡ್ಡಜ್ಜಯ್ಯ ಬಡಿದಾಗ "ಅಪ್ಪಯ್ಯ,

ನನ್ ಮಗು ಸಾಯತ್, ನಿಮ್ಗೆ ಪಾಪ ತಟ್ಟಾತ್ ಕಾಣಿ" ಎನ್ನುತ್ತ ಹೊಟ್ಟೆ ತಪ್ಪಿಸಿಕೊಳ್ಳಲು ಪ್ರಯತ್ನಿಸುವಳು. ಅಕ್ಕು ಬಸುರಿಯಂತೆ ವೇಷಹಾಕಿ ಹೊಟ್ಟೆನೋವು ಎಂದು ನರಳುವುದು, ಮಗುವಿಗೆ ಮೊಲೆಯುಣಿಸುವುದು ಇವೆಲ್ಲ ಮಾನಸಿಕ ಅಸ್ವಸ್ಥಳ ಬುದ್ಧಿ ಇಲ್ಲದ ಮಡವಳಿಕೆಯಂತೆ ಮೇಲ್ನೋಟಕ್ಕೆ ಕಂಡರೂ ಆಳದಲ್ಲಿ ಇದು ತನ್ನ ಬಯಕೆಯನ್ನು ಈಡೇರಿಸಿಕೊಳ್ಳಲಾಗದ ಹೆಣ್ಣಿನ ಪ್ರತಿಭಟನೆಯೇ ಆಗಿದೆ.

ಊರೂರು ಅಲೆದು ತಿರುಗಿ ಬಂದ ಅಕ್ಕುವಿನ ಗಂಡ ಸಂಕಪ್ಪನನ್ನು ಅಜ್ಜಯ್ಯ ಒಳಗೆ ಕರೆತಂದು ಅಕ್ಕು ಎಂದಾಗ ಅವಳು "ಅಕ್ಕು ಸತ್ ಮೂರ್ ಹಗಲು ಮೂರ್ ರಾತ್ರಿ ಯಾಯ್ತ್. ಈ ನಾರಟೆ ಕ್ರಿಯೆ ಹಿಡಿಯುಕೆ ಬಂದದ್ದಾ ಕೇಣೀ!" ಎಂದು ಭಗ ಭಗ ಬೆಂಕಿ ಉರಿಯುವಂತಹ ಸ್ವರದಲ್ಲಿ ನುಡಿದುದು, ತನಗೂ ಹೆಂಡತಿ ಇರುವಳು ಎಂಬುದನ್ನು ಮರೆತವನಂತೆ ಬೇಜವಾಬ್ದಾರಿಯಿಂದ ಅವಳನ್ನು ಬಿಟ್ಟು ಎಲ್ಲೋ ಹೋಗಿ ಊರು ಸುತ್ತಿ ಇಂದು ತಿರುಗಿ ಬಂದ ಉಂಡಾಡಿಗುಂಡ ಗಂಡನ ವಿರುದ್ಧ ಹೊರಹೊಮ್ಮಿದ ಅಕ್ಕುವಿನ ರೋಷವಾಗಿದೆ. ತಾನು ಸುತ್ತಿರುವೆನೋ, ಬದುಕಿರುವೆನೋ ಎಂಬುದನ್ನು ಕೂಡ ನೋಡದ ಗಂಡನ ನಿರ್ಲಕ್ಷ್ಯದ ವಿರುದ್ಧ ಸಿಡಿದ ರೋಷದ ಕಿಡಿಯಾಗಿದೆ. ತುಟಿಪಿಟಿಕ್ಕೆನ್ನದೆ ಕಣ್ಣುಬಿಡುತ್ತ ನಿಂತಿದ್ದ ಸಂಕಪ್ಪನ ಸ್ವಭಾವ ಗೊತ್ತಿದ್ದ ದೊಡ್ಡತ್ತೆ "ಅಂತೂ ಬಂದ್ಯ! ಊರ್ ಮೇಲಿನ್ ಹೆಣ್ಮಕ್ಕೆಲ್ಲ ಖರ್ಚಾದ್ವ" ಎಂದು ವ್ಯಂಗ್ಯವಾಡಿದಾಗ ಅಕ್ಕು "ನಾನೇನ್ ಬಿಟ್ಟಿದ್ನ? ಈ ಊರೋಳ್ಗೆ ಯಾವ ಗಂಡ್ಸನ್ನ ನಾನ್ ಬಿಟ್ಟಿದ್ದೆ ಅಂಬ್ರ! ಹೇಳೂ ಗಂಡ್ಸ್ ಯೆದ್ರ್ ಬರ್ಲಿ ಕಾಂಬ! ಇಂಥಾ ಕಳ್ಳನ್ನ ಕಟ್ಕಂಡ್ರೆ ಹೌದ ಮತ್ತೆ?" ಎಂದಳು. ಅಕ್ಕುವಿನ ಈ ಮಾತು ಬುದ್ಧಿ ಇಲ್ಲದೆ ಆಡಿದ ಮಾತುಗಳಂತೆ ಕಂಡರೂ ಮನೆಯಲ್ಲಿ ಹೆಂಡತಿ ಇದ್ದರೂ ಕಂಡ ಕಂಡ ಹೆಣ್ಣಿನ ಹಿಂದೆ ಹೋಗುವ ಸ್ತ್ರೀಲಂಪಟ ಗಂಡಿಗೆ ಕಪಾಳಮೋಕ್ಷಮಾಡಿದಂತಿದೆ ಗಂಡಿಗಿರುವಂತೆ ಹೆಣ್ಣಿಗೂ ಕಾಮಾನೆಗಳಿರುತ್ತವೆ. ಅವನ್ನು ಈಡೇರಿಸಬೇಕಾದದ್ದು ಗಂಡನ ಕರ್ತವ್ಯ. ಆದರೆ ಆತ ತನ್ನ ಕರ್ತವ್ಯವನ್ನು ಮರೆತು ಬೇರೆ ಹೆಣ್ಣಿನಲ್ಲಿ ಸುಖ ಅರಸಲು ಹೋದರೆ ಹೆಂಡತಿಯಾದವಳು ಕೂಡ ತನ್ನ ಸುಖಕ್ಕಾಗಿ ಬೇರೆ ಗಂಡನ್ನು ಹುಡುಕಿಕೊಂಡು ಹೋಗಬೇಕಾಗುತ್ತದೆ. ಇಷ್ಟು ನೇರವಾಗಿ ಗಂಡಿನ ಲಂಪಟತನವನ್ನು ಪ್ರತಿಭಟಿಸಲು ಅಕ್ಕುವಿಗೆ ಮಾತ್ರ ಸಾಧ್ಯವೇನೋ ಅನಿಸುತ್ತದೆ.

ಅಜ್ಜಯ್ಯ ಸಂಕಪ್ಪನಿಗೆ ಎರಡು ದಿನ ಇದ್ದು ನಂತರ ಅಕ್ಕುವನ್ನು ಕರೆದುಕೊಂಡು ಹೋಗಲು ಹೇಳಿ ಹೊರಟುಹೋದಾಗ "ಯೆಂತದ್? ಇನ್ನ್ ಇವ್ನೊಟ್ಟಿಗೆ ಹ್ವೋಪ್ದ! ನನ್ ಹೆಣ ಸಮೇತ ಹೋಗ! ಎನ್ನುವ ಅಕ್ಕು ಗಂಡ ಏನೇ ಮಾಡಿದರೂ ಕ್ಷಮಿಸಿ ಆತನನ್ನು ಒಪ್ಪಿಕೊಂಡು ನರಳಿನಂತೆ

ಹಿಂದೆ ಹೋಗಬೇಕೆಂಬ ಪುರುಷ ಪ್ರಧಾನ ಸಮಾಜದ ಕಟ್ಟಳೆಯನ್ನು ಪ್ರತಿಭಟಿಸುವ ದಿಟ್ಟ ಹೆಣ್ಣಾಗಿ ಕಾಣುತ್ತಾಳೆ.

ಗಂಡ ಹೆಂಡತಿಯನ್ನು ತನ್ನ ಸ್ವತ್ತು ಅವಳನ್ನು ಬೇಕಾದಂತೆ ಉಪಯೋಗಿಸಿಕೊಳ್ಳಬಹುದು. ಎಂದು ಭಾವಿಸುತ್ತಾನೆ. ಅವನು ಏನೆ ಮಾಡಿದರೂ. ಎಲ್ಲೇ ಹೋದರು ಆತ ಬಂದಾಗ ಆತನನ್ನು ಒಪ್ಪಿಕೊಂಡು ಆತನ ಬಯಕೆ ಈಡೇರಿಸಬೇಕು. ಆತ ಗಂಡನಾಗಿ ತನ್ನ ಕರ್ತವ್ಯ ನಿರ್ವಹಿಸದಿದ್ದರೂ ಹೆಂಡತಿಯಿಂದ ಮಾತ್ರ ಅಪೇಕ್ಷಿಸುತ್ತಾನೆ. ಅಕ್ಕುವನ್ನು ತ್ಯಜಿಸಿ ಹೋದ ಸಂಕಪ್ಪಯ್ಯ ಊರೂರು ಅಲೆದು ಸಾಕಾಗಿ ಎಷ್ಟೋದಿನಗಳ ನಂತರ ತಿರುಗಿ ಬಂದವನು ರಾತ್ರಿ ಹೆಂಡತಿಯನ್ನು ಹಿಡಿದುಕೊಳ್ಳಲು ಹೋದಾಗ ಅಕ್ಕು ಅದನ್ನು ಪ್ರತಿಭಟಿಸುತ್ತಾಳೆ. ಸಂಕಪ್ಪಯ್ಯ ಅಕ್ಕುವನ್ನು ಹಿಡಿದುಕೊಂಡಾಗ ಅವಳು "ಥೂ ನಾಯಿ ಜಾತಿಯವ್ನೆ, ತೆವ್‌ಡ್ಕೋ ಆಕೆ ಮುಟ್ಬೇಡ, ನಾ ಬಸ್ರಿ" ಎಂದರೂ ಬಿಡದ ಸಂಕಪ್ಪಯ್ಯನನ್ನು ತೊಟ್ಟಿಲಿನ ಸರಪಳಿ ಎಳೆದು ಬೀಸಿ ಬೀಸಿ ಹೊಡೆದು ಓಡಿಸುತ್ತಾಳೆ. ಹೆಂಡತಿಯೆಂಬ ಕಾರಣಕ್ಕೆ ಆಕೆಯನ್ನು ಲೈಂಗಿಕವಾಗಿ ಹೇಗೆ ಬೇಕಾದರೂ ಉಪಯೋಗಿಸಿಕೊಳ್ಳಬಹುದು ಎಂದು ಆಕೆಯ ಮೇಲೆ ದೌರ್ಜನ್ಯವೆಸಗುವ ಗಂಡನ್ನು ಪ್ರತಿಭಟಿಸುವ ಹೆಣ್ಣಿನ ಪ್ರತೀಕ ಅಕ್ಕು. ಅಕ್ಕು "ನಾ ಬಸ್ರಿ" ಇದಕ್ಕೆ ಕಾರಣ "ಅಡ್ಡದ್ ಮನೆ ತಿಮ್ಮಪ್ಪಯ್ಯ" ಎಂದು ತನ್ನ ಗಂಡ ಸಂಕಪ್ಪಯ್ಯನಿಗೆ ಹೇಳುವುದು. ತಾನು ತಾಯಿಯಾಗಬೇಕೆಂಬ ತನ್ನ ಬಯಕೆಯನ್ನು ಈಡೇರಿಸದೆ ಹೆಂಡತಿಯನ್ನು ತ್ಯಜಿಸಿ ತನ್ನ ಕಾಮತೃಷೆಗಾಗಿ ಬೀದಿ ಹೆಣ್ಣುಗಳ ಹಿಂದೆ ಹೋದ ಗಂಡಿನ ಲಂಪಟತ್ವ, ಹೆಂಡತಿಯ ಬಗೆಗಿನ ಅಲಕ್ಷ್ಯದ ವಿರುದ್ಧ ಅಕ್ಕುವಿನ ಎದೆಯಲ್ಲಿ ಭುಗಿಲೆದ್ದ ಆಕ್ರೋಶವಾಗಿದೆ. ನೀನು ಹೇಗೆ ನಿನ್ನ ಸುಖಕ್ಕಾಗಿ ಬೇರೆ ಹೆಣ್ಣುಗಳ ಹಿಂದೆ ಹೋದೆಯೋ, ಹಾಗೆ ನಾನು ನನ್ನ ಬಯಕೆಯ ಈಡೇರಿಕೆಗೆ ಬೇರೊಂದು ಗಂಡಿನ ಹಿಂದೆ ಹೋದೆ ಎಂದು ಅಕ್ಕು ಗಂಡನಿಗೆ ಸವಾಲೆಸೆದಂತಿದೆ.

ಪುರುಷನ ಸ್ತ್ರೀಲಂಪಟತ್ವ, ಆತನ ಕಪಟತನ, ಅವಕಾಶವಾದಿತನಗಳ ವಿರುದ್ಧ ಹೆಣ್ಣಿನ ಮೌನ ಪ್ರತಿಭಟನೆಯ ಪ್ರತೀಕ 'ಶಕುಂತಲೆಯೊಂದಿಗೆ ಕಳೆದ ಅಪರಾಹ್ನ' ಕಥೆಯ ಶಕುಂತಲೆ ಇದುವರೆವಿಗೂ ನಾವು ಕಾಳಿದಾಸನು (ಆತನು ಪುರುಷಪ್ರಧಾನ ಪ್ರಜ್ಞೆಯ ಪ್ರತೀಕ) ನಿರೂಪಿಸಿದಂತೆ ಶಕುಂತಲೆಯ ಕಥೆಯನ್ನು ಓದುತ್ತಾ ಅದನ್ನೇ ಸತ್ಯವೆಂದು ನಂಬುತ್ತಾ ಬಂದಿದ್ದೇವೆ. ಆದರೆ ಸತ್ಯ ಏನು ಎಂಬುದನ್ನು ಶಕುಂತಲೆಯ ಬಾಯಿಯಿಂದಲೇ ಕೇಳುವ ಆ ಮೂಲಕ ಪುರುಷ ವ್ಯವಸ್ಥೆಯ ಮುಖವಾಡವನ್ನು ಕಳಚುವ ಪ್ರಯತ್ನ ವೈದೇಹಿಯವರ ಶಕುಂತಲೆಯೊಂದಿಗೆ ಕಳೆದ ಅಪರಾಹ್ನ ಕಥೆ. ವೈದೇಹಿಯವರು ಇಡೀ ಕಥೆಯನ್ನು ಶಕುಂತಲೆಯ ದೃಷ್ಟಿಯಿಂದ (ಒಬ್ಬ ಸ್ತ್ರೀಯ ದೃಷ್ಟಿಯಿಂದ)

ವಿಶ್ಲೇಷಿಸಿದ್ದಾರೆ. ಇದುವರೆವಿಗೂ ನಾವು ದೂರ್ವಾಸರ ಶಾಪದಿಂದ ದುಷ್ಯಂತ ಶಕುಂತಲೆಯನ್ನು ಮರೆತ ಎಂಬ ಸುಂದರ ಸುಳ್ಳನ್ನೇ ಸತ್ಯ ಎಂದು ನಂಬಿಕೊಂಡಿದ್ದೇವೆಯೇ ಹೊರತು ಆತ ಶಕುಂತಲೆಗೆ ಮೋಸ ಮಾಡಿದನೆಂದು ನಂಬುವುದೇ ಇಲ್ಲ. ಆದರೆ ಆತನ ಕಪಟತನವನ್ನು ಮುಚ್ಚುವ ಪುರುಷಪ್ರಜ್ಞೆಯ ವ್ಯವಸ್ಥಿತ ಪ್ರಯತ್ನ ದೂರ್ವಾಸರ ಶಾಪವೆಂಬ ಕಥೆ ಪುರುಷನ ತಪ್ಪುಗಳನ್ನು ಮರೆಮಾಚಲು ಇಂತಹ ಕಥೆಗಳನ್ನು ಸೃಷ್ಟಿಸುವ ಪುರುಷಪ್ರಜ್ಞೆಗೆ ಹೆಣ್ಣಿನ ಅಂತರಾಳದ ನೋವು ಕಾಣುವುದೇ ಇಲ್ಲ. "ದುಷ್ಯಂತನ ವರ್ತನೆಗೆ ವ್ಯಾಖ್ಯಾನ ನೀಡಬಹುದು. ಶಕುಂತಲೆಯ ಹೃದಯಕ್ಕೆ?" ಶಕುಂತಲೆ ಕೇಳುವ ಈ ಪ್ರಶ್ನೆಯಲ್ಲಿ ಪುರುಷ ಪ್ರಜ್ಞೆ ಸೃಷ್ಟಿಸಿದ ಸುಳ್ಳನ್ನು ಸತ್ಯ ಎಂದು ನಂಬುವ ಲೋಕದ ವಿರುದ್ಧ ಮೌನ ಆಕ್ರೋಶ ವ್ಯಕ್ತವಾಗಿದೆ.

ಸತ್ಯಕ್ಕಿಂತ ಸುಳ್ಳೇ ಎಷ್ಟೋ ಸಾರಿ ವಿಜೃಂಭಿಸುತ್ತದೆ. ಏಕೆಂದರೆ ಸುಳ್ಳನ್ನು ಸೃಷ್ಟಿಸುವವರು ಅಷ್ಟು ವ್ಯವಸ್ಥಿತವಾಗಿ ಸೃಷ್ಟಿಸಿ ಲೋಕವನ್ನು ನಂಬಿಸುತ್ತಾರೆ. ದುಷ್ಯಂತನ ವಿಷಯದಲ್ಲೂ ಅಷ್ಟೇ ಅದಕ್ಕೆ ಶಕುಂತಲೆ "ಕವಿ ಶಾಪಗೀಪ ಇತ್ಯಾದಿಗಳನ್ನೆಲ್ಲ ಅಡ್ಡ ಇಟ್ಟು ಪುರುಷರ ಲಂಪಟತ್ವ ಮುಚ್ಚಿಡಲು ಹವಣಿಸಿದ, ಎಲ್ಲ ಜಾಣ ಮರೆವಿನ ಮಲ್ಲರನ್ನೂ ತನ್ನ ತೆಕ್ಕೆಯೊಳಗೆ ಸುರಕ್ಷಿತವಾಗಿರಿಸುವ ಪುರುಷ ಕಟ್ಟಿದ ವಿಸ್ಮರಣೆಯ ಕತೆ ರುಚಿಸಲೇ ಬೇಕು" ಎಂದು ಪುರುಷಕಟ್ಟಿದ ಕತೆಯನ್ನ ಸತ್ಯಾಸತ್ಯತೆಯನ್ನು ಪರಿಶೀಲಿಸದೆ ನಂಬಿದ ಲೋಕದ ವಿರುದ್ಧ ಪ್ರತಿರೋಧವನ್ನು ವ್ಯಕ್ತಪಡಿಸುತ್ತಾಳೆ.

ಗರ್ಭಿಣಿ ಶಕುಂತಲೆ ಗೌತಮಿ, ಶಾರ್ಙ್ಗರವರ ಜೊತೆಗೂಡಿ ದುಷ್ಯಂತನ ಅರಮನೆಗೆ ಹೋದಾಗ ದುಷ್ಯಂತ "ನಾನೀಕೆಯನ್ನು ಎಂದೂ ಕಂಡದ್ದೇ ಇಲ್ಲ" ಎಂದ ಕ್ಷಣ ಶಕುಂತಲೆಗೆ ಹೇಗಾಗಿರಬೇಡ. ಮರೆತಿರುವ ಆತನಿಗೆ ತನ್ನ ನೆನಪು ತರಲು ಗೌತಮಿ ಆತ ಕೊಟ್ಟ ಉಂಗುರ ತೋರಿಸಬಾರದೆ ಎಂದಾಗ ಶಕುಂತಲೆ "ಉಂಗುರ ತೋರಿಸಿ ಪ್ರೇಮದಾನ ಪಡೆಯುವಷ್ಟು ಶೂನ್ಯಳೇನು ನಾನು?" ಎಂದು ಉಂಗುರ ತೋರಿಸಿ ತನ್ನ ನೆನಪು ಬರುವಂತೆ ಮಾಡಲು ನಿರಾಕರಿಸುತ್ತಾಳೆ. ಉಂಗುರ ಕಳೆದು ಹೋಯಿತೆಂದು ನಟಿಸುತ್ತಾಳೆ ಏಕೆಂದರೆ ಅವಳೇ ಹೇಳುವಂತೆ "ಮರೆವಿನ ನಟನೆಗೆ ಉಂಗುರ ಎಂದಾದರೂ ಔಷಧಿಯಾಗುವುದೆಂತ ಇದೆಯೇ?" ಶಕುಂತಲೆಯ ಪ್ರಶ್ನೆ ಎಷ್ಟು ಅರ್ಥಪೂರ್ಣ ನಿಜವಾಗಲು ಮರೆತಿರುವವರಿಗಾದರೆ ಉಂಗುರವನ್ನು ತೋರಿಸಿ ನೆನಪಿಸಬಹುದು ಆದರೆ ಮರೆತಂತೆ ನಟಿಸುವವರಿಗೆ ಏನನ್ನು ತೋರಿದರೂ ಅಷ್ಟೆ ಅಂದು ಪ್ರೀತಿ ಎಂದು ನನ್ನ ನಂಬಿಸಿದವನು ಇಂದು ನನ್ನನ್ನೇ ಗುರುತಿಸದೆ ಇರುವಾಗ ಕಾಡಿಬೇಡಿ ಉಂಗುರ ತೋರಿಸಿ ನನ್ನ ನೆನಪು ಮಾಡುವ ಅಗತ್ಯವೇನು ಎಂಬುದು ಶಕುಂತಲೆಯ ನಿಲುವು. ಹೆಣ್ಣನ್ನು ಭೋಗದ ವಸ್ತುವಿನಂತೆ ಭೋಗಿಸಿ ಮರೆಯುವ ಪುರುಷನನ್ನು ತನ್ನನ್ನು ಸ್ವೀಕರಿಸು ಎಂದು

ಬೇಡುವಷ್ಟು ದುರ್ಬಲಳಲ್ಲ ಶಕುಂತಲೆ. ಉಂಗುರವನ್ನು ತೋರಿಸಲು ನಿರಾಕರಿಸುವ ಆಕೆಯ ನಿಲುವು ಗಂಡಿನ ಲಂಪಟತನದ ವಿರುದ್ಧದ ಪ್ರತಿಭಟನೆಯ ಸಂಕೇತ.

ದುಷ್ಯಂತನಿಂದ ತಿರಸ್ಕೃತಳಾದ ಶಕುಂತಲೆ ತಂದೆ ಕಣ್ವರ ಆಶ್ರಮಕ್ಕೆ ಹೋಗದೆ (ಶಕುಂತಲೆ ತಂದೆ ಕಣ್ವರ ಆಶ್ರಮಕ್ಕೆ ಹೋಗದಿರುವುದು ಹೆಣ್ಣು ಒಮ್ಮೆ ತಂದೆ ಮನೆಯಿಂದ ಹೊಸ್ತಿಲು ದಾಟಿದ ಮೇಲೆ ಮತ್ತೆ ತುಳಿಯಬಾರದು ಎಂಬ ಸಂಪ್ರದಾಯದ ವಿರುದ್ಧ ಸ್ವಾಭಿಮಾನಿಯಾದ ಶಕುಂತಲೆಯ ತಣ್ಣನೆಯ ಪ್ರತಿಭಟನೆ) ಮಾರೀಚರ ಆಶ್ರಮವನ್ನು ಸೇರಿ ಭರತನಿಗೆ ಜನ್ಮ ನೀಡಿ ಮಗುವಿನೊಂದಿಗೆ ಅಲ್ಲೇ ತಂಗಿರುತ್ತಾಳೆ. ತನ್ನನ್ನು ಮಗು ಭರತನನ್ನು ಕರೆಯಲು ದುಷ್ಯಂತ ಬಂದಾಗ ಶಕುಂತಲೆ ಆತನನ್ನು ಕೂಡಲು ನಿರಾಕರಿಸುತ್ತಾಳೆ. ಅಂದು ಜಾಣ ಮರೆವಿನ ಮಲ್ಲನಂತೆ ವರ್ತಿಸಿದವನು ಇಂದು ಬಂದು ಕರೆದಾಕ್ಷಣ ಹೋಗಿ ಬಿಡಬೇಕೆ? ಹೆಣ್ಣಿಗೆ ಸ್ವತಂತ್ರ ವ್ಯಕ್ತಿತ್ವವಿಲ್ಲವೆ? ಅವಳಿಗೆ ಮನಸ್ಸೆಂಬುದು ಇಲ್ಲವೆ? ಆತ ಈಕೆ ನನಗೆ ಗೊತ್ತಿಲ್ಲ ಎಂದಾಗ ಸುಮ್ಮನೆ ಹಿಂದಿರುಗಲು ಬಂದು ಕರೆದಾಗ ಸುಮ್ಮನೆ ಆತನ ಹಿಂದೆ ಹೋಗಲು ಹೆಣ್ಣೇನು ಕೀಲುಗೊಂಬೆಯೆ? ಇಂದು ಆತ ಬಂದಿರುವುದಾದರು ಏತಕ್ಕೆ? ಶಕುಂತಲೆಗಾಗಿ ಅಲ್ಲ ಸಿಂಹಾಸನದ ಉತ್ತರಾಧಿಕಾರಿಗಾಗಿ. ಅಂದು ಈಕೆಯನ್ನು ಕಂಡದ್ದೇ ಇಲ್ಲ ಎಂದಿದ್ದ ಇದೇ ದುಷ್ಯಂತನಿಗೆ ಇಂದು ಸಿಂಹಾಸನದ ಉತ್ತರಾಧಿಕಾರಿಗೋಸ್ಕರ ಶಕುಂತಲೆಯ ನೆನಪಾಗಿದೆ. ಎಂತಹ ಅವಕಾಶವಾದಿತನ! ಶಕುಂತಲೆ ಭರತನನ್ನು ಮಾತ್ರ ಕಳಿಸಿ, ತಾನು ದುಷ್ಯಂತನೊಡನೆ ಹೋಗದೆ ಆಶ್ರಮದಲ್ಲಿಯೇ ಉಳಿದುದು, ಪುರುಷನ ಅವಕಾಶವಾದಿತನಕ್ಕೆ ಪ್ರತಿರೋಧವಾಗಿದೆ. ಎಲ್ಲವನ್ನು ಅರಗಿಸಿಕೊಂಡ ಶಕುಂತಲೆಯ ನಿರ್ಲಿಪ್ತತೆ. ಆಕೆಯ ದಿವ್ಯಮೌನ ಪುರುಷ ಸಮಾಜದ ಕ್ರೌರ್ಯವನ್ನು ಸದ್ದಿಲ್ಲದೆ ಪ್ರತಿಭಟಿಸುತ್ತದೆ.

ಹೆಣ್ಣು ಎಂದರೆ ಅದರಲ್ಲೂ ಬಡಹೆಣ್ಣು ಅಂದರೆ ಸಮಾಜಕ್ಕೆ ನಿಕೃಷ್ಟ. ಅವರು ಎಷ್ಟೇ ಸುಂದರರಾದರೂ, ಯೋಗ್ಯರಾದರೂ ಅವರಿಗಾಗಲೀ, ಅವರ ಆಸೆ ಆಕಾಂಕ್ಷೆಗಳಿಗಾಗಲಿ ಯಾವುದೇ ಮೌಲ್ಯವೂ ಇಲ್ಲ. 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಕಥೆಯಲ್ಲಿ ಬರುವ ಪುಟ್ಟಮ್ಮತ್ತೆಯ ಮೊಮ್ಮಗಳು ಕಮಲಾವತೀ ತನ್ನ ಓರಗೆಯ ಎಷ್ಟೋ ಹೆಣ್ಣು ಮಕ್ಕಳಿಗೆ ಹೋಲಿಸಿದರೆ ಸೌಂದರ್ಯವತಿ, ಬುದ್ಧಿವಂತೆ ವ್ಯವಸ್ಥೆಯ ಅರಿವಿರದ ಕಮಲಾವತಿಯ ಮನದಲ್ಲಿ ನೂರಾರು ಆಸೆ ಆಕಾಂಕ್ಷೆಗಳು, ಕನಸುಗಳಿರುತ್ತವೆ. ಆದರೆ ತನ್ನ ಬಡತನದ ಕಾರಣದಿಂದ ಅವುಗಳನ್ನು ಒತ್ತಿ ಹಿಡಿಯಬೇಕಾಗಿ ಬಂದ ಅವಳ ಅಸಹಾಯಕತೆ, ಮಾನಸಿಕ ತೊಳಲಾಟ, ಅವಳ ಎದೆಯಲ್ಲಿ ನಡೆಯುವ ಸಂಘರ್ಷ ಯಾರು ಮನವನ್ನಾದರೂ ಕಲಕುವಂತಹುದು ಆದರೆ ವ್ಯವಸ್ಥೆಯೊಂದಿಗೆ ಹೊಂದಾಣಿಕೆ ಮಾಡಿಕೊಳ್ಳದೆ ಕಮಲಾವತೀ ಪ್ರತಿಭಟಿಸುವುದರ ಜೊತೆಗೆ ವ್ಯವಸ್ಥೆಯೊಂದಿಗೆ ಹೋರಾಟಕ್ಕಿಳಿಯುತ್ತಾಳೆ.

ಪುಟ್ಟಮ್ಮತ್ತೆ ತನ್ನ ಮೊಮ್ಮಗಳು ಕಮಲಾವತಿಗೆ ರಂಗಪ್ಪಯ್ಯನ ಹಿರಿಯಮಗ ಪರಮೇಶ್ವರನ ಸಲಹೆಯಂತೆ ಅವನ ಬಳಿ ಕೆಲಸಕ್ಕಿದ್ದ ಮರಿಯಪ್ಪಯ್ಯನನ್ನು ಮದುವೆಯಾದರೆ ತಮ್ಮ ಮನೆಯ ಔಟ್‌ಹೌಸ್ ಬಿಟ್ಟುಕೊಡುವುದಾಗಿ ಹೇಳಿದ್ದಾನೆ. ಇದರಿಂದ ಅವನ ಹೆಂಡತಿಗೂ ಸಹಾಯವಾಗುತ್ತದೆ ಎಂದಾಗ ಕಮಲಾವತೀ "ಅಜ್ಜಿ, ಆ ಅಪ್ಪಚ್ಚಿ ಕಿಟ್ಟನ್ನ ನಾನು ಮದುವೆಯಾತ್ತಿಲ್ಲೆ. ನಂಗೆ ಬೇಡ ಅಂದ್ರೆ ಬೇಡ್ವೇ" ಎಂದು ತನ್ನ ಮನಸೊಪ್ಪದ ಗಂಡನನ್ನು ಮದುವೆಯಾಗಲು ಖಡಾಖಂಡಿತವಾಗಿ ವಿರೋಧ ವ್ಯಕ್ತಪಡಿಸುತ್ತಾಳೆ. ಅದಕ್ಕೆ ಪುಟ್ಟಮ್ಮತ್ತೆ ಪರಮೇಶ್ವರನ ಮನೆಯಲ್ಲಿ ನಾಲ್ಕು ತಿಂಗಳು ಕೆಲಸಮಾಡಿಕೊಂಡಿರು ತಿಳುವಳಿಕೆ ಬರುತ್ತದೆ ಎಂದು ಹೇಳುತ್ತಾಳೆ. ಅದಕ್ಕೆ ಕಮಲಾವತೀ "ಯಂತ ಅಜ್ಜಿ ನೀ ಹೇಳುದು! ನಾ ಹುಟ್ಟಿದ್ದ್ ಆ ಪರಮೇಸನ ಹೆಂಡ್ತಿ ಕಚ್ಚೆ ತಿಕ್ಕುಕಾ?" ಎಂದು ಹೇಳುವ ಅವಳ ಮಾತಿನಲ್ಲಿ ತನ್ನ ಬಡತನವನ್ನು ಕಾರಣವಾಗಿಟ್ಟುಕೊಂಡು ತನ್ನನ್ನು ಉಪಯೋಗಿಸಲು ಹವಣಿಸುವ ವ್ಯವಸ್ಥೆಯನ್ನು ವಿರೋಧಿಸುವ ಧ್ವನಿ ಇದೆ. ತನ್ನತನದ ಅರಿವಿರುವ ಕಮಲಾವತಿ ಇನ್ನೊಬ್ಬರ ಮನೆಯ ಜೀತ ಮಾಡಲು ಒಪ್ಪಳು.

ಸ್ತ್ರೀ ಲಂಪಟನಾದ ಪರಮೇಶ್ವರನ ವ್ಯಕ್ತಿತ್ವದ ಬಗ್ಗೆ ಅವನ ಮನೆಯಲ್ಲಿ ಈ ಮೊದಲು ಕೆಲಸಕ್ಕಿದ್ದ ವನಮಾಲಾ ಎಂಬ ಹುಡುಗಿಯಿಂದ ಕೇಳಿ ತಿಳಿದಿದ್ದ ಕಮಲಾವತೀ "ಎಲೇ ಪರಮೇಶ್ವರಾ, ಈ ಕಮಲಾವತಿ ಅಷ್ಟು ಸುಲಭದವಳಲ್ಲ ತಿಳಕೋ" ಎಂದು ಸೀದಾಹೋಗಿ ಚಾವಡಿ ಕಂಬಕ್ಕೆ ಒರಗಿ ಕುಳಿತು "ಈ ಕಂಬಕ್ಕಾದರೂ ಒರಗಿಯೇನು ಆ ಕಿಸಬಾಯಿದಾಸನಿಗಲ್ಲ" ಎಂದು ಹೇಳುವುದು ಪರಿಸ್ಥಿತಿಯ ಲಾಭ ಪಡೆದು ಹೆಣ್ಣನ್ನು ತನ್ನ ಲೈಂಗಿಕ ಅವಶ್ಯಕತೆಗೆ ಬಳಸಿಕೊಳ್ಳುವ ಗಂಡಿನ ವಿರುದ್ಧ ಪ್ರತಿಭಟನೆಯನ್ನು ಸೂಚಿಸುತ್ತದೆ.

ಹೆಣ್ಣು ಆರ್ಥಿಕವಾಗಿ ಸಬಲಳಾದರೆ ಎಲ್ಲಿ ತನ್ನ ಹಿಡಿತಕ್ಕೆ ಸಿಗುವುದಿಲ್ಲವೋ ಎಂಬ ಭಯದಿಂದ ಹೊರಗೆ ಹೋಗಿ ದುಡಿಯುವ ಹೆಣ್ಣನ್ನು ಮರ್ಯಾದೆಗೆಟ್ಟವಳು ಎಂಬಂತೆ ಚಿತ್ರಿಸಿ ನಾಲ್ಕು ಗೋಡೆಯ ನಡುವೆ ಬಂಧಿಸಿ ಸದಾ ತನ್ನ ಹಿಡಿತದಲ್ಲಿರುವಂತೆ ಮಾಡಲು ಪ್ರಯತ್ನಿಸುವ ಪುರುಷ ವ್ಯವಸ್ಥೆಯನ್ನು ಬಲವಾಗಿ ಪ್ರತಿಭಟಿಸುವ ಕಮಲಾವತಿ ತನ್ನ ಮನಸ್ಸಿಗೆ ಒಪ್ಪದ ಗಂಡನ್ನು ವಿವಾಹವಾಗಲು ಬಯಸದೆ, ಇನ್ನೊಬ್ಬರ ಅಧೀನಕ್ಕೂ ಒಳಗಾಗದಂತೆ "ತಾನು ಏನಾದರೂ ಮಾಡಾಬೇಕು? ಏನು?" ಎಂದು ಯೋಚಿಸಿ ತಾನು ಆರ್ಥಿಕವಾಗಿ ಸ್ವತಂತ್ರಳಾಗಿ ತನ್ನ ಅಜ್ಜಿಯನ್ನು ಕರೆದುಕೊಂಡು ಸ್ವಂತ ಬದುಕನ್ನು ನಡೆಸುವ ಕನಸು ಕಟ್ಟಿಕೊಂಡು, ಪುಟ್ಟಮ್ಮತೆ ಹೊರಗೆ ಹೋಗಿ ದುಡಿದರೆ ಮರ್ಯಾದೆ ಹೋಗುತ್ತದೆ ಎಂದರೂ "ಅಯ್ಯೋ ನನ್ನ ಮರ್ಯಾದೆಯನ್ನಾದರೂ ಯಾರಾದರೂ ಅಪ್ಪಂಥವ್ರು ತೆಗೆಯುಕಾಗದಾ?" ಎಂದು ಅಜ್ಜಿಯ ಮಾತನ್ನು ವಿರೋಧಿಸಿ

ರೆಡಿಮೇಡ್ ಉಡುಪು ತಯಾರಿಕಾ ಕಾರ್ಖಾನೆಗೆ ಕೆಲಸಕ್ಕೆ ಸೇರಲು ನಿರ್ಧರಿಸುವ ಕಮಲಾವತಿಯಲ್ಲಿ ವ್ಯವಸ್ಥೆಯ ಸಂಚಿಗೆ ಬಲಿಯಾಗದೆ, ಅಜ್ಜಿಯ ಮಾತಿಗೆ ಕಟ್ಟುಬಿದ್ದು ತನಗೆ ಯೋಗ್ಯನಲ್ಲದವನನ್ನು ಮದುವೆಯಾಗಿ ತನ್ನ ಆಸೆ ಕನಸುಗಳನ್ನು ಮರೆತು ಬದುಕಿನೊಂದಿಗೆ ರಾಜಿಯಾಗಲು ಒಪ್ಪದೆ ಪ್ರತಿಭಟಿಸುವ ಹೆಣ್ಣನ್ನು ಕಾಣುತ್ತೇವೆ.

ಗಂಡು ಹೆಣ್ಣನ್ನು ತನ್ನ ಸ್ವತ್ತು ಅವಳನ್ನು ರಕ್ಷಣೆ ಮಡುವ ಹೊಣೆ ತನ್ನದು ಎಂಬ ಅಹಮ್ಮಿನಲ್ಲಿ ಆಕೆಯ ಸ್ವತಂತ್ರ ಹರಣಮಾಡುವುದರ ವಿರುದ್ಧದ ಪ್ರತಿಭಟನೆಯನ್ನು 'ಅಮ್ಮಚ್ಚಿಯೆಂಬ ನೆನಪು' ಕಥೆಯಲ್ಲಿ ಕಾಣುತ್ತೇವೆ. ಚಿಕ್ಕಂದಿನಲ್ಲೇ ತಂದೆಯನ್ನು ಕಳೆದುಕೊಂಡ ಅಮ್ಮಚ್ಚಿ ಅನಕ್ಷರಸ್ಥೆಯಾದರೂ ದಿಟ್ಟೆ, ತನ್ನೊಳಗೆ ಬಂಡಾಯದ ಅರಿವು ಇಟ್ಟುಕೊಂಡ ಹೆಣ್ಣುಮಗಳು ಗಂಡು ದಿಕ್ಕಿಲ್ಲದ ಮನಗೆ ಆಸರೆಯಾಗಿ ಬಂದ ವೆಂಕಪ್ಪಯ್ಯ ಅದನ್ನೇ ನೆಪವಾಗಿಟ್ಟುಕೊಂಡು "ಅಮ್ಮಚ್ಚಿಯ ಹಕ್ಕುದಾರನೂ ತಾನೆ" ಎಂಬಂತೆ "ಅವಳನ್ನು ಮದುವೆಯಾಪುಗೆ ಇನ್ನು ಯಾವ ಪುಣ್ಯಾತ್ಮ ಬಪ್ಪ? ಮಗಳ ಚಿಂತೆ ನೀವು ಮಾಡಳೆ ನಾನಿದ್ದೆ ಎಂದು ಸೀತತ್ತೆಯ ಹತ್ತಿರವೂ ಹೇಳುತ್ತ ಊರ ತುಂಬವೂ ಅದನ್ನೇ ತುಂಬಿಸುತ್ತ" ಹೋದ. ವೆಂಕಪ್ಪಯ್ಯ ಆಕೆಯ ಒಡೆಯನಂತೆ ಅವಳ ವೇಷಭೂಷಣ, ಆಸೆ ಕನಸು ಎಲ್ಲವನ್ನು ನಿಯಂತ್ರಿಸತೊಡಗಿದ್ದು ಅಮ್ಮಚ್ಚಿಯ ಆಕ್ರೋಶಕ್ಕೆ ಕಾರಣವಾಯಿತು. ಪ್ರಾಯದ ಹೆಣ್ಣುಮಕ್ಕಳಿಗೆ ಸಹಜವಾಗಿ ಇರುವಂತೆ ಅಮ್ಮಚ್ಚಿಗೂ ವೇಷ ಭೂಷಣಗಳ ಬಗ್ಗೆ ವಿಶೇಷ ಆಸಕ್ತಿ ಅವಳಿಗೆ ವಾರೆ ಬೈತಲೆ ತೆಗೆದು ಎರಡು ಜಡೆ ಕಟ್ಟಿಕೊಳ್ಳುವುದು ಇಷ್ಟ ಆದರೆ ವೆಂಕಪ್ಪಯ್ಯನಿಗೆ ಅದು ಇಷ್ಟವಿಲ್ಲದಿದ್ದರಿಂದ ತನ್ನ ಇಷ್ಟವನ್ನು ಅವಳ ಮೇಲೆ ಬಲಂತವಾಗಿ ಹೇರಲು ಪ್ರಯತ್ನಿಸುತ್ತಾನೆ. ಆಗ ಅಮ್ಮಚ್ಚಿ "ಬೋಳು ಮಂಡೆ ಕಾಕ. ನಿಂಗೆ ವಾರೆ ಬಿಡು, ಯಾವ ಬಕ್ತಲೆಯೂ ತೆಗೆಯಗಾಗದ ಸಂಕಟಕ್ಕೆ ನಮ್ಗೆ ಯಾಕೆ ಹೇಳ್ತೆ?" ಎಂದು ಕಡ್ಡಿ ತುಂಡಾದಂತೆ ಹೇಳುತ್ತಾಳೆ "ಕಾನೂನಿನವಳೆಂದೇ ಎಲ್ಲ ಹೇಳುವ ಅಮ್ಮಚ್ಚಿಯ ಕಾನೂನು ಎಂದರೆ ಹೀಗಿಂದೇ-ವೆಂಕಪ್ಪಯ್ಯನಿಗೆ ಖುಷಿಯಿಲ್ಲವೆಂದು ತಾನು ಯಾಕೆ ವಾರೆ ಬೈತಲೆ ತೆಗೆಯಬಾರದು? ಎಂಬಂಥದ್ದೇ" ಈ ಮಾತೇ ಅಮ್ಮಚ್ಚಿಯ ಬಂಡಾಯದ ವ್ಯಕ್ತಿತ್ವವನ್ನು ಸೂಚಿಸುತ್ತದೆ.

ಒಂದುಗುಬ್ಬಿಯ ರವಿಕೆ ಹಾಕಿಕೊಳ್ಳುವ ಬಯಕೆಯಾಗಿ ಅವಳು ರಮಾ ಟೀಚರ್ ಹತ್ತಿರ್ ಹೋಗಿ ಒಂದುಗುಬ್ಬಿಯ ರವಿಕೆ ಹೊಲಿಯುವಂತೆ ಹೇಳಿದಾಗ ಅವರು ವೆಂಕಪ್ಪಯ್ಯ ಬಂದು ಗಲಾಟೆ ಮಾಡಿದರೆ ಎಂದು ಶಂಕೆ ವ್ಯಕ್ತಪಡಿಸುತ್ತಾರೆ. ಅದಕ್ಕೆ ಅಮ್ಮಚ್ಚಿ "ಅವಯಾವ ದೊಡ್ಡ ಗುರಿಕಾರ ನಿಮಗೆ ಗಲಾಟೆ ಮಾಡಲಿಕ್ಕೆ! ಇದು ನನ್ನ ರವಿಕೆ ನನಗೆ ಬೇಕಾದ ಹಾಗೆ ಹೊಲಿಯಿರಿ" ಎಂದು ಹೇಳುವ ಅಮ್ಮಚ್ಚಿಗೆ ತನ್ನ ಆಸ್ಮಿತೆಯ ಅರಿವಿರುವುದನ್ನು ಗುರುತಿಸಬಹುದು.

ಗಟ್ಟಿಯಾದ ವ್ಯಯಕ್ತಿಕತೆ ಇರುವ ದಿಟ್ಟಹೆಣ್ಣಾದ ಅಮ್ಮಚ್ಚಿ ವೆಂಕಪ್ಪಯ್ಯ ತನ್ನ ವೈಯಕ್ತಿಕ ವಿಷಯಗಳಲ್ಲೂ ಹಸ್ತಕ್ಷೇಪ ಮಾಡುವುದನ್ನು ತೀಕ್ಷ್ಣವಾದ ಮಾತುಗಳಿಂದ ಬಲವಾಗಿ ಪ್ರತಿಭಟಿಸುತ್ತಾಳೆ. ಕೊನೆಗೆ ವೆಂಕಪ್ಪಯ್ಯನ ಮಸಲತ್ತಿನಿಂದ ರಮಾ ಟೀಚರ್ ಹಿಂದುಗುಬ್ಬಿಯ ರವಿಕೆ ಹೊಲಿಯದೆ ಹೋದಾಗ ಅಮ್ಮಚ್ಚಿಗೆ ನಿರಾಸೆಯಾಗುತ್ತದೆ. ಇದರಿಂದ ಅಮ್ಮಚ್ಚಿ ಹತಾಶಳಾದರೂ ತನ್ನ ಮೇಲಿನ ದೌರ್ಜನ್ಯವನ್ನು ಸಹಿಸಿಕೊಂಡು ಅಸಹಾಯಕತೆಯಿಂದ ಕಣ್ಣೀರು ಹಾಕುತ್ತ ಕೂರುವ ಹೆಣ್ಣಲ್ಲ ಅಮ್ಮಚ್ಚಿ ವೆಂಕಪ್ಪಯ್ಯನ ವಿರುದ್ಧ ಸೇಡು ತೀರಿಸಿಕೊಳ್ಳಲು ಮುಂದಾಗುವ ಅಮ್ಮಚ್ಚಿ ಆತ ತಿರುಪತಿಗೆ ಹೋಗಿದ್ದ ಅವಕಾಶವನ್ನು ಉಪಯೋಗಿಸಿಕೊಂಡು ಆತನ ರೂಮಿಗೆ ಹೋಗಿ ಆತನ ಶರ್ಟನ್ನು ತೆಗೆದುಕೊಂಡು ಶರಟಿನ ಹಿಂಭಾಗ ಕೊಯ್ದು ಮುಂಭಾಗ ಹೊಲಿದು ಮುಂಭಾಗದ ಗುಂಡಿಗಳನ್ನು ಹಿಂಭಾಗಕ್ಕೆ ಹೇಗೇಗೋ ಇಟ್ಟು. "ಇದ ! ರೆಡಿ! ಕೋಡಂಗಿ ಶರ್ಟು. ತಿರುಪತಿಯಿಂದ ವಾಪಸ್ಸು ಬಂದವಂಗೆ ಪೆಷಲ್! ಎಂದು ಪುನಃ ಗೂಟಕ್ಕೆ ಹೇಗಿತ್ತೋ ಹಾಗೆ ತೂಗು ಹಾಕಿದಳು. ನನ್ನ ರವಕೆಗೆ ರಮಾ ಟೀಚರ್ ಹತ್ರ ಹೋಗಿ ಮಸಲತ್ತು ಮಾಡ್ತದ ಅಂದ್ರೆ ಅಷ್ಟು ಸುಲಭ ಅಂದ್ ಮಾಡಿಯಾ ಯಂಕಪ್ಪಯ್ಯ ನೀನು?" ಎನ್ನುವ ಅಮ್ಮಚ್ಚಿಯ ಈ ವರ್ತನೆ ಬಾಲಿಶವಾಗಿ ಕಂಡರು ತನ್ನ ಮೇಲಿನ ದೌರ್ಜನ್ಯವನ್ನು ಸುಮ್ಮನೆ ಸಹಿಸಿಕೊಳ್ಳದೆ ಪ್ರತಿಭಟಿಸುವ ಅಮ್ಮಚ್ಚಿಯ ಬಂಡಾಯದ ಗುಣ ವ್ಯಕ್ತವಾಗುತ್ತದೆ.

ಹೆಣ್ಣು ಪ್ರಾಪ್ತ ವಯಸ್ಕಳಾದಾಗ ತಂದೆ ತಾಯಂದಿರಿಗೆ ಮದುವೆ ಮಾಡಿ ಜವಾಬ್ದಾರಿ ಕಳೆದುಕೊಳ್ಳುವ ತವಕ ಅವರಿಗೆ ಹೆಣ್ಣಿನ ಆಸೆ ಅಭಿಪ್ರಾಯಗಳಿಗಿಂತ ಹೇಗೋ ಆಕೆಯ ಮದುವೆಯಾಗುವುದು ಮುಖ್ಯ. ಆಕೆಯನ್ನು ನೋಡಲು ಬಂದ ಗಂಡು ಒಪ್ಪಿದರೆ ಸಾಕು ಮದುವೆ ಮಾಡಿಬಿಡೋಣ ಎಂದು ತುದಿಗಾಲಲ್ಲಿ ನಿಂತಿರುತ್ತಾರೆ. ಎಷ್ಟೋ ಹೆಣ್ಣು ಮಕ್ಕಳು ತಂದೆ ತಾಯಿಯ ಮಾತಿಗೆ ಬೆಲೆಕೊಟ್ಟು ಅವರು ತೋರಿಸಿದ ಹುಡುಗ ಕಟ್ಟುವ ತಾಳಿಗೆ ಕೊರಳೊಡ್ಡುತ್ತಾರೆ. ಆದರೆ 'ಅಂತರಂಗದ ಪುಟಗಳು" ಕಥೆಯಲ್ಲಿ ಬರುವ ಅಚಲ ಇದಕ್ಕೆ ಭಿನ್ನ. ತನ್ನ ಮನಸೊಪ್ಪುವ ಹುಡುಗನನ್ನೇ ಮದುವೆಯಾಗಲು ಬಯಸುವ ಅಚಲ ತಂದೆತಾಯಿ, ಹಿರಿಯರ ಬಲವಂತಕ್ಕೆ ಯಾರನ್ನೋ ಕಟ್ಟಿಕೊಳ್ಳಲು ಸಿದ್ಧಳಿಲ್ಲದೆ ಪ್ರತಿಭಟಿಸುತ್ತಾಳೆ. ಅಚಲಳ ಸ್ನೇಹಿತೆ ಸರಿತ ಹುಡುಗ ಒಪ್ಪಿಕೊಂಡಾಗ ಅವ ಎಂತಹವನೇ ಇರಲಿ ಒಪ್ಪಿಕೊಂಡು ಮದುವೆಯಾಗಿ ಬಿಡಬೇಕು ಎಂದಾಗ ಅಚಲ "ಅವ ಎಂತಹವನೇ ಇರಲಿ ಎಂದು ಸರಿತಾ ಒತ್ತಿ ಹೇಳಿದಳೇಕೆ? ಸರಿತಾ, ನೀನು ವ್ಯಾಪಾರಕ್ಕೆ ಹೊರಟಿದ್ದಿ ಅಗ್ಗಕ್ಕೆ ಮಾಲು ಸಿಕ್ಕಾಗ ಗಪ್ಪೆಂತ ಹಿಡಿದುಕೊಳ್ಳುವವರಂತೆ". ಎಂದು ಯೋಚಿಸುತ್ತಾಳೆ ಎಂತಹವನನ್ನೋ ಅವನು ಒಪ್ಪಿದ ಎಂಬ ಕಾರಣಕ್ಕೆ ಒಪ್ಪಿಕೊಳ್ಳಲು ಇದೇನು ವ್ಯಾಪಾರವೇ? ಎಂದು

ಪ್ರಶ್ನಿಸಿಕೊಳ್ಳುವ ಅಚಲ "ಮದುವೆಯಾದರೆ ಎಂತಹವನನ್ನು ಗೊತ್ತುಂಟ? ಅವನನ್ನು ಒರಗಿದರೆ ಸಾಕು. ಆಹ! ಎನಿಸುವಂತಿರಬೇಕು" ಎಂದುಕೊಳ್ಳುತ್ತಾಳೆ. ಅಚಲಳ ಮಾತುಗಳಲ್ಲಿ ತಾನು ಮದುವೆಯಾಗ ಬಯಸುವ ಹುಡುಗನ ಬಗೆಗೆ ಸ್ಪಷ್ಟ ಕಲ್ಪನೆಯಿದೆ. ಆ ವಿಷಯದಲ್ಲಿ ಆಕೆ ಹಿರಿಯರ ಒತ್ತಾಯಕ್ಕೆ ಕಟ್ಟು ಬಿದ್ದು ರಾಜಿಯಾಗಲು ಸಿದ್ಧಳಿಲ್ಲ. ಒಬ್ಬೊಬ್ಬರಾಗಿ ಹನ್ನೊಂದು ಜನ ಬಂದು ನೋಡಿಕೊಂಡು ಹೋದರೂ ಅಚಲ ಒಪ್ಪದಿದ್ದಾಗ "ಹೀಗೆ ಅವ ಬೇಡ ಇವ ಬೇಡ ಎಂದು ಕುಳಿತರೆ ಕಡೆಗೆ ಸಿಗುವುದು ಯಾಕೂ ಬೇಡದವ" ಎಂದುಕೊಂಡರೂ ಅವಳ ಮನಸ್ಸು "ಹಾಗಂತ ಚಪ್ಪರ, ವಾದ್ಯ, ಉಡುಪು, ಶೃಂಗಾರ, ಆಭರಣ, ಅಂತಸ್ತು, ಆಶೀರ್ವಾದದ ಅಕ್ಷತೆಕಾಳುಗಳಿಗಾಗಿ ಮದುವೆಯಾಗುವುದು ಹೇಗೆ?" ಎಂದು ಪ್ರಶ್ನಿಸುತ್ತದೆ. ಏನೇನೋ ಕಾರಣ ಹೇಳಿ ಮದುವೆಗೆ ಒಪ್ಪಿಸಲು ಪ್ರಯತ್ನಿಸುವ ಹಿರಿಯರ ವಿರುದ್ಧ ಅಚಲಳ ಮೇಲಿನ ಮಾತುಗಳಲ್ಲಿ ಮದುವೆಯಾಗುವುದು ನನಗಾಗಿಯೇ ಹೊರತು ಮದುವೆಯ ಸಾಂಪ್ರದಾಯಿಕ ಆಚರಣೆಗಳಿಗಲ್ಲ ಎಂಬ ತೀಕ್ಷ್ಣ ಪ್ರತಿಭಟನೆ ವ್ಯಕ್ತವಾಗಿದೆ. ಕೊನೆಗೆ "ಅಪ್ಪ ಅಮ್ಮ ಇರುವವರೆಗೆ ಸೈ. ಆ ಮೇಲೆ ನಿನ್ನನ್ನು ಯಾರು ನೋಡಿ ಕೊಳ್ಳುತ್ತಾರೆ?" ಎಂದು ಹೊಟ್ಟೆಬಟ್ಟೆ ಪ್ರಶ್ನೆ ಎತ್ತಿ ಒಪ್ಪಿಸಲು ಹೋದಾಗ ಅಚಲ ಕೇವಲ ಹೊಟ್ಟೆ ಬಟ್ಟೆಗಾಗಿ ಇಷ್ಟವಿಲ್ಲದವನನ್ನು ಮದುವೆಯಾಗುವುದೇ? "ನಾ ಕೆಲಸಕ್ಕೆ ಹೋಗುತ್ತೇನೆ" ಎಂದು ದಿಟ್ಟವಾಗಿ ಹೇಳುತ್ತಾಳೆ. ಅಚಲಳನ್ನು ನೋಡಲು ಬಂದ ವೆಂಕಟು ತನ್ನ ಉದ್ಯೋಗ, ಆರ್ಥಿಕ ಸ್ಥಿತಿಗತಿ, ಗೃಹೋಪಯೋಗಿ ವಸ್ತುಗಳು, ಸೈಟು ಇತ್ಯಾದಿಗಳ ಬಗ್ಗೆ ವಿವರಣೆ ನೀಡಿ ತನ್ನನ್ನು ಮದುವೆಯಾಗುವಂತೆ ಕೇಳಿದಾಗ "ಅಂತೂ, ನಿನಗೊಂದು ಹುಡುಗಿಬೇಕು, ಫ್ಯಾನ್, ಫ್ರಿಡ್ಜ್, ಟೇಬಲ್, ಪಾತ್ರೆಪರಡಿ, ಸೈಟು – ಇತ್ಯಾದಿಗಳಂತೆ ಅಲ್ಲ?" ಎಂದು ಸ್ಪಷ್ಟವಾಗಿ ನಿರಾಕರಿಸುತ್ತಾಳೆ. ಕೇವಲ ತನ್ನ ಆರ್ಥಿಕ ಸ್ಥಿತಿಗತಿ ಉತ್ತಮವಾಗಿದ್ದರೆ ಹುಡುಗಿ ಒಪ್ಪಿಬಿಡುತ್ತಾಳೆ ಅವಳಿಗೆ ಇನ್ನೇನು ಬೇಕು? ಎಂಬ, ತನ್ನ ಭೋಗಕ್ಕೆ ಇತರ ವಸ್ತುಗಳಂತೆ ಹೆಣ್ಣೂ ಬೇಕು ಎಂಬ ಗಂಡಿನ ಧೋರಣೆಯ ವಿರುದ್ಧದ ಖಂಡನೆಯನ್ನು ಅಚಲಳ ವರ್ತನೆಯಲ್ಲಿ ಗುರುತಿಸಬಹುದು.

ಗಂಡನ ಬೇಜವಾಬ್ದಾರಿತನದಿಂದ ಆಸ್ತಿಪಾಸ್ತಿ ಎಲ್ಲವನ್ನು ಕಳೆದುಕೊಂಡು ದಿವಾಳಿಯಾದ 'ಹಕ್ಕಿಲ್ಲದವರು' ಕಥೆಯ ಸಿರಿ ಬೇರೆ ಕಡೆ ಉದ್ಯೋಗದಲ್ಲಿದ್ದ ಅಣ್ಣನು ಊರಿನಲ್ಲಿ ಒಂಟಿಯಾಗಿದ ತಾಯಿ, ತೋಟ, ಮನೆ ನೋಡಿಕೊಂಡು ಅಲ್ಲೇ ಇರು ನನಗೆ ತೋಟ ಬೇಡ ಎಂದು ಕರೆದಾಗ ಹೇಗೂ ಗತಿ ಇಲ್ಲದ ಸಿರಿ ತವರಿಗೆ ಬಂದು, ತನ್ನ ತಾಯಿ, ಮಾನಸಿಕ ಅಸ್ವಸ್ಥ ತಂಗಿ, ಎರಡು ಮಕ್ಕಳನ್ನು ಕಟ್ಟಿಕೊಂಡು ಗಂಡಿನಂತೆ ಹಾಳುಬಿದ್ದ ತೋಟ, ಮನೆಯನ್ನು ಸುಸ್ಥಿತಿಗೆ ತಂದ ಮೇಲೆ ಅಣ್ಣ ಅಧಿಕಾರ ಚಲಾಯಿಸಲು ಬಂದಾಗ ತನ್ನನ್ನು ನೋಡಲು ಬಂದ ಪದ್ದಮಾವ, ಜಲಜ

ಮಾಯಿಯರ ಜೊತೆ ಹೇಳಿಕೊಂಡು ವಿರೋಧಿಸುತ್ತಾಳೆ ಸಿರಿ. "ಜೀಕ್ತ ತೋಟ ರಿಪೇರಿ ಮಾಡಿಂಡ್‌ದ್ ನಾನ್. ಜೀಕ್ತ್ ಮನೆ ರಿಪೇರಿ ಮಾಡಿಂಡ್‌ದ್ ನಾನ್ ರಪೇರಿ ಅಂದ್ರೆ ಯಂತ? ದೊಡ್ಡ ರಿಪೇರಿ ಮಾಡಗೆ ಸಂಗೆ ಹಕ್ಕು ಕೊಡ್ತನ ಅಂವ?" ಜಂಕಿ ಜಿದ್ದ್‌ದ್ ನನ್ನ ಹೊಟ್ಟೆಗೆ ಪದ್ದಮಾವ" ಎಂಬ ಅವಳ ಮಾತಿನಲ್ಲಿ ನೋವಿನೊಂದಿಗೆ ಆಕ್ರೋಶವೂ ಮಿಳಿತವಾಗಿದೆ. ಎಲ್ಲವನ್ನು ಕಳೆದುಕೊಂಡು ದುಸ್ಥಿತಿಯಲ್ಲಿದ್ದ ಸಿರಿಯನ್ನು ಕರೆತಂದು ಎಲ್ಲ ನಿನ್ನದೇ ಎಂದು ಹೇಳಿ ತೋಟ, ಮನೆ ಸುಸ್ಥಿತಿಗೆ ಬಂದ ಮೇಲೆ ಹಕ್ಕು ಚಲಾಯಿಸುವ ಅಣ್ಣನ ಬಗ್ಗೆ "ಹಕ್ಕು ಅಂತ್ರಿ ಪದ್ದಮಾವ...... ಕಡೇಪಕ್ಷ, ಯಾವ ಹಕ್ಕು ಅವ ಕೊಡದ್ರೆ ಹೋಗಡ್, ಸಾಯ್ತ ನನ್ನನ್ನು ಕರೆದು ಇಲ್ಲಿ ಕೂಡಿಸಿ ಮತ್ತೆ ಬಾವಿಗೆ ನೂಕ್ತ ಹಕ್ಕಾದರೂ ಅವಂಗಿಲ್ಲೆ...." ಎಂಬ ಸಿರಿಯ ಮಾತುಗಳಲ್ಲಿ ಅವಳ ಹೊಟ್ಟೆಯ ಸಂಕಟ ಪ್ರತಿಭಟನೆಯ ಕಿಚ್ಚಾಗಿ ಹೊರಹೊಮ್ಮಿರುವುದನ್ನು ಕಾಣುತ್ತೇವೆ. ತೋಟ, ಮನೆ ತನ್ನದೇ ಎಂದು ತಿಳಿದು ಅವಕ್ಕಾಗಿ ತನ್ನ ಜೀವವನ್ನು ಸವೆಸಿದ್ದಾಳೆ ಸಿರಿ. ಅಂದು ನನಗೆ ಬೇಡ ಎಂದಿದ್ದ ಅಣ್ಣ ಸಿರಿ ಬೆವರು ಸುರಿಸಿ ತೋಟ, ಮನೆಯನ್ನು ಸರಿಯಾದ ಸ್ಥಿತಿಗೆ ತಂದ ಮೇಲೆ ಅದರ ಮೇಲೆ ತನ್ನ ಹಕ್ಕು ಚಲಾಯಿಸುವುದು ಶೋಷಣೆಯೇ ಸರಿ ಇಂತಹ ಶೋಷಣೆಯನ್ನು ವಿರೋಧಿಸುವ ಹೆಣ್ಣನ್ನು ಸಿರಿಯಲ್ಲಿ ಕಾಣಬಹುದು.

ಭಾರತದ ವಿಭಜನೆಯು ವೈಯಕ್ತಿಕ ನೆಲೆಯಲ್ಲಿ ಉಂಟು ಮಾಡಿದ ಪರಿಣಾಮವನ್ನು ವಸ್ತುವಾಗಿ ಹೊಂದಿರುವ 'ಕ್ರೌಂಚ ಪಕ್ಷಿಗಳು' ಕಥೆಯಲ್ಲಿ ಬರುವ ಲಕ್ಷ್ಮಮ್ಮ ಪುರುಷವ್ಯವಸ್ಥೆಯ ದೌರ್ಜನ್ಯಕ್ಕೆ ಒಳಗಾದವರು. ದೇಶ ವಿಭಜನೆಯ ಸಂದರ್ಭದಲ್ಲಿ ಅಪಹರಣಕ್ಕೀಡಾದ ಲಕ್ಷ್ಮಮ್ಮ ಮಧ್ಯಸ್ಥರ ಮಾತುಕತೆಯ ಫಲವಾಗಿ ಹಿಂದಿರುಗಿ ಬಂದರೇನೋ ಸರಿ, ಅವರ ಗಂಡ ಅವರನ್ನು ಗುರುತಿಸದೆ ಹೊರಟುಹೋದಾಗ ನಿರಾಶ್ರಿತರಾದ ಲಕ್ಷ್ಮಮ್ಮ ಸ್ವಾಂತತ್ರ್ಯ ಹೋರಾಟಗಾರ್ತಿ ವಿಶಾಖಬೆನ್ ಮನೆಯಲ್ಲಿಯೇ ಕೆಲಸ ಮಾಡಿಕೊಂಡು ಉಳಿಯುತ್ತಾರೆ. ಕೆಲವು ವರ್ಷಗಳ ನಂತರ ವಿಶಾಖಬೆನ್ ಸಂದರ್ಶನಕ್ಕೆಂದು ಬಂದ ಪತ್ರಕರ್ತೆ ಅರುಂಧತಿ (ಈಕೆ ಲಕ್ಷ್ಮಮ್ಮ ಮತ್ತು ಆಕೆಯ ಗಂಡ ಅಶ್ವಾರ್ಣಭಟ್ಟರ ಊರಿನ ಹುಡುಗಿ. ಭಟ್ಟರನ್ನು ಚೆನ್ನಾಗಿ ಬಲ್ಲ, ಅವರ ಬಾಯಿಂದ ಲಕ್ಷ್ಮಮ್ಮನ ಅಪಹರಣದ ಕಥೆಯನ್ನು ಕೇಳಿದ್ದ ಹುಡುಗಿ) ಲಕ್ಷ್ಮಮ್ಮ ತಮ್ಮ ಊರಿನವಳೆಂದು ತಿಳಿದು ಅದರಲ್ಲೂ ಅಶ್ವಾರ್ಣಭಟ್ಟರ ಹೆಂಡತಿ ಎಂದು ತಿಳಿದು ಸಂತೋಷಪಡುತ್ತಾಳೆ. ಆದರೆ ಲಕ್ಷ್ಮಮ್ಮ ತನ್ನ ಕಥೆಯನ್ನು ಹೇಳಿದಾಗ ಅರುಂಧತಿಗೆ ಇಬ್ಬರಲ್ಲಿ ಯಾರು ಸರಿ ಎಂಬ ಗೊಂದಲವುಂಟಾಗುತ್ತದೆ. ಕೊನೆಗೆ ಅರುಂಧತಿ ಭಟ್ಟರು ಹೇಗಿದ್ದಾರೆಂದು ವಿಚಾರಿಸಿ ಹೇಳುವುದಾಗಿ ಹೇಳಿದಾಗ ಲಕ್ಷ್ಮಮ್ಮ "ವಿಚಾರಿಸಿಕೊಳ್ಳಿ ನಿಮಗೆ ಬೇಕಿದ್ದರೆ ಪರಪುರುಷರ ಸಮಾಚಾರ ನನಗಂತೂ ಬೇಡ" ಎನ್ನುತ್ತಾರೆ.

ಅವರ ಮಾತಿನಲ್ಲಿ ಎಂತಹ ತೀಕ್ಷ್ಣತೆ ಇದೆ. ಇಷ್ಟು ವರ್ಷ ಆಕೆಯ ಎದೆಯಲ್ಲಿ ಅಡಗಿದ್ದ ಆಕ್ರೋಶ ತಣ್ಣನೆಯ ಜ್ವಾಲಾಮುಖಿಯಂತೆ ಹೊರಚಿಮ್ಮುವುದನ್ನು ಗುರುತಿಸಬಹುದು. ಅಂದು ಅಪಹರಣಕಾರರಿಂದ ಬಿಡುಗಡೆಯಾಗಿ ನಿರಾಶ್ರಿತರ ಶಿಬಿರದಲ್ಲಿದ್ದಾಗ ತನ್ನನ್ನು ನೋಡಿಯೂ ಗುರುತಿಸದೆ ಅಪರಿಚಿತನಂತೆ ಹೊರಟುಹೋದ ವ್ಯಕ್ತಿ ಅವಳ ಪಾಲಿಗೆ ಪರಪುರುಷ ಎನಿಸುವುದು ಸಹಜ ಪಾತಿವ್ರತ್ಯತೆ ಹೆಣ್ಣಿಗೆ ಮಾತ್ರ ಸೀಮಿತ ಎಂಬಂತೆ ವರ್ತಿಸುವ ಗಂಡುಜಾತಿಗೆ ಕಪಾಳ ಮೋಕ್ಷ ಮಾಡಿದಂತಿದೆ ಲಕ್ಷ್ಮಮ್ಮನ ಮಾತು.

ಅರುಂಧತಿ ಲಕ್ಷ್ಮಮ್ಮನನ್ನು ಊರಿಗೆ ಹೋಗುತ್ತೇನೆ ಬನ್ನಿ ಎಂದಾಗ "ಎಲ್ಲಿ? ಯಾವ ಊರು? ಕುಂಟೆ ಮೇಲೆ ಹೋಗುವ ಕಾಲಕ್ಕೆ? ನಿಮಗೆ ಬೇರೆ ಉದ್ಯೋಗವಿಲ್ಲ. ಇನ್ನು ಹೋಗುವುದು ಒಂದೇ ಊರಿಗೆ ಟಿಕೆಟು ಬರುವುದೇ ತಡ ಜಾರುವುದೇ." ಎನ್ನುವ ಲಕ್ಷ್ಮಮ್ಮನವರ ಮಾತುಗಳಲ್ಲಿ ಅಪಾರ ನೋವು ಮಡುಗಟ್ಟಿರುವುದರ ಜೊತೆಗೆ ಪ್ರತಿಭಟನೆಯೂ ಮಿಳಿತವಾಗಿದೆ. ನನ್ನ ದೇಶ, ನನ್ನ ಗಂಡ, ನನ್ನ ಜನರನ್ನು ಸೇರಬೇಕು ಎಂದು ಬಂದ ನನ್ನನ್ನು ಗಂಡನಾದವನು ಪ್ರೀತಿಯಿಂದ ಸಂತೈಸುವ ಬದಲು ತೊರೆದು ಹೋದ. ಯೌವ್ವನದಲ್ಲಿ ಇಲ್ಲದ ಗಂಡ, ಆತನ ಊರು ಈಗ ಏಕೆ ಎಂದುಕೊಳ್ಳುವ ಲಕ್ಷ್ಮಮ್ಮ ಅರುಂಧತಿಯೊಡನೆ ಹೋಗಲು ನಿರಾಕರಿಸುತ್ತಾರೆ.

ಪುರುಷ ಪ್ರಧಾನ ವ್ಯವಸ್ಥೆ ಹೆಣ್ಣಿನ ರಕ್ಷಣೆಯ ಗುತ್ತಿಗೆ ಪಡೆದಂತೆ ತಾನಿಲ್ಲದಿದ್ದರೆ ಆಕೆಯ ಗತಿ ಏನು? ಇಡೀ ಸಮಾಜವೇ ಆಕೆಯನ್ನು ದುರುಪಯೋಗಪಡಿಸಿಕೊಂಡು ಬಿಡುತ್ತದೆ ಎಂಬ ಭ್ರಮೆಯಲ್ಲಿ ಆಕೆ ಇಷ್ಟ ಬಂದಂತೆ ಜೀವಿಸುವ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳುವುದರ ವಿರುದ್ಧ ಬಹಿರಂಗವಾಗಿ ಪ್ರತಿಭಟಿಸಲು ಸಾಧ್ಯವಾಗದಿದ್ದರೂ ತನ್ನ ಮೌನದಲ್ಲೇ ಪ್ರತಿಭಟಿಸುವುದನ್ನು 'ಸೌಗಂಧಿಯ ಸ್ವಗತಗಳು' ಕಥೆಯಲ್ಲಿ ಕಾಣುತ್ತೇವೆ. ಮದುವೆ ವಯಸ್ಸು ಮೀರಿದರೂ ಮದುವೆಯಾಗದೆ ಉಳಿದ ಸೌಗಂಧಿಯ ಬಗ್ಗೆ ಆಕೆಯ ತಂದೆ, ತಾಯಿ, ಸಮಾಜ ಕರುಣೆ ತೋರುವುದು, ಅತಿಯಾದ ಕಾಳಜಿ ವ್ಯಕ್ತಪಡಿಸುವುದು, ತನ್ನನ್ನು ಜೋಪಾನ ಮಾಡುವ ನೆಪದಲ್ಲಿ ವ್ಯವಸ್ಥೆ ತನ್ನ ಸ್ವಾತಂತ್ರ್ಯ ಕಿತ್ತುಕೊಳ್ಳುವುದು. ಅವಳ ಇರುಸು ಮುರಸಿಗೆ ಕಾರಣಾವಾಗುತ್ತದೆ. ಇದರಿಂದ ಬೇಸತ್ತ ಸೌಗಂಧಿ ಬೇರಡೆ ವರ್ಗ ಮಾಡಿಸಿಕೊಂಡು ಒಂಟಿಯಾಗಿ ಇರಲು ಬಯಸುವುದು ಸೌಗಂಧಿಯ ಪ್ರತಿಭಟನೆಯ ಒಂದು ರೂಪವೇ ಆಗಿದೆ.

"ಸ್ತ್ರೀಣಾಂ ನೈವಾಧಿಕಾರೋ ವಿಜ್ಞೇಯ; ಶಾಲಗ್ರಾಮ ಶಿಲಾರ್ಚನೇ...... ಎಂದದ್ದು ಸಾಲದೆಂದು ಮುಟ್ಟಿನವರು, ಮದುವೆಯಾದರು, ಮಟ್ಟುನಿಲ್ಲದವರು 'ಶಾಲಗ್ರಾಮ' ಶಿಲೆಯನ್ನು

ಮುಟ್ಟಬಾರದು" ಎಂದು ನಮ್ಮ ಪುರಾಣಗ್ರಂಥಗಳಲ್ಲಿ ಹೇಳಿರುವುದನ್ನು ಆಧಾರವಾಗಿಟ್ಟುಕೊಂಡು ಹೆಣ್ಣಿನ ಆಧ್ಯಾತ್ಮಿಕ, ಧಾರ್ಮಿಕ ಸ್ವಾತಂತ್ರ್ಯವನ್ನು ಹರಣ ಮಾಡಿದ್ದರ ವಿರುದ್ಧ ಹೆಣ್ಣಿನ ಪ್ರತಿಭಟನೆಯ ದನಿಯನ್ನು 'ಒಂದು ಬಾಗಿಲ ಸದ್ದು' ಕಥೆಯಲ್ಲಿ ಕಾಣುತ್ತೇವೆ. ಪುರುಷಪ್ರಧಾನ ವ್ಯವಸ್ಥೆ ಹೆಣ್ಣಿನ ಜೈವಿಕ ಭಿನ್ನತೆಯನ್ನೇ ಬಂಡವಾಳವನ್ನಾಗಿ ಮಾಡಿಕೊಂಡು ಹೆಣ್ಣನ್ನು ಕೀಳುಮಾಡಿ ಆಕೆಯ ಆಧ್ಯಾತ್ಮಿಕ, ಧಾರ್ಮಿಕ ಸ್ವಾತಂತ್ರ್ಯವನ್ನು ಕಿತ್ತುಕೊಂಡಿದ್ದರ ವಿರುದ್ಧ ಹೆಣ್ಣೊಬ್ಬಳು ತಾನು ಮುಟ್ಟಬಾರದು ಎಂದು ತಲೆತಲಾಂತರದಿಂದಲೂ ನಿರ್ಬಂಧ ವಿಧಿಸಿದ್ದ 'ಶಾಲಗ್ರಮ'ವನ್ನು ಮುಟ್ಟಿ ಪ್ರತಿಭಟಿಸುವುದರ ಜೊತೆಗೆ, ಸ್ತ್ರೀ 'ಶಾಲಗ್ರಾಮ'ವನ್ನು ಮುಟ್ಟಬಾರದು ಎಂದು ನಿರ್ಬಂಧ ವಿಧಿಸಿದ್ದ "ಆಚಾರ್ಯರೆಲ್ಲ ಎಲ್ಲಿ? – ಬರಲಿ" ಎಂದು ಸವಾಲೆಸೆಯುವುದನ್ನು ಕಾಣುತ್ತೇವೆ. ಆ ಮೂಲಕ ಸ್ತ್ರೀಯನ್ನು ಅಸ್ಪೃಶ್ಯಳಂತೆ ಕಾಣುವ ಪುರುಷವ್ಯವಸ್ಥೆಯ ವಿರುದ್ಧ ಪ್ರತಿಭಟನೆ ವ್ಯಕ್ತವಾಗಿದೆ.

ಪ್ರಕೃತಿಯಲ್ಲಿ ಪುರುಷನಿಗೆ ಸರಿಸಮಾನಾದ, ಅವನಿಗಿಂತ ಹೆಚ್ಚು ಎಂದರೂ ತಪ್ಪಿಲ್ಲ. ಪಾತ್ರ ನಿರ್ವಹಿಸುವ ಹೆಣ್ಣು ಸೌಲಭ್ಯಗಳಿಂದ ಮಾತ್ರ ವಂಚಿತಳಾಗಿದ್ದಾಳೆ. 'ಶಾಲಿಗ್ರಾಮ'ವನ್ನು ಮುಟ್ಟಬಾರದು, 'ಕುರ್ಚಿ'ಯ ಮೇಲೆ ಕೂರಬಾರದು, ಕಾಲಿಗೆ 'ಮೆಟ್ಟ'ನ್ನು ಧರಿಸಬಾರದು ಹೀಗೆ ಅವಳ ಮೇಲೆ ಏರಿರುವ ನಿಷೇಧಗಳು ಒಂದೇ ಎರಡೇ ಈ ಎಲ್ಲ ಸೌಲಭ್ಯಗಳನ್ನು ಅನುಭವಿಸುವ ಹಕ್ಕು ಗಂಡಿಗಿದೆ. ಆದರೆ ಹೆಣ್ಣು ಮಾತ್ರ ಈ ಹಕ್ಕುಗಳಿಂದ ವಂಚಿತಳಾಗಿದ್ದಾಳೆ. ಆಕೆ ಚಿಕ್ಕ ಚಿಕ್ಕ ವಿಷಯಗಳಿಗೂ ಹೋರಾಡಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಆಕೆ ತನ್ನ ಹಕ್ಕು, ಸೌಲಭ್ಯಗಳಿಗಾಗಿ ಹೋರಾಡುವ ಹಾದಿಯಲ್ಲಿ ಪುರುಷ ವ್ಯವಸ್ಥೆಯಿಂದ ಪ್ರತಿರೋಧವನ್ನು ಎದುರಿಸಬೇಕಾಗಿದೆ. ಕೆಲವು ಹೆಣ್ಣು ಮಕ್ಕಳು ಪುರುಷವ್ಯವಸ್ಥೆಯ ಪ್ರತಿರೋಧಕ್ಕೆ ಹೆದರಿ ಸುಮ್ಮನಾದರೂ ಕೆಲವರು ಈ ತಾರತಮ್ಯ ನೀತಿಯನ್ನು ಪ್ರತಿಭಟಿಸುವ ಧೈರ್ಯ ತೋರುತ್ತಾರೆ. ಅಂತಹವರಲ್ಲಿ 'ವಾಣಿಮಾಯಿ' ಕಥೆಯ ವಾಣಿಮಾಯಿ ಪ್ರಮುಖಳಾದವಳು. ಕೇವಲ ಕಾಲಿಗೆ ಧರಿಸುವ ಮಟ್ಟಿಗಾಗಿ ಆಕೆ ಏನೆಲ್ಲ ಪಾಡು ಪಡುತ್ತಾಳೆ. "ಮೆಟ್ಟು ಹಾಕುವುದು ಒಂದೋ ಬೊಂಬಾಯಿ ಸೂಳೆಯರು, ಇಲ್ಲ ಊರು ನಾಯಕ ಸಾನಿಯರು ಹೊರತು ಮರ್ಯಾದಸ್ಥರಲ್ಲ" ಎಂಬ ಭಾವನೆಯಿದ್ದ ಸನ್ನಿವೇಶದಲ್ಲಿ ವಾಣಿಮಾಯಿ ಮೆಟ್ಟಿಗಾಗಿ ಆಸೆ ಪಟ್ಟರೆ ಅವಳ ಆಸೆ ಈಡೇರುವುದು ಸಾಮಾನ್ಯ ವಿಷಯವಾಗಿರಲಿಲ್ಲ. ಹಾಗೆಂದು ಸುಮ್ಮನಿರುವ ಜಾಯಮಾನದವಳಲ್ಲ ಅವಳು. ಸೀದಾಸಾದಾ ಹುಡುಗಿಯಾದರೂ ನೇರ ಮಾತನಾಡುವ ವ್ಯಕ್ತಿತ್ವದವಳು. ವಾಣಿಮಾಯಿ ಮನೆಗೆ ಬಂದಿದ್ದ ಅತಿಥಿಗಳ ಚಪ್ಪಲಿಯನ್ನು ಆಸೆಯಿಂದ ಮೆಟ್ಟಿಕೊಂಡು ಹಿತ್ತಲಿನಲ್ಲಿ ತಿರುಗುತ್ತಿದ್ದಾಗ ಅಕಸ್ಮಾತ್ ಸೆಗಣಿಯ ಮೇಲೆ ಕಾಲಿಟ್ಟು ಮೆಟ್ಟೆಲ್ಲ ಗಲೀಜಾದಾಗ ವಾಣಿಮಾಯಿ ಮೆಟ್ಟನ್ನು ಅದು ಇದ್ದ ಜಾಗದಲ್ಲಿ ತಂದು ಬಿಟ್ಟು ಕಾಣದಂತೆ

ಸುಮ್ಮನಾಗಿ ಬಿಡುತ್ತಾಳೆ. ನರಸಿಂಹನಿಗೆ ವಾಣಿಮಾಯಿಯ ಮೇಲೆ ಅನುಮಾನ ಬಂದು ಆತ 'ಸಗಣಿ ಮೆತ್ತಿಟ್ಟದ ಯಾರಂದ್ ನಂಗೆ ಗೊತ್ತುಂಟು. ಗೊತ್ತಿಲ್ಲೆ ಅಂದ್ ಮಾಡಿಂತ್ ಬೇಡ. ಅವಳ ಹಂಕಾರ ಬಿಡಿಸಿಕೊಡದ್ರೆ ನಾನು ನರಸಿಂಹನಾ!" ಎಂದು ಕೋಪದಿಂದ ಅಬ್ಬರಿಸುತ್ತಾನೆ. ವಾಣಿಮಾಯಿ ಏನು ಕಡಿಮೆಯೇ? ಅದಕ್ಕೆ ಅವಳು 'ಯೇನಿಯ ಮಾಡ್ತೆ? ಮಾಡ್ತ ಉಂಬ್ರು ಮಾಡ್ತ. ಮೊಂಸುಬುರಕ. ಅಟ್ಲ್ ಮಾಡ್ ಹೋವು... ನಾವು ಉಣ್‌ತೋ" ಎಂದು ಬಿಟ್ಟಾಗ ನರಸಿಂಹ ದರ್ಶನ ಬಂದವನಂತೆ "ಏನಂದೆ ಮುಂಡೆ? ಅಟ್ಲ್ ಮಾಡು ಅಂದೆಯ! ಅಟ್ಲ್ ನಾ ಮಾಡ್ತಾರೆ, ನೀನ್ಯಾಕೆ? ಮೆಟ್ಟು ಮೆಟ್ಕಂಡ್ ಬಾರಿಕ್ಕ ಹಿಂದೆ ಓಡಿ ಹೋಪುಗಾ?" ಎನ್ನುತ್ತ ಹೊಡೆದೇ ಬಿಡುವವನಂತೆ ಮುನ್ನುಗ್ಗಿ ಬಂದಾಗ ವಾಣಿಮಾಯಿ "ಬಾ ಬಾಯ ಹಕ್ಕೈ ಬಾ ಕೈಲೆ ಏನುಂಟು ಗೊತ್ತುಂಟ? ಈ ಕೊಕ್ಕೆ ಸೂಜಿಲೆ ನಿನ್ನ ಕಣ್ಣ ಚಂದ್ರಿಕೆ ರವ್ವ ತೆಗಿತೆ. ಬಾ" ಎಂದು ಕೊಕ್ಕಸೂಜಿಯನ್ನೇ ಆಯುಧವಾಗಿ ಹಿಡಿದು ಮಹಾಂಕಾಳಿಯಂತೆ ನಿಲ್ಲುವುದು ಗಂಡಿನ ದೌರ್ಜನ್ಯ ಸಹಿಸದ ಹೆಣ್ಣಿನ ಪ್ರತಿಭಟನಾ ಮನೋಭಾವವನ್ನು ಎತ್ತಿ ಹಿಡಿಯುತ್ತದೆ.

ವಾಣಿಮಾಯಿಯ ದೊಡಪ ಅವಳ ಆಸೆಯಂತೆ ಅವಳಿಗೆ ಒಂದು ಜೊತೆ ಮೆಟ್ಟು ಹೊಲಿಸಿಕೊಡಲು ಬ್ಯಾರಿಯನ್ನು ಕರೆಸಿ ಅಳತೆ ತೆಗೆಸಿ ಆತ ಹೊರಡುವ ಸಂದರ್ಭದಲ್ಲಿ ಅಲ್ಲಿಗೆ ಬಂದ ನರಸಿಂಹ 'ಹೆಮ್ಮಕ್ಕಳಿಗೆ ತೀರಾ ಪೇಶನ್ನು ಯಾಕೆ ಬೇಕು? ಇವಳೊಬ್ಬಳಿಗೆ ಅದೇನು ಗರ್ಜು ಇವಳು ಹೇಳಿದ ಹಂಗೇ ಕೇಣ್ಣಿ, ಮತ್ತೆ ಆ ಬ್ಯಾರಿನ್ನೇ ಕಟ್ಟಿಂಡ್ ಹಾರ್‌ತ್ಲ್" ಎಂದಾಗ ವಾಣಿಮಾಯಿಗೆ ಸಿಟ್ಟು, ದುಃಖ ಎರಡೂ ಒಟ್ಟಿಗೆ ಬಂದು ನೀನು ಮೆಟ್ಟು ಮೆಟ್ಟಿಂಡಿದಿಯಿಲ್ಲ. ಅದು ಅಡ್ಡಿಲಯ? ಚಟ್ಟಲೆ ನಿನ್ನ ಹೊತ್ತಂಡ್ ಹೋಪ್ತಿಗ್ ಒಟ್ಟಿಗೇ ತೆಕಂಡ್ ಹೋವು ಮತ್ತೆ ಬಿಟ್ಟು ಹೋಗಡಾ. ನಿನ್ನ ಹೆಂಡತಿ ಮೆಟ್ಟಿ ಯಾರೊಟ್ಟಿಗಾರೂ ಓಡಿ ಹೋವು ಮತ್ತೆ ಬಿಟ್ಟು ಹೋಗಡಾ" ಎಂದು ಕೂಗುವುದು ಗಂಡಿಗೊಂದು ನೀತಿ, ಹೆಣ್ಣಿಗೊಂದು ನೀತಿ ಎಂಬ ತಾರತಮ್ಯದ ವಿರುದ್ಧ ಆಕೆಯ ಆಕ್ರೋಶವೇ ಆಗಿದೆ. ಆತ ಮೆಟ್ಟು ಧರಿಸಬಹುದಾದರೆ, ನಾನೇಕೆ ಧರಿಸಬಾರದು ಎಂಬುದು ವಣಿಮಾಯಿಯ ಆಲೋಚನೆ.

ಆದರೆ ಪುರುಷ ವ್ಯವಸ್ಥೆ ಬಹಳ ಪ್ರಬಲವಾಗಿದ್ದು, ಅದರ ಆಶಯಕ್ಕೆ ವಿರುದ್ಧವಾಗಿ ವಾಣಿಮಾಯಿ ಮೆಟ್ಟನ್ನು ಹೊಂದಿದ ತಪ್ಪಿಗೆ ತನ್ನ ಬಲಪಾದವನ್ನು ಸುಡಿಸಿಕೊಳ್ಳಬೇಕಾದ ಸ್ಥಿತಿ ಬಂದದ್ದು ದುರಂತ ಆದರೆ ವಾಣಿಮಾಯಿ ತನ್ನ ಮೇಲಾದ ದೌರ್ಜನ್ಯವನ್ನು ಮರೆಯದೆ ಸಾಯುವ ಕೊನೆ ಕ್ಷಣದಲ್ಲೂ ನರಸಿಂಹನ ಮೂತಿಗೆ ರಕ್ತ ಬರುವಂತೆ ಬಾರಿಸದ್ದು ತನ್ನ ಸಣ್ಣ ಪುಟ್ಟ ಆಸೆಯನ್ನು ಈಡೇರಿಸಿಕೊಳ್ಳಲು ಬಿಡದೆ ಹೋದ ಪುರುಷವ್ಯವಸ್ಥೆಗೆ ಹೊಡೆದಂತಿದೆ. ಹೆಣ್ಣಿನ ಎದೆಯಲ್ಲಿ ಹೆಪ್ಪುಗಟ್ಟಿದ್ದ ಆಕ್ರೋಶವನ್ನು ಈ ಕ್ರಿಯೆ ವ್ಯಕ್ತಪಡಿಸುತ್ತದೆ.

ಪುರುಷವ್ಯವಸ್ಥೆ ತಲೆತಲಾಂತರದಿಂದಲೂ ಹೆಣ್ಣನ್ನು ಅಬಲೆ ಎಂದು ಪರಿಗಣಿಸಿ ಆಕೆಯನ್ನು ದೈಹಿಕವಾಗಿ, ಮಾನಸಿಕವಾಗಿ, ಲೈಂಗಿಕವಾಗಿ, ಆರ್ಥಿಕವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಶೋಷಣೆ ಮಾಡುತ್ತಾ ಬಂದಿದೆ. ಪುರುಷವ್ಯವಸ್ಥೆಯ ಶೋಷಣೆಯ ಕಬಂಧ ಬಾಹು ಎಷ್ಟು ಉದ್ಧವಾಗಿದೆ ಎಂದರೆ ಹೆಣ್ಣನ್ನು ಶೋಷಣೆ ಮಾಡಲು ಸಿಗುವ ಒಂದು ಅವಕಾಶವನ್ನೂ ಬಿಟ್ಟಿಲ್ಲ. ಸಹಿಸುವವರೆಗೆ ಸಹಿಸಿಕೊಂಡ ಹೆಣ್ಣು ಶೋಷಣೆ ಮಿತಿಮೀರಿದಾಗ ತನ್ನದೇ ಆದ ರೀತಿಯಲ್ಲಿ ಪ್ರತಿಭಟಿಸುವ ಮೂಲಕ ತಾನು ಅಬಲೆಯಲ್ಲ ಎಂದು ಸಾಬೀತುಪಡಿಸಲು ಹೆಣಗುತ್ತಲೇ ಇದ್ದಾಳೆ. ಆದರೆ ಇದಕ್ಕೆ ಕೊನೆ ಎಲ್ಲಿ ಎಂದು ಹೇಳುವುದು ನೀರಿನಲ್ಲಿ ಮೀನಿನ ಹೆಜ್ಜೆ ಹುಡುಕಿದಂತಾಗಿದೆ.

ವೈದೇಹಿಯವರ ಕಥೆಗಳಲ್ಲಿ ಅಸಮಾನತೆ

ಅಸಮಾನತೆ ಎಂಬುದು ಕೌಟುಂಬಿಕ, ಸಾಮಾಜಿಕ ಮತ್ತು ಲೈಂಗಿಕ ಶೋಷಣೆಯ ಪ್ರಮುಖ ಸಾಧನವಾಗಿದೆ. ಈ ಅಸಮಾನತೆ ಎಂಬುದು ಇಂದು ನಿನ್ನೆಯದಲ್ಲ. ಸಮಾಜ ಎಂದು ಅಸ್ತಿತ್ವಕ್ಕೆ ಬಂದಿತೋ ಅಂದಿನಿಂದಲೂ ಅಸಮಾನತೆ ಎಂಬುದು ಅಸ್ತಿತ್ವದಲ್ಲಿದೆ ಎಂದು ಹೇಳಬಹುದು. ಪ್ರಮುಖವಾಗಿ ಜಾತಿ, ಅಂತಸ್ತು, ಲಿಂಗದ ಆಧಾರದ ಮೇಲಿನ ಅಸಮಾನತೆಯನ್ನು ನಾವು ಕಾಣಬಹುದು ಹಿಂದೂ ಧರ್ಮಕ್ಕೆ ವಿಶಿಷ್ಟವಾದ ಚಾತುರ್ವರ್ಣ ಪದ್ಧತಿಯೇ ಮುಂದೆ ಜಾತಿಯ ಸ್ವರೂಪವನ್ನು ಪಡೆದು ಮೇಲು ಕೀಳು ಎಂಬ ಅಸಮಾನತೆಯನ್ನು ಹುಟ್ಟುಹಾಕಿ ಒಂದು ಸಾಮಾಜಿಕ ಪಿಡುಗಾಗಿ ಪರಿಣಮಿಸಿತು.

ಹಾಗೆಯೇ ಇನ್ನೊಂದು ರೀತಿಯ ಅಸಮಾನತೆ ಆರ್ಥಿಕ ಅಂತಸ್ತಿನ ಕಾರಣದಿಂದ ಸೃಷ್ಟಿಯಾದುದು. ಆರ್ಥಿಕ ಅಂತಸ್ತು ಮನುಷ್ಯರಲ್ಲಿ ಶ್ರೀಮಂತ ಬಡವ ಎಂಬ ಕಂದಕವನ್ನು ನಿರ್ಮಿಸಿ, ಅಸಮಾನತೆಗೆ ಕಾರಣವಾಗಿ ಮಾನವ ಸಮಾಜವನ್ನು ಎರಡು ವರ್ಗಗಳಾಗಿ ಒಡೆದುದು ದುರಂತವೇ ಸರಿ.

ಮತ್ತೊಂದು ಪ್ರಮುಖವಾದ ಅಸಮಾನತೆ ಎಂದರೆ ಲಿಂಗ ಅಸಮಾನತೆ, ಗಂಡು ಮತ್ತು ಹೆಣ್ಣು ಪ್ರಕೃತಿಯ ಅದ್ಭುತ ಸೃಷ್ಟಿ. ಮಾನವ ಕುಲದ ಮುಂದುವರಿಕೆಗೆ ಎರಡು ಲಿಂಗಗಳು ಮುಖ್ಯ. ಜೈವಿಕವಾಗಿ ಎರಡು ಲಿಂಗಗಳ ಸೃಷ್ಟಿ ಸಂತಾನ ಪ್ರಕ್ರಿಯೆಗೆ ಅನುಕೂಲವಾಗುವಂತೆ ಭಿನ್ನವಾಗಿರುವುದು ಸತ್ಯವಾದರೂ ಇದು ಅಸಮಾನತೆಗೆ ಕಾರಣವಾಗಲಾರದು. ನಿಸರ್ಗವೇ ಜೈವಿಕವಾಗಿ ಕೆಲವು ಮಿತಿಗಳನ್ನು ಏರಿದೆ. ಮಾಸಿಕ ಋತುಚಕ್ರ, ಗರ್ಭಧಾರಣೆ, ಪ್ರಸವವೇದನೆ, ಪ್ರಸವದಂತಹ ನೋವುಗಳನ್ನು ಸ್ತ್ರೀ ಸತತವಾಗಿ ಎದುರಿಸಬೇಕು. ಇದರಿಂದ ಸ್ತ್ರೀ ಪುರುಷನಿಗಿಂತ ದೈಹಿಕವಾಗಿ ದುರ್ಬಲಳು ನಿಜ. ಆದರೆ ಈ ಜೈವಿಕ ಮಿತಿಗಳು ಸ್ತ್ರೀಯನ್ನು ಪುರುಷನಿಗಿಂತ ಭಿನ್ನಳನ್ನಾಗಿ ಮಾಡುತ್ತವೆಯೇ ಹೊರತು. ಅವನಿಗಿಂತ ಕೀಳು ಎಂದು ಖಂಡಿತ ಸಾಧಿಸಲಾರವು.

ಆದರೆ ಪ್ರಾಚೀನ ಕಾಲದಿಂದಲೂ ಪುರುಷ ವ್ಯವಸ್ಥೆ ಹೆಣ್ಣಿನ ಈ ಜೈವಿಕ ಮಿತಿಗಳನ್ನೇ ಅಸ್ತ್ರವಾಗಿ ಬಳಸಿಕೊಂಡು ಆಕೆಯನ್ನು ತನಗಿಂತ ಕೀಳು ಎಂದು ಬಿಂಬಿಸುವ ಹುನ್ನಾರ ನಡೆಸಿದೆ. "ಹೆಣ್ಣಿಗಿರುವಂತೆ ಗಂಡಿಗೂ ವಿಶಿಷ್ಟ ದೈಹಿಕ ಅಂಗಗಳಿವೆಯೆಂದು. ದೈಹಿಕ ಮಿತಿಗಳಿವೆಯೆಂದು

ಪುರುಷನಿಗೆ ತೋಚುವುದೇ ಇಲ್ಲ."[1] "ಮಾನವ ಜಾತಿಯೆಂದರೆ ಪುರುಷ: ಸ್ತ್ರೀಯನ್ನು 'ಪುರುಷನಲ್ಲದವಳು' ಎಂದೇ ಪುರುಷನು ಅವಳನ್ನು ವ್ಯಾಖ್ಯಾನಿಸುತ್ತಾನೆ. ಸ್ತ್ರೀಯೆಂದರೆ ಹೀಗೆ ಸ್ವತಂತ್ರ ಅಸ್ತಿತ್ವವಿಲ್ಲದಿರುವವಳು. ಪುರುಷನು ಅನಿವಾರ್ಯ ಮೂಲಭೂತ ವಸ್ತು; ಸ್ತ್ರೀ ಅನಾವಶ್ಯಕ ಅನುಬಂಧ. ಅವನು ಸ್ವಯಂಪೂರ್ಣ, ಕರ್ತೃ; ಅವಳು ಅಪೂರ್ಣ, ಅನ್ಯಳು".[2] ಎಂದೇ ನಂಬಿಕೊಂಡು ಹಾಗೆಯೇ ಹೆಣ್ಣನ್ನು ನಂಬಿಸಿಕೊಂಡು ಬಂದ ಪುರುಷ ಇದಕ್ಕೆ ಪೂರಕವಾದ ಮಾನಸಿಕ ವೈಚಾರಿಕ ಚೌಕಟ್ಟನ್ನು ನಿರ್ಮಿಸಿ ಆ ಚೌಕಟ್ಟಿನೊಳಗೇ ಬದುಕುವಂತೆ ಮಾಡಿದ. ಇದರಿಂದ ಪುರುಷನಷ್ಟೇ ಸಮಾನ ಸಂಖ್ಯೆಯಲ್ಲಿರುವ, ಮಾನವ ಕುಲದ ಮುಂದುವರಿಕೆಗೆ ಸಮಾನ ಕಾರಣವಾಗಿರುವ ಹೆಣ್ಣು ಅಸಮಾನತೆಯ ಒಡೆತಕ್ಕೆ ಸಿಕ್ಕಿ ಕೀಳರಿಮೆಯಿಂದ ನರಳುವಂತಾಯಿತು.

ಲಿಂಗ ಅಸಮಾನತೆ ಎಂಬುದು ನಮ್ಮಲ್ಲಷ್ಟೇ ಅಲ್ಲ ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲೂ ಸಾಮಾನ್ಯವಾದ ಸಂಗತಿಯಾಗಿತ್ತು. ಈ ಅಸಮಾನತೆಯೇ ಸ್ತ್ರೀ ಪುರುಷನಿಗಿಂತ ಯಾವುದೇ ರೀತಿಯಲ್ಲೂ ಕೀಳಲ್ಲ, ಪುರುಷನ ಅಧೀನಳಲ್ಲ, ಅವನಂತೆಯೇ ಸ್ವತಂತ್ರ ವ್ಯಕ್ತಿತ್ವ ಹೊಂದಿರುವವಳು, ಅವನಿಗೆ ಸರಿಸಮಾನಳು ಎಂಬ ಸ್ತ್ರೀವಾದದ ಉಗಮಕ್ಕೆ ಕಾರಣವಾಯಿತು. ಪಾಶ್ಚಾತ್ಯ ಸಾಹಿತ್ಯ ಧಾರೆಯಲ್ಲಿ ಕಾಣಿಸಿಕೊಂಡ ಸ್ತ್ರೀವಾದ ಕ್ರಮೇಣ ನಮ್ಮ ಸಾಹಿತ್ಯ ಧಾರೆಯನ್ನು ಪ್ರವೇಶಿಸಿತು. ಅನೇಕ ಮಹಿಳಾ ಸಾಹಿತಿಗಳು ತಮ್ಮ ಸಾಹಿತ್ಯದಲ್ಲಿ ಸ್ತ್ರೀ ಸಮಾನತೆ ಮತ್ತು ಸ್ತ್ರೀ ಸ್ವಾತಂತ್ರವನ್ನು ಎತ್ತಿಹಿಡಿಯಲು ಪ್ರಯತ್ನಿಸಿದರು.

ಇತರ ಸ್ತ್ರೀವಾದಿ ಲೇಖಕಿಯರಿಗಿಂತ ವೈದೇಹಿಯವರು ಭಿನ್ನ "ಅವರ ಬದುಕನ್ನು ಹೆಣ್ಣಿನ ದೃಷ್ಟಿಕೋನದಿಂದ ಗಮನಿಸುತ್ತಾರೆ. ಆದರೆ ಅದು ಸರಳವಾದ 'ಸ್ತ್ರೀ ಪರ', 'ಪುರುಷವಿರೋಧಿ' ತೀರ್ಮಾನಗಳಲ್ಲಿ ಪರ್ಯವಸಾನಗೊಳ್ಳುವುದಿಲ್ಲ. ಲಿಂಗ ಅಸಮಾನತೆಯ ಪ್ರಶ್ನೆಗಳನ್ನು ಅವರು ತುಂಬ ಪ್ರಬುದ್ಧವಾಗಿ ನಿರ್ವಹಿಸಿದ್ದಾರೆ."[3] ಅವರು ಸಾಮಾಜಿಕವಾಗಿ, ರಾಜಕೀಯವಾಗಿ ಆರ್ಥಿಕವಾಗಿ ಅವಕಾಶಗಳ ಕುರಿತಾಗಿ ಸ್ತ್ರೀಯರಿಗೆ ಸಮಾನತೆ ಬೇಕು ಎಂದು ಪ್ರತಿಪಾದಿಸುತ್ತಾರೆಯೇ ಹೊರತು. ಹೆಣ್ಣು ಯಾವತ್ತೂ ಪುರುಷನಿಗಿಂತ ವಿಶಿಷ್ಟ. "ಹೆಣ್ಣು ಸತ್ವ ಅದರ ಚೈತನ್ಯಶೀಲತೆ, ಅಂತಃಶಕ್ತಿ, ಧಾರಣಗುಣ ಗಂಡು ಸತ್ವಕ್ಕೆ ಜನ್ಮಜನ್ಮಾಂತರಕ್ಕೂ ಬಾರದು ಬ್ರಹ್ಮಾಂಡದೊಳಗಿನ 'ಲಲಿತಾಶಕ್ತಿ'

---

[1] ಸಾಹಿತ್ಯ ವಿಮರ್ಶೆ, ಡಾ॥ ಸಿ.ಎನ್.ರಾಮಚಂದ್ರನ್ ಪು.ಸಂ.86, ಕನ್ನಡ ಸಾಹಿತ್ಯ ಅಕಾಡೆಮಿ, 2008, ಪು.ಸಂ.86.

[2] ಅದೇ

[3] ಟಿ.ಪಿ.ಅಶೋಕ ಆಯ್ಕೆಯ ವೈದೇಹಿ ವಾಚಿಕೆ, ಪ್ರಸ್ತಾವನೆ ನುಡಿಪುಸ್ತಕ, 2009, ಪ್ರಸ್ತಾವನೆ.

ಅದು."[1] ಎಂದು ಭಾವಿಸುವ ಅವರು ಪುರುಷರು ಪಡೆಯಲು ಸಾಧ್ಯವಾಗದ ಹೆಣ್ಣಿಗೆ ಮಾತ್ರ ದಕ್ಕುವ ಅನುಭವಗಳನ್ನು ಗೌರವಿಸಬೇಕು. ಹೆಣ್ಣಾಗಿ ಹುಟ್ಟಿದ್ದಕ್ಕೆ ಹೆಮ್ಮೆ ಪಡಬೇಕು ಎಂದು ಹೇಳುತ್ತಾರೆ.

ಸ್ತ್ರೀ ಪುರುಷರ ಅಸಮಾನತೆಯ ಜೊತೆಗೆ ಸ್ತ್ರೀ ಪ್ರಪಂಚದೊಳಗೇ ವರ್ಗ. ಜಾತಿಗಳ ಆಧಾರದ ಮೇಲೆ ಕಂಡುಬರುವ ಅಸಮಾನತೆಯನ್ನು ಸೂಕ್ಷ್ಮವಾಗಿ ಗಮನಿಸಿರುವ ವೈದೇಹಿಯವರು ತಮ್ಮ ಕಥೆಗಳಲ್ಲಿ ಪ್ರಸ್ತಾಪಿಸಿದ್ದಾರೆ. ಇದು ವೈದೇಹಿಯವರು ಹೆಣ್ಣಿನ ಪ್ರಪಂಚವನ್ನು ಎಷ್ಟು ಸೂಕ್ಷ್ಮವಾಗಿ ಗಮನಿಸುತ್ತಾರೆ ಎಂಬುದನ್ನು ಸೂಚಿಸುತ್ತದೆ.

ಹೆಣ್ಣು ಗಂಡಿನ ಅಸಮಾನತೆಯನ್ನು ವೈದೇಹಿಯವರು 'ಗುಲಾಬಿ ಟಾಕೀಸು ಮಾತು ಸಣ್ಣ ಅಲೆಗಳು' ಕಥೆಯಲ್ಲಿ ಬಹಳ ಅದ್ಭುತವಾಗಿ ಚಿತ್ರಿಸಿದ್ದಾರೆ. ಗಂಡು ಹೆಣ್ಣಿನ ಪ್ರಪಂಚದಲ್ಲಿ ಬಹಳ ವ್ಯತಾಸವಿದೆ. ಸ್ತ್ರೀಗೆ ಗಂಡಿನಷ್ಟು ಸ್ವಾತಂತ್ರವಿಲ್ಲ ಗಂಡ, ಮನೆ, ಮಕ್ಕಳು ಇಷ್ಟೇ ಅವಳ ಪ್ರಪಂಚ. ಪುರುಷನಿಗೆ ಪೂರಕವಾದ ಪಾತ್ರಗಳನಷ್ಟೆ ಆಕೆ ನಿರ್ವಹಿಸಬೇಕು. ಆಕೆ ಪುರುಷನಿಗೆ ಅಧೀನ. ತನ್ನ ಪರಾಧೀನ ಸ್ಥಿತಿಯನ್ನು ಆಕೆಯೇ ಒಪ್ಪಿಕೊಳ್ಳುವುದು ವಿಚಿತ್ರವಾದರೂ ಸತ್ಯ. ಏಕೆಂದರೆ ಅಕೆಯನ್ನು ಅಂತಹ ಪೂರ್ವನಿರ್ಧಾರಿತವಾದ ಚೌಕಟ್ಟಿನೊಳಗೆ ನಿಯಂತ್ರಿಸಲಾಗಿರುತ್ತದೆ. ಅದಕ್ಕೆ ಪೂರಕವಾಗೇ ಅವಳ ಲಾಲನೆ ಪಾಲನೆ, ಅವಳಿಗೆ ನೀಡುವ ಶಿಕ್ಷಣ, ಸಾಮಾಜಿಕ ಸ್ಥಿತಿಗತಿ ಎಲ್ಲವೂ ಇರುವುದರಿಂದ, ಅಪ್ರಜ್ಞಪೂರ್ವಕವಾಗಿ ಅದು ಅವಳ ವ್ಯಕ್ತಿತ್ವದ ಮೇಲೆ ಪ್ರಭಾವಬೀರುತ್ತದೆ.

ಗಂಡಸರು ಊರಿನ ಬಯಲಿಗೆ ವಾಕಿಂಗ್ ಹೋಗಿ ಅಲ್ಲಿ ಕುಳಿತು ಯುದ್ಧ ಇತ್ಯಾದಿ ವಿಷಯಗಳ ಕುರಿತು ಮಾತನಾಡುತ್ತಿದ್ದರು. ಆದರೆ "ಬಯಲಿಗೆ ಹೆಂಗಸರು ಹೋಗುವ ಕಟ್ಟಳೆ ಇರಲಿಲ್ಲ, ಬಯಲಿಗೆಂದೇನು. ಅವರು ತಾವಾಗಿ ರಸ್ತೆಗೇ ಇಳಿದದ್ದಿರಲಿಲ್ಲ, ಮನೆಯಾಯಿತು. ತಾವಾಯಿತು" ಎಂಬಂತಿರುವ ಹೆಂಗಸರು ಮನೆಕೆಲಸದಲ್ಲಿ ನಿರತರಾಗಿರುತ್ತಾರೆ. ಮುಟ್ಟು, ಬಸಿರು. ಬಾಣಂತನ ಇಷ್ಟಕಷ್ಟೆ ಅವರ ಜೀವನ ಸೀಮಿತ. ಮನೆಯಿಂದ ಹೊರಗೆ ಒಬ್ಬರೆ ಕಾಲಿಡುವುದು ಕನಸಿನ ಮಾತು. ಸರ್ಕಸ್ಸು, ನಾಟಕ ಇಂತಹ ಮನರಂಜನ ಮೂಲಗಳು ಗಂಡಸರಿಗೆ ಮಾತ್ರ. "ಸರ್ಕಸ್ಸು-ಗಿರ್ಕಸ್ಸು ಹೆಂಗಸರಿಗೆ ಹೇಳಿಸಿದ್ದೇ? ಎಂದು ಗದರಿಸಿ ಬಿಟ್ಟರೆ ಹಾಗೆ ಗದರಿಸಿದ ಗಂಡಸಿನ ದನಿಯಡಿ ಮುದುರಿ ಕುಳೀತುಕೊಳ್ಳುವವರಲ್ಲವೇ ಅವರೆಲ್ಲ?". ಟೆಂಟ್‌ಗೆ ಹೋಗಿ "ಸಿನೆಮಾಗಳನ್ನು ನೋಡಲು ಅವರು ಗಂಡಸರನ್ನೇ ಅವಲಂಬಿಸಿರಬೇಕಾಗಿತ್ತು. ಗಂಡಸರು ಎಲ್ಲಾದರೂ ಪ್ರಸನ್ನರಾದರೆ ಅವರನ್ನು ಸಿನೆಮಾಕ್ಕೆ ಒಯ್ಯುತ್ತಿದ್ದರು. ತಾವಾಗಿ ಹೋಗುವುದನ್ನು ಸ್ವತಃ ಹೆಂಗಸರೇ

[1] ಅದೇ ಪು.ಸಂ.124. ವೈದೇಹಿಯವರ ಸಂದರ್ಶನ.

ಒಪ್ಪುತ್ತಿರಲಿಲ್ಲವಾಗಿ ಗಂಡು ಬಲಪಿಲ್ಲದೆ ರಸ್ತೆಗಿಳಿಯುವುದನ್ನು ಅವರು ಕಲ್ಪಿಸಿಕೊಳ್ಳಲಾರರು ಕೂಡ" ಎಂಬುದು ಸ್ತ್ರೀಯರ ಪರಾಧೀನ ಸ್ಥಿತಿಯನ್ನು, ಅದನ್ನು ಒಪ್ಪಿಕೊಂಡಿರುವ ಅವರ ಮನಸ್ಥಿತಿಯನ್ನು ಸೂಚಿಸುತ್ತದೆ.

ಹೆಂಗಸರು ಯಾವ ಸಿನೆಮಾ ನೋಡಬೇಕು ಎಂದು ನಿರ್ಧಾರಮಾಡುವವರು ಗಂಡಸರು. ಒಂದು ಸಿನೆಮಾ ನೋಡಬೇಕು ಎಂದರೂ ಎಷ್ಟೆಲ್ಲ ಕಸರತ್ತು ನಡೆಸಬೇಕಿತ್ತು. ಮನೆಯ ಗಂಡಸರ ಹತ್ತಿರ.... "ಇಂಥವರ ಮನೆಯವರು ಬಂದಿದ್ದರಂತೆ... ಕೆಟ್ಟದು ಏನೂ ಇಲ್ಲವಂತೆ. ಮರಕಿ ಮರಕಿ ಇಟ್ಟರಂತೆ" ಎಂದೆಲ್ಲ ಹೇಳಿ ಗೋಗರೆಯಬೇಕಿತ್ತು. "ಕೊನೆಗೆ ಅಂತಹವರ ದೊಡ್ಡವರ ಮನೆಯವರೇ ಅಷ್ಟು ಆಳಬೇಕಾದರೆ ಅದರಲ್ಲಿ ಹೆಂಗಸರು ಕಾಣಬಾರದಂತಹ ದೃಶ್ಯಗಳು ಇರಲಿಕ್ಕಿಲ್ಲವೆಂದು ಲೆಕ್ಕಹಾಕಿ ಒಪ್ಪಿಗೆ ಕೊಡುವಲ್ಲಿಯೂ" ಅಸಮಾನತೆಯನ್ನು ಗುರುತಿಸಬಹುದು, ಹೆಂಗಸರು ಕಾಣಬಾರದ ದೃಶ್ಯಗಳು ಎಂಬುವು ಇವೆಯೇ? ಆ ದೃಶ್ಯಗಳನ್ನು ಗಂಡಸರು ಕಾಣಬಹುದೇ? ಗಂಡಸರು ಏನು ಬೇಕಾದರೂ ಕಾಣಬಹುದು, ಎಲ್ಲಿ ಬೇಕಾದರೂ ಹೋಗಬಹುದು ಆದರೆ ಹೆಂಗಸರ ವಿಷಯದಲ್ಲಿ ಮಾತ್ರ ಈ ಎಲ್ಲ ನಿಯಂತ್ರಣ. ಅಲ್ಲಿ ಹೋಗಬಾರದು, ಇಲ್ಲಿ ಹೋಗಬಾರದು, ಇದನ್ನು ನೋಡಬಾರದು ಎಂದು ನಿರ್ಬಂಧಿಸಿ ಹೆಣ್ಣನ್ನು ಕಟ್ಟಿ ಹಾಕುವ ಪ್ರಯತ್ನ ಅವ್ಯಾಹತವಾಗಿ ಸಾಗಿ ಬಂದಿರುವುದು.

ಆರ್ಥಿಕ ವಿಷಯದಲ್ಲಿ ಗಂಡು ಹೆಣ್ಣಿನ ನಡುವಿನ ಅಸಮಾನತೆ ಢಾಳಾಗಿಯೇ ಕಾಣುತ್ತದೆ. ಆರ್ಥಿಕವಾಗಿ ಹೆಣ್ಣು ಯಾವತ್ತೂ ಪರಾವಲಂಬಿ ಇದೇ ಗಂಡು ಹೆಣ್ಣನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಮುಖ ಕಾರಣವಾಗಿರುವುದು. ಹೆಣ್ಣು ತನ್ನ ಅಗತ್ಯಗಳ ಪೂರೈಕೆಗಾಗಿ ಆರ್ಥಿಕವಾಗಿ ಗಂಡನ್ನೇ ಅವಲಂಬಿಸಬೇಕಾಗಿದೆ. ತನ್ನ ಕೈ ಖರ್ಚಿಗೂ ಹೊರಗೆ ಎಲ್ಲಾದರೂ ಹೋಗಬೇಕೆಂದರೂ ಹಣಕ್ಕಾಗಿ ಗಂಡನ್ನೇ ಬೇಡಿಕೊಳ್ಳಬೇಕಾದ ದೈನೇಸಿ ಸ್ಥಿತಿ ಹೆಣ್ಣಿಗೆ. ಹತ್ತು ಕೇಳಿದರೆ "ದುಡ್ಡೆಂದರೆ ಹುಣಸೇ ಬೀಜವಂತ ಮಾಡಿದ್ದೀರ ಹೇಗೆ?" ಎಂದು ಗದರಿಸಿ ಐದು ಕೊಡುವ ಜರ್ಬು ಗಂಡಿಗೆ. ಆ ಗದರಿಕೆಗೆ ಹೆದರಿ ಕಣ್ಣಿನಲ್ಲಿ ನೀರು ತುಂಬಿಕೊಳ್ಳುವ ಅಸಹಾಯಕ ಸ್ಥಿತಿ ಹೆಣ್ಣಿಗೆ.

ಎಷ್ಟೇ ದೊಡ್ಡ ಮನೆಯ ಹೆಂಗಸರಾದರೂ; ಹೆಸರಿಗೆ ಮಾತ್ರ ದೊಡ್ಡ ಮನೆಯವರು ಆದರೆ ಆರ್ಥಿಕವಾಗಿ ಗಂಡನ್ನೇ ಅವಲಂಬಿಸಬೇಕಾದ, ಅವರು ಕೊಟ್ಟಷ್ಟನ್ನೇ ಮರುಮಾತನಾಡದೆ ತೆಗೆದುಕೊಳ್ಳಬೇಕಾದ ದುಸ್ಥಿತಿ. ಲಿಲ್ಲಿಯ ಕರಾಮತ್ತಿನಿಂದ ಎರಡು ಟಿಕೇಟಿಗೆ ನಾಲ್ಕು ಜನ ಸಿನೆಮ

ನೋಡುವ ಅಭ್ಯಾಸ ರೂಢಿಸಿಕೊಂಡಿದ್ದ ಊರಿನ ಎಲ್ಲರಂತೆ ಒಮ್ಮೆ ಎಂಟುನೂರು ಮುಡಿ ಅಕ್ಕಿ ಹುಟ್ಟುವಳಿ ಮಂಜುನಾಥಯ್ಯನವರ ಮನೆಯ ಹೆಂಗಸರು ಮಕ್ಕಳೊಂದಿಗೆ ಸಿನೆಮಾ ನೋಡಲು ಹೋದಾಗ ಸಾಕಷ್ಟು ಹಣ ತಂದಿರದ ಮಂಜುನಾಥಯ್ಯನವರ ಹೆಂಡತಿಗೆ ಆದ ಅವಮಾನ ಅಷ್ಟಿಷ್ಟಲ್ಲ. ತಮ್ಮ ದಯನೀಯ ಸ್ಥಿತಿ ಕಂಡು ಮಂಜುನಾಥಯ್ಯನ ಹೆಂಡತಿ "ಎಷ್ಟು ನೂರು ಮುಡಿ ಅಕ್ಕಿ ಹುಟ್ಟುವಳಿ ಇದ್ದರೇನಾಯಿತು? ಮನೆಯಲ್ಲಿ ತಾವು ಬಗ್ಗಿದ ಬೆನ್ನು ಎತ್ತದೆ ಗೇಯ್ದರೇನಾಯಿತು? ಹಾಗಾದರೆ ಒಂದು ದಮಡಿಯಾದರೂ ಹೆಚ್ಚಿಗೆ ತನ್ನಬಳಿ? ಇರುವಷ್ಟನ್ನಾದರೂ ತಾನು ಬೇಡು ಪರದೇಶಿಯಂತೆ ಕೇಳಿ ತೆಗೆದುಕೊಳ್ಳಬೇಕಾಯಿತಲ್ಲವೆ?" ಎಂದು ಸಂಕಟಪಟ್ಟರು. ಎಷ್ಟೇ ಶ್ರೀಮಂತಿಕೆ ಇದ್ದರೂ ಅದೆಲ್ಲ ಗಂಡಿಗೆ ಅವರು ಕೊಟ್ಟಷ್ಟು ಮಾತ್ರ ಹೆಣ್ಣಿನ ಪಾಲಿಗೆ ದೊಡ್ಡ ಮನೆಯ ಹೆಂಗಸರಾಗಲಿ, ಸಾಮಾನ್ಯ ಮನೆಯ ಹೆಂಗಸರಾಗಲಿ, ಬಡವರ ಮನೆಯ ಹೆಂಗಸರಾಗಲಿ; ಹೆಂಗಸರು ಎಂದ ಮೇಲೆ ಒಂದೇ, ಗಂಡಿನ ಅಧೀನರು.

ಹೆಣ್ಣಿಗೆ ಗಂಡಿಗಿರುವಂತೆ ತನ್ನದೇ ಆದ ಐಡೆಂಟಿಟಿ ಇಲ್ಲ. ಆಕೆಯನ್ನು ಗಂಡಿನ ಹೆಸರಿನಿಂದಲೇ ಗುರುತಿಸಲಾಗುತ್ತದೆ. ಅಷ್ಟರಮಟ್ಟಿಗೆ ಪುರುಷತ್ವ ಎದ್ದು ಕಾಣುತ್ತದೆ. ಸಿನೆಮ ಟಿಕೆಟಿಗೆ ಹಣ ಸಾಲದೆ ಮರ್ಯಾದೆ ಹೋಯಿತೆಂದು ಕೊರಗುತ್ತಿದ್ದ ಮಂಜುನಾಥಯ್ಯನವರ ಹೆಂಡತಿಗೆ ಅವರ ಮೂವರು ವಾರಗಿತ್ತಿಯರಲ್ಲೊಬ್ಬಳು "ಸುಮ್ಮನಿರಿ ಅಕ್ಕ, ಊರವರು ಏನು ಹೇಳುತ್ತಾರೆ? 'ಮಂಜುನಾಥಯ್ಯನ ಮನೆಯವರು' ಎನ್ನುತ್ತಾರೆ. ನಮ್ಮ ಹೆಸರು ಹೇಳುತ್ತಾರೆಯೇ? ಅಂದ ಮೇಲೆ ನಮ್ಮ ಮರ್ಯಾದೆ ಎಲ್ಲಿ ಹೋಯಿತು? ಎಂದು ಕೇಳಿದಳು –ಒಂದು ನಮೂನೆ, ನಾವು ಹೇಗೂ ಯಾವ ಲೆಕ್ಕಕ್ಕೂ ಇಲ್ಲದವರಲ್ಲವೆ ಎಂಬಂಥ ಕಹಿ ಬೆರೆಸಿ." ಆ ಮಾತಿನಲ್ಲಿ ತಮ್ಮ ಅಸ್ತಿತ್ವಕ್ಕೆ ಯಾವ ಬೆಲೆಯೂ ಇಲ್ಲದ ನೋವಿದೆ. ತಮ್ಮ ಅತಂತ್ರ ಸ್ಥಿತಿಯ ಅರಿವಿದ್ದರೂ ಏನೂ ಮಾಡಲಾಗದ ಅಸಹಾಯಕತೆ ಕಾಡುತ್ತಿದೆ.

ಹೆಣ್ಣು ಗಂಡಿನ ನಡುವಿನ ಅಸಮಾನತೆಯನ್ನು ಗುರುತಿಸುವ ವೈದೇಹಿಯವರು ಹೆಂಗಸರಲ್ಲಿ ಮೂಡಿರುವ ತಮ್ಮ ಅಸ್ಮಿತೆಯ ಅರಿವನ್ನು ಗಮನಿಸಿದ್ದಾರೆ. ಇಂದು ಹೆಂಗಸರಿಗೆ ಮನೆಯಿಂದ ಹೊರಹೋಗಲು ಮೊದಲಿನಷ್ಟು ಭಯವಿಲ್ಲ ಹಾಗೂ ಮೊದಲಿನಷ್ಟು ಅವರ ಕೈ ಖಾಲಿ ಇಲ್ಲ. "ಸಿನೆಮಾಕ್ಕೆ ಹೋಗುತ್ತೇವೆ ಎಂದು ದೃಢವಾಗಿ ಹೇಳಿ ಹೋಗುವಷ್ಟು ಧರ್ಯ ಕಲಿತಿದ್ದಾರೆ." ಗಂಡಸರು ಗದರಿದರೆ "ಅದೇನು ಒಂದು ಸಿನೆಮಾ ನೋಡಲು ನಾಲಾಯಕವೇ? ಒಳ್ಳೆಕತೆ! ನೀವು ಹೇಳಿದ ಹಾಗೆ ಕೇಳುತ್ತಿದ್ದರೆ ಹೇಗೂ ಕುಣೀಸೀರಿ" ಎಂದು ದಿಟ್ಟವಾಗಿ ಹೇಳುವುದನ್ನು "ಮೂರು ಜನ ಹೊರಟರೆ ನಾಲ್ಕು ಜನ ಹೋಗುತ್ತೇವೆಂದು ಜಾಸ್ತಿ ವಸೂಲಿ ಮಾಡುವುದನ್ನು ಮತ್ತು

ಹೆಚ್ಚಿಗಿರುವುದನ್ನು ಕೂಡಿಟ್ಟು ಮತ್ತೆ ಯಾವತ್ತಾದರೂ ಉಪಯೋಗಿಸುವುದನ್ನು ಕಲಿತಿದ್ದಾರೆ." ಆಧುನಿಕತೆಯ ಗಾಳಿ ಹೆಣ್ಣಿನ ಸ್ಥಿತಿಯಲ್ಲಿ ತುಸು ಸುಧಾರಣೆ ತಂದಿದ್ದರೂ ಗಂಡಿನ ನಿಯಂತ್ರಣದಿಂದ ಸಂಪೂರ್ಣ ಹೊರಬರಲು ಸಾಧ್ಯವಾಗಿಲ್ಲ. ಹಲವು ಶತಮಾನಗಳಿಂದ ಒಪ್ಪಿಕೊಂಡು ಬಂದ ತನ್ನ ಸ್ಥಿತಿಯಲ್ಲಿ ಒಂದೇ ಬಾರಿ ಬದಲಾವಣೆ ತಂದುಕೊಳ್ಳಲು ಆಕೆಯಿಂದ ಸಾಧ್ಯವಾಗುತ್ತಿಲ್ಲ. ಒಂದು ರೀತಿ ಹೇಳಬೇಕೆಂದರೆ ಆಕೆ ಸಂಪೂರ್ಣ ಸ್ವಾತಂತ್ರ್ಯವನ್ನು ಬಯಸುವುದಿಲ್ಲ. ಒಂದು ವ್ಯಕ್ತಿಯಾಗಿ ಬೇಕಾದ ಕನಿಷ್ಠ ಸ್ವಾತಂತ್ರ್ಯವನ್ನು ಬಯಸುತ್ತಾಳೆ. ಪುರುಷ ಅಷ್ಟು ಸ್ವಾತಂತ್ರ್ಯವನ್ನೂ ನೀಡಲು ಹಿಂಜರಿಯುವುದನ್ನು ನಾವು ಕಾಣುತ್ತೇವೆ.

ತನಗೆ ಸಿಕ್ಕಿದ ಸ್ವಾತಂತ್ರ್ಯ, ಅಧಿಕಾರದಿಂದ ತಾನು ಶ್ರೇಷ್ಠ ಎಂದು ಭಾವಿಸುವ ಗಂಡು ಪ್ರಪಂಚದ ಎಲ್ಲಾ ವಸ್ತುಗಳೂ, ಹೆಣ್ಣು ಕೂಡ ತನ್ನ ಭೋಗಕ್ಕೆ ಇರುವುದು ಎಂಬ ಭ್ರಮೆಯಲ್ಲಿ ಮುಳುಗಿ ಸ್ತ್ರೀ ಲಂಪಟನಾಗಿರುವುದನ್ನು ಕಾಣಬಹುದು. ಇದೇ ಬಹುಪತ್ನಿತ್ವಕ್ಕೂ ಕಾರಣವಾಗಿದೆ. ತಾನು ಗಂಡು ಏನು ಮಾಡಿದರೂ ನಡೆಯುತ್ತದೆ ಎಂಬ ದರ್ಪ ಗಂಡಿಗೆ. ಆ ದರ್ಪದಿಂದಲೇ ಆತ ಹೆಣ್ಣಿಗೆ ಮೋಸಮಾಡುವುದನ್ನು ಕಾಣುತ್ತೇವೆ. 'ಭೂತ' ಕಥೆಯ ಪಾರ್ವತಿಗೆ ಆಕೆಯ ಗಂಡ ಈಗಾಗಲೇ ಮದುವೆಯಾಗಿರುವ ವಿಷಯವನ್ನು ಮುಚ್ಚಿಟ್ಟು ಮದುವೆಯಾಗಿ ಎರಡು ಮಕ್ಕಳಾದ ನಂತರ ಅವಳನ್ನೂ ತವರಿಗೆ ಕಳಿಸಿದವನು ಮತ್ತೆ ತಿರುಗಿ ನೋಡುವುದೇ ಇಲ್ಲ. 'ಒಂದು ಅಪರಾಧ ತನಿಖೆ' ಕಥೆಯ ಬಾಬಿಯದು ಅಷ್ಟೇ. ಆಕೆಯ ಗಂಡನೂ ಈ ಮೊದಲೇ ಮದುವೆಯಾಗಿದ್ದರೂ ಬಾಬಿಯನ್ನು ಮದುವೆಯಾಗಿ ಮೋಸ ಮಾಡುತ್ತಾನೆ. ಮದುವೆಯಾದ ನಂತರ ಬಾಬಿಗೆ ಈ ವಿಷಯ ತಿಳಿದರೂ ಏನೂ ಮಾಡಲಾಗದೆ ಹೊಂದಿಕೊಳ್ಳಬೇಕಾದ ಅನಿವಾರ್ಯತೆ. ಗಂಡು ಎಷ್ಟು ಜನರನ್ನೂ ಬೇಕಾದರೂ ಮದುವೆಯಾಗಬಹುದು. ಅದು ಅಂತಹ ಅಪರಾಧವಲ್ಲ. ಆದರೆ ಹೆಣ್ಣಿನ ವಿಷಯದಲ್ಲಿ ಹಾಗಲ್ಲ ಒಮ್ಮೆ ಮದುವೆಯಾದರೆ ಮುಗಿಯಿತು ಆತ ಎಂತಹವನ್ನಾದರೂ, ಎಷ್ಟೇ ಮದುವೆಯಾಗಿದ್ದರೂ ಸಹಿಸಿಕೊಂಡು ಹೊಂದಿಕೊಳ್ಳಬೇಕು, ಇಲ್ಲ ಜೀವನಪರ್ಯಂತ ಏಕಾಂಗಿಯಾಗಿ ಬದುಕಬೇಕು. ಎಷ್ಟೋ ಸಾರಿ ಅಂತಹ ಸಂದರ್ಭದಲ್ಲಿ 'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು' ಎಂದು ತವರಿನವರೂ ಸಹಕಾರ ನೀಡುವುದಿಲ್ಲ. ಇನ್ನೂ ಕೆಲವೊಮ್ಮೆ ಬಡತನದ ಕಾರಣ ಮೋಸಗಾರನಾದರೂ, ಲಂಪಟನಾದರೂ ಅವನ ಜೊತೆಯಲ್ಲೇ ಬದುಕಬೇಕಾದ ಅನಿವಾರ್ಯತೆ ಆಕೆಯನ್ನು ಕಟ್ಟಿಹಾಕುತ್ತದೆ. ಇಂತಹ ಗಂಡಿನ ಮೋಸಕ್ಕೆ ಒಳಗಾಗಿ ಎಷ್ಟೋ ಹೆಣ್ಣುಮಕ್ಕಳು ತಮ್ಮ ಆಸ್ತೆ, ಕನಸುಗಳನ್ನು ಕೊಂದುಕೊಂಡು ಜೀವಂತ ಶವದಂತೆ ಬದುಕನ್ನು ಸವೆಸಬೇಕಾಗಿದೆ.

ಮದುವೆಯಾಗಿ ಸಂಸಾರಸ್ಥರಾಗಿದ್ದರೂ ಕೆಲವು ಗಂಡಸರ ಕಾಮುಕ ದೃಷ್ಟಿ ಬೇರೆ ಹೆಣ್ಣುಗಳನ್ನು ಅರಸುವುದು. 'ಅಕ್ಕು'ಕಥೆಯ ಅಕ್ಕುವಿನ ಗಂಡ ಸಂಕಪ್ಪ ತನ್ನ ಕಾಮ ತೃಷೆಗಾಗಿ ಬೀದಿಹೆಣ್ಣುಗಳ ಹಿಂದೆ ಹೋಗುವುದು, 'ಒಂದು ಅಪರಾಧ ತನಿಖೆ' ಕಥೆಯ ಬಾಜಿಯ ಗಂಡ ಎರಡು ಮದುವೆಯಾಗಿದ್ದರೂ ಬೇರೆ ಹೆಣ್ಣುಗಳ ಸಹವಾಸ ಮಾಡುವುದು. 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಕಥೆಯ ಪರಮೇಶಿ ಹೆಂಡತಿ ಇದ್ದರೂ ಮನೆ ಕೆಲಸದವಳನ್ನು ಹಿಡಿದುಕೊಳ್ಳಲು ಹೋಗುವುದು. 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯ ಗುಲಾಬಿ ಟಾಕೀಸಿನ ಮ್ಯಾನೇಜರ್ ಕೊರಾತಿಯ ಜೊತೆ ನಡೆದುಕೊಳ್ಳುವ ರೀತಿ ಗಂಡಿನ ಕಾಮುಕ ಮುಖವನ್ನು ಅನಾವರಣಗೊಳಿಸುತ್ತವೆ. ಹೆಣ್ಣನ್ನು ಭೋಗದ ವಸ್ತುವಿನಂತೆ ಅನುಭೋಗಿಸಲು ಯತ್ನಿಸುವ ಗಂಡಿನ ಕ್ಷುಲ್ಲಕತನವನ್ನು ತೋರಿಸುತ್ತವೆ.

ಕಾಮದ ವಿಷಯದಲ್ಲಿ ಗಂಡಿಗೆ ಮಾತ್ರ ಈ ಬಗೆಯ ಮುಕ್ತತೆ ಇದೆ. ಗಂಡಿನ ಅಂತಹ ವರ್ತನೆಯನ್ನು ರಸಿಕತನ ಎಂದು ಸಮರ್ಥಿಸಿಕೊಳ್ಳಲಾಗುತ್ತದೆ. ಆದರೆ ಹೆಣ್ಣಿಗೆ ಮಾತ್ರ ಈ ಮುಕ್ತತೆ ಇಲ್ಲ. ತಾನು ಬೇರೆ ಹೆಣ್ಣುಗಳ ಹಿಂದೆ ಹೋದರು ಪರವಾಗಿಲ್ಲ. ಹೆಣ್ಣಿಗೆ ಮಾತ್ರ ನಿಯಂತ್ರಣ. 'ಅಕ್ಕು' ಕತೆಯ ವಾಸು ಚಿಕ್ಕಪ್ಪಯ್ಯ ಮಾನಸಿಕ ಅಸ್ವಸ್ಥ ಅಕ್ಕು ಅಡ್ಡದ್ ಮನೆ ತಿಮ್ಮಪ್ಪಯ್ಯನಿಂದ ಬಸಿರಾಗಿದ್ದೀನಿ ಎಂದಾಗ ಆಕೆ ಮಾನಸಿಕ ಅಸ್ವಸ್ಥೆ ಏನೋ ಹೇಳುತ್ತಿದ್ದಾಳೆ ಎಂದು ಸುಮ್ಮನಿರದೆ ಅಕ್ಕುವಿಗೆ ಚೆನ್ನಾಗಿ ಹೊಡೆಯುತ್ತಾನೆ. ನೋವಿನಿಂದ ನರಳುತ್ತಿದ್ದ ಅಕ್ಕು ಕೋಪದಿಂದ "ಆ ತಮ್ಮಣ್ಣಯ್ಯನ್ ಹೆಂಡ್ತಿ ಕಾಯ್ತ್‌ಕಾಣ್ ಓಡು ಓಡ್ ಬೇಗ ಮರ್ಯಾದೆ ಸತ್ತವ್ನೇ, ಈಗ ಹೊಡೀ ಬಾ... ಕಾಂಬ" ಎಂದು ಹೇಳಿದ ಮಾತು ಮಾನಸಿಕ ಅಸ್ವಸ್ಥೆ ಏನೋ ಬಡಬಡಿಸಿದಂತೆ ಎನಿಸಿದರೂ ಆ ಮಾತು ಗಂಡು ಹೆಣ್ಣಿನ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. ವಾಸು ಚಿಕ್ಕಪ್ಪಯ್ಯ ತಮ್ಮಣ್ಣಯ್ಯನ ಹೆಂಡತಿ ಜೊತೆ ಸಂಬಂಧ ಹೊಂದಿದ್ದುದು ತಪ್ಪಲ್ಲ. ಆದರೆ ಮಾನಸಿಕ ಅಸ್ವಸ್ಥ ಅಕ್ಕು ತಾನು ಬಸುರಿ ಎಂದದ್ದು ತಪ್ಪು ಅದರಿಂದ ಮರ್ಯಾದೆಗೆ ಕುಂದು ಬಂದುಬಿಡುತ್ತದೆ. ಆಕೆಗೆ ದನಕ್ಕೆ ಬಡಿದಂತೆ ಬಡಿದು ವಾಸು ಚಿಕ್ಕಪ್ಪಯ್ಯ ತನ್ನ ಪೌರುಷ ತೋರಿಸುವ ಮೂಲಕ ತನ್ನ ತಪ್ಪನ್ನು ಮುಚ್ಚಿಕೊಳ್ಳಲು ಪ್ರಯತಿಸುತ್ತಾನೆ.

ಗಂಡು ತನ್ನ ಬಯಕೆಗಳ ಈಡೇರಿಕೆಗೆ ಸ್ವೇಚ್ಛಾಚಾರಿಯಾದರೂ ಅದು ದೊಡ್ಡ ವಿಷಯವಲ್ಲ. ಆದರೆ ಹೆಣ್ಣು ಮಾತ್ರ ತನ್ನ ಬಯಕೆಗಳನ್ನು ತನ್ನ ಅಂತರಂಗದಲ್ಲೇ ಬಚ್ಚಿಟ್ಟುಕೊಂಡು ನರಳಬೇಕು. ಆಕೆಯ ಸುತ್ತ ಮಾತ್ರ ಮರ್ಯಾದೆಯ ಬೇಲಿ ಹಾಕಲಾಗುತ್ತದೆ. ಅವಳು ಆ ಬೇಲಿ ದಾಟಿ ಹೊರಬರದಂತೆ ನಿರ್ಬಂಧಿಸಲಾಗುತ್ತದೆ. 'ಸೌಗಂಧಿಯ ಸ್ವಗತಗಳು' ಕಥೆಯ ಸೌಗಂಧಿ ಅವಿವಾಹಿತ ಹೆಣ್ಣು. ಆದರೂ ಅವಳಲ್ಲು ಮನುಷ್ಯ ಸಹಜವಾದ ಕಾಮನೆಗಳಿರುವುದು ಸಹಜ. ಆದರೆ ಹೆಣ್ಣೆಂಬ

ಕಾರಣಕ್ಕೆ ಆಕೆ ತನ್ನ ಕಾಮನೆಗಳನ್ನು ತನ್ನ ಅಂತರಗಂಗದಲ್ಲೇ ಮುಚ್ಚಿಟ್ಟುಕೊಳ್ಳಬೇಕೇ ಹೊರತು ಮರ್ಯಾದೆಯ ಆವರಣವನ್ನು ಬಿಟ್ಟು ಹೊರಬರುವ ಹಾಗಿಲ್ಲ. ಒಂದು ವೇಳೆ ಮರ್ಯಾದೆಯ ಆವರಣವನ್ನು ಕಳಚಿ ಹೊರಬಂದರೆ ಸಮಾಜ ಆಕೆಯನ್ನು ನೋಡುವ ದೃಷ್ಟಿಯೇ ಬೇರೆ ಆಗುತ್ತದೆ. ಆಕೆಯನ್ನು ಮರ್ಯಾದೆಗೆಟ್ಟವಳು ಎಂಬಂತೆ ನಡೆಸಿಕೊಳ್ಳುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ಅಂತಹ ಮನಸ್ಥಿತಿ ನಮ್ಮ ಹೆಣ್ಣು ಮಕ್ಕಳಲ್ಲಿ ಇಲ್ಲ. ಏಕೆಂದರೆ ಅವರನ್ನು ಬೆಳೆಸುವಾಗಲೇ ನಿರ್ಬಂಧಗಳ ಸಹಿತ ಬೆಳೆಸಲಾಗುತ್ತದೆ. ಆ ನಿರ್ಬಂಧಗಳನ್ನು ಮೀರಿ ಹೋಗುವ ಧೈರ್ಯವನ್ನು ಆಕೆ ತೋರಲಾರಳು. "ಮರ್ಯಾದಸ್ತ ಮನೆಯವಳು ತಾನು ಮರ್ಯಾದೆ ಬಿಡುವ ತಾಕತ್ತಿಲ್ಲದವಳು" ಎಂಬ ಸೌಗಂಧಿಯ ಮಾತು ಇದನ್ನು ಪುಷ್ಟೀಕರಿಸುತ್ತದೆ. ಲೈಂಗಿಕ ವಿಷಯದಲ್ಲಿ ಹೆಣ್ಣಿಗಿರುವಷ್ಟು ನಿರ್ಬಂಧ ಗಂಡಿಗಿರುವುದಿಲ್ಲ ಎಷ್ಟು ಜನ ಗಂಡಸರು ಮರ್ಯಾದೆಗಂಜಿ ತಮ್ಮ ಕಾಮನೆಗಳನ್ನು ಬಚ್ಚಿಟ್ಟುಕೊಳ್ಳುತ್ತಾರೆ. ಹೆಣ್ಣು ಮಾತ್ರ ಈ ವಿಷಯದಲ್ಲಿ ನಿಷ್ಠಳಾಗಿರಬೇಕು. ಆದರೆ ಗಂಡು ನಿಷ್ಠನಾಗಿಲ್ಲದಿದ್ದರೂ ಆತನನ್ನು ಹೆಣ್ಣು ಒಪ್ಪಿಕೊಳ್ಳಬೇಕು. ಅದಕ್ಕಾಗಿಯೇ ಹೆಣ್ಣನ್ನು ಸಹನಶೀಲೆ, ಕ್ಷಮಯಾಧರಿತ್ರಿ ಎಂದೆಲ್ಲಾ ಹೊಗಳಿ ಅಟ್ಟಕ್ಕೇರಿಸಿರುವುದು. ಈ ಗುಣಗಳೆಲ್ಲ ಹೆಣ್ಣಿಗೆ ಮಾತ್ರ. ಗಂಡಿಗೆ ಈ ಗುಣಗಳು ಇರಬೇಕೆಂಬ ನಿಯಮವಿಲ್ಲ.

ಗಂಡು ಹೆಣ್ಣು ಸಂಸಾರ ರಥದ ಎರಡು ಚಕ್ರಗಳಿದ್ದಂತೆ ಇಬ್ಬರ ಮೇಲೂ ಸಮಾನ ಜವಾಬ್ದಾರಿ ಇರುತ್ತದೆ. ಆದರೆ ಸಂಸಾರಿಕ ಜವಾಬ್ದಾರಿಯ ವಿಷಯದಲ್ಲಿ ಹೆಣ್ಣಿಗಿರುವಷ್ಟು ಬದ್ಧತೆ ಗಂಡಿಗಿರುವುದಿಲ್ಲ. ಹೆಣ್ಣು ಸಂಸಾರಕ್ಕೆ ನಿಷ್ಠಳಾಗಿರುವಷ್ಟು ಗಂಡು ನಿಷ್ಠನಾಗಿರುವುದಿಲ್ಲ. ಆತ ತನ್ನ ವೈಯಕ್ತಿಕ ಆಸ್ತಿ ಆಕಾಂಕ್ಷೆಗಳಿಗೆ ಬೆಲೆಕೊಡುತ್ತಾನೆಯೇ ವಿನಃ ಸಂಸಾರಕ್ಕಲ್ಲ. 'ಭೂತ' ಕಥೆಯ ಪಾರ್ವತಿಯ ಗಂಡ ಅವಳಿಗೆ ಮೋಸ ಮಾಡಿ ಎರಡು ಹೆಣ್ಣುಮಕ್ಕಳ ಜವಾಬ್ದಾರಿಯನ್ನು ಹೊರಿಸಿ ಎಲ್ಲೋ ಹೊರಟು ಹೋಗುತ್ತಾನೆ. ಹಾಗೆಯೇ 'ಹಕ್ಕಿಲ್ಲದವರು' ಕಥೆಯ ಸಿರಿಯ ಗಂಡ ಹೊಟೆಲನ್ನು ದಿವಾಳಿಯೆಬ್ಬಿಸಿ ಎಲ್ಲವನ್ನು ಕಳೆದು ಎರಡು ಮಕ್ಕಳು ಮತ್ತು ಸಿರಿಯನ್ನು ಬಿಟ್ಟು ಎಲ್ಲೋ ಓಡಿ ಹೋಗುತ್ತಾನೆ. 'ಅಲ್ಲಲ್ಲಿನ ಲೋಕದವರು' ಕಥೆಯ ಮಂಜಿಯದು ಇದೇ ಕಥೆ. ಗಂಡಿನ ಮೋಸಕ್ಕೆ ಒಳಗಾದ ಮಂಜಿಯ ಮೇಲೆ ಮಗಳನ್ನು ಸಾಕುವ ಜವಾಬ್ದಾರಿ ಬೀಳುತ್ತದೆ. ಈ ಎಲ್ಲ ಸಂದರ್ಭಗಳಲ್ಲೂ ಗಂಡು ತನ್ನ ಸ್ವಾರ್ಥಕ್ಕಾಗಿ ಜವಾಬ್ದಾರಿಯಿಂದ ಪಲಾಯನ ಮಾಡಿದರೂ ಹೆಣ್ಣು ಗಂಡಿನಂತೆ ಆ ಜವಾಬ್ದಾರಿಗೆ ತಲೆ ಕೊಡುವುದನ್ನು ಕಾಣುತ್ತೇವೆ. ಹೆಣ್ಣು ಗಂಡಿನಂತೆ ಪಲಾಯನವಾದಿ ಅಲ್ಲ "ಗಂಡ್ಸ್ರನ್ ನನ್ಸೆದ್ರ್ ನಿವಾಳ್ಸಿ" ಎನ್ನುವ ಮಂಜಿಯ ಮಾತು ಹೆಣ್ಣು ಗಂಡಿಗಿಂತ ಯಾವುದರಲ್ಲೂ ಕಡಿಮೆ ಇಲ್ಲ ಎಂದು ತೋರಿಸುತ್ತದೆ.

ಗಂಡಿಗಿಂತ ಹೆಣ್ಣಿಗೆ ಸ್ವಾಭಿಮಾನ ಹೆಚ್ಚು, ಜೊತೆಗೆ ಆಸೆಯು ಹೆಚ್ಚು. ನಾಲ್ಕು ಜನರಿಗೆ ಸರಿಸಮಾನವಾಗಿ ಇರಬೇಕು. ಹೊಟ್ಟೆಬಟ್ಟೆಗೆ ಸಾಕಾಗುವಷ್ಟು ನೇರವಾಗಿದ್ದು, ನೆಮ್ಮದಿಯ ಬದುಕು ನಮ್ಮದಾಗಬೇಕು ಎಂದು ಬಯಸುತ್ತಾರೆ. ಹೆಣ್ಣು ತನ್ನ ಬಗ್ಗೆ ಅಷ್ಟೇ ಯೋಚಿಸುವುದಿಲ್ಲ. ತನ್ನ ಗಂಡ, ಮಕ್ಕಳ ಬಗ್ಗೆಯೂ ಯೋಚಿಸುತ್ತಾಳೆ. ತನ್ನ ಮಕ್ಕಳಿಗೆ ಚಿನ್ನ, ಬೆಳ್ಳಿ ಮಾಡಿಸಬೇಕು. ಅವರನ್ನು ಒಳ್ಳೆ ಮನೆಗೆ ಮದುವೆ ಮಾಡಬೆಕು ಎಂದೆಲ್ಲ ಯೋಚಿಸುತ್ತಾರೆ. ಅದಕ್ಕಾಗಿ ತಾನು ದುಡಿಯುವುದರ ಜೊತೆಗೆ ತನ್ನ ಗಂಡನಿಗೆ ಕಾಣದಂತೆ ಹೊಟ್ಟೆಬಟ್ಟೆ ಕಟ್ಟಿ ಉಳಿತಾಯ ಮಾಡುತ್ತಾಳೆ. ಆದರೆ ಗಂಡಿಗೆ ಈ ಯಾವ ಯೋಚನೆಯೂ ಇಲ್ಲ. ಹೆಣ್ಣು ಸಂಸಾರಕ್ಕಾಗಿ ಬದುಕಿದರೆ ಗಂಡು ತನಗಾಗಿ ಬದುಕುತ್ತಾನೆ.

ಗಂಡು ಹೆಣ್ಣಿಗಿಂತ ದೈಹಿಕವಾಗಿ ಪ್ರಬಲನಾಗಿರುವುದು ತಿಳಿದಿರುವ ಸಂಗತಿ. ಆತ ಈ ಶಕ್ತಿಯನ್ನು ಹೆಣ್ಣನ್ನು ದಮನಮಾಡುವುದಕ್ಕೆ ಬಳಸಿಕೊಳ್ಳುತ್ತಾನೆ. ಹೆಣ್ಣನ್ನು ತನ್ನ ಸ್ವತ್ತು ತಾನು ಹೇಳಿದಂತೆ ಕೇಳಬೇಕು ಎಂದು ಬಯಸುವ ಆತ ಆಕೆಯ ಮೇಲೆ ತನ್ನ ಅಧಿಕಾರ ಸ್ಥಾಪಿಸಬಯಸುತ್ತಾನೆ. 'ಅಮ್ಮಚ್ಚಿಯೆಂಬ ನೆನಪು' ಕಥೆಯಲ್ಲಿ ವೆಂಕಪ್ಪಯ್ಯ ಅಮ್ಮಚ್ಚಿಗೆ ಇಷ್ಟವಿಲ್ಲದಿದ್ದರೂ ಆಕೆಯ ಮೇಲೆ ಅತ್ಯಾಚಾರವೆಸಗಿ ಮದುವೆಯಾಗುತ್ತಾನೆ. 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಕತೆಯ ಪುಟ್ಟಮ್ಮತ್ತೆಯ ತಂದೆ ಆಗ ತಾನೆ ಹಾಡಿಯಿಂದ ಒಣಚಪ್ಪು ಹೆಕ್ಕಿಕೊಂಡು ಬಂದ ಹೆಂಡತಿಯ ಮೇಲೆ ಸ್ನಾನಕ್ಕೆ ನೀರು ಕಾದಿಲ್ಲವೆಂದು ಜಗಳ ತೆಗೆದಾಗ ಅವಳ ಅಲಕ್ಷ್ಯದಿಂದೆಂಬಂತೆ ಮೌನವಾಗಿ ಒಳಹೋದದ್ದು ಆತನ ಪುರುಷತ್ವಕ್ಕೆ ಪೆಟ್ಟಾಗುವಂತೆ ಮಾಡಿತು. ಆತ ಕೋಪದಿಂದ 'ಚೊಟುದ್ದದ್ ಹೆಣ್ಣಿಗೆ ಈ ಪಾಟಿ ಸೊಕ್ಕೆ? ಇದು ಉಂಡದ್ದು ಹೆಚ್ಚಾದಲ್ಲವೇ.' ಎಂದಾಗ ಆಕೆ ತಡೆಯಲಾರದೆ 'ನಾ ರಟ್ಟೆ ಜಪ್ಪಿಯೆ ನಾ ಉಂಡೆ ನೀವೊಂದು ವಡೆನಾರೂ ನನ್ ಕೈ ಮೇಲ್ ಹಾಕಿದಂತೆಳಿ ಇತ್ತಾ?' ಎಂದು ತಿರುಗಿಸಿ ಉತ್ತರ ಕೊಟ್ಟಾಗ ಸಿಡಿದೆದ್ದವನು ಆಕೆಯನ್ನು ಅನಾಮತ್ತು ಎತ್ತಿಕೊಂಡು ಹೋಗಿ ಬಾವಿಗೆ ಹಾಕಿದ. ಇದು ಹೆಣ್ಣಿನ ಜೀವಕ್ಕೆ ಗಂಡಿನ ದೃಷ್ಟಿಯಲ್ಲಿ ಎಷ್ಟು ಬೆಲೆ ಇದೆ ಎಂಬುದನ್ನು ಸೂಚಿಸುವುದಲ್ಲದೆ ಗಂಡಿನ ಕ್ರೂರತೆಯ ಪರಮಾವದಿಗೆ ಹಿಡಿದ ಕನ್ನಡಿಯಾಗಿದೆ. ಅಜ್ಜಿ ಹೇಳುವ 'ಥತ್, ಪುರುಷ ಮೃಗ' ಎಂಬ ಮಾತು ಹೆಣ್ಣಿನ ಜೊತೆ ಮೃಗದಂತೆ ವರ್ತಿಸುವ ಗಂಡಿನ ವ್ಯಕ್ತಿತ್ವಕ್ಕೆ ಸಾಕ್ಷಿಯಾಗಿದೆ. ಹೆಂಡತಿಯನ್ನು ಸಾಕುವ ಜವಾಬ್ದಾರಿ ಹೊರದಿದ್ದರೂ ಆಕೆ ತನಗೆ ತಿರುಗಿಸಿ ಮಾತನಾಡಿದಳು ಎಂಬ ಸಣ್ಣ ಕಾರಣಕ್ಕೆ ಕೊಂದೇ ಬಿಡುವುದು ಮೃಗತ್ವವಲ್ಲದೆ ಮತ್ತೇನಾಗಿರಲು ಸಾಧ್ಯ.

ಸಣ್ಣ ಸಣ್ಣ ವಿಷಯಗಳಲ್ಲೂ ಗಂಡು ಹೆಣ್ಣಿನ ನಡುವೆ ಅಸಮಾನತೆ ಎದ್ದುಕಾಣುವುದನ್ನು ಗುರುತಿಸಬಹುದು. 'ವಾಣಿಮಾಯಿ' ಕಥೆಯ ವಾಣಿಮಾಯಿ ಹೆಣ್ಣೆಂಬ ಕಾರಣಕ್ಕೆ ಮೆಟ್ಟನ್ನು ಧರಿಸುವ ಹಕ್ಕು ಇಲ್ಲ. ಆದರೆ ಗಂಡಿಗೆ ಈ ಹಕ್ಕು ಇರುವುದು ಅವರಿಬ್ಬರ ನಡುವಿನ ಅಸಮಾನತೆಯನ್ನು ತೋರಿಸುತ್ತದೆ. ಅಷ್ಟೇ ಅಲ್ಲ ಪುರುಷವ್ಯವಸ್ಥೆಯ ನಿಯಮವನ್ನು ಮೀರಿ ಮೆಟ್ಟನ್ನು ಧರಿಸಿದ ಕಾರಣಕ್ಕೆ ನರಸಿಂಹ ಅವಳ ಬಲಪಾದವನ್ನು ಸುಡುವುದು ಗಂಡಿನ ದೌರ್ಜನ್ಯಕ್ಕೆ ಸಾಕ್ಷಿ. ಅವಳ ಮೇಲಿನ ದೌರ್ಜನ್ಯಕ್ಕೆ ವ್ಯವಸ್ಥೆಯು "ಗಂಡಸರ ಕೆರಳಿಸಿರೆ ಉಳೀತ ಬಾಬತ್ತು ಉಂಟಾ! 'ಆಯಿತಲ್ಲ... ಮೆಟ್ಟು ಮೆಟ್ಟು ಅಂದ್‌ದ್ ... ಇನ್ನು ಹಾಕಿಂತೆಲ್ಲಿಗೆ? ಕೈಗೆ ಹಾಕಿಣ್ಣಗು! ಇಲ್ಲ ಒಂದೇ ಕಾಲಿಗೆ ಹಾಕಿಂದ್ ತಿರಗಗು... ಹೆಮ್ಮಕ್ಕಳು ಅತೀ ಆಸೆ ಪಟ್ಟರೆ ಹಂಗೇ ಆತು ಮತ್ತೆ..." ಎಂದು ಪ್ರತಿಕ್ರಿಯಿಸುವುದು. ಹೇಗೆ ವ್ಯವಸ್ಥೆಯಲ್ಲಿ ಹೆಣ್ಣು ತಾನು ಧರಿಸಲು ಮೆಟ್ಟು ಬೇಕೆಂದು ಬಯಸುವುದೇ ಅತಿಯಾಸೆಯಾಗುತ್ತದೆ ಆದರೆ ಅದು ಗಂಡಿನ ಹಕ್ಕಾಗುತ್ತದೆ ಎಂಬುದನ್ನು ಸೂಚಿಸುವುದರ ಜೊತೆಗೆ ಗಂಡು ಹೆಣ್ಣಿನ ನಡುವಿನ ತಾರತಮ್ಯವನ್ನು ತೋರಿಸುತ್ತದೆ.

ವಾಣಿಮಾಯಿ ಸಿಟ್ಟಿನಲ್ಲಿ ನರಸಿಂಹನಿಗೆ ಅಡಿಗೆ ಮಾಡು ಹೋಗು ಎಂದದ್ದೇ ದೊಡ್ಡ ತಪ್ಪು ಎಂಬಂತೆ ನರಸಿಂಹ ಅವಳನ್ನು ಒಡೆಯಲು ಬರುತ್ತಾನೆ. ಮನೆಯವರಿಗೂ ಅದು ತಪ್ಪು ಎನಿಸಿ ವಾಣಿಮಾಯಿಯನ್ನು ಯಾರೂ ಊಟಕ್ಕೂ ಕರೆಯುವುದಿಲ್ಲ. ಅಂದರೆ ಅಡಿಗೆ ಮಾಡುವ ಕೆಲಸ ಹೆಣ್ಣಿಗೆ ಸೀಮಿತವಾದದ್ದು ಆ ಕೆಲಸಮಾಡುವುದು ಗಂಡಿಗೆ ಅವಮಾನಕರ ಎಂಬ ಧೋರಣೆ ಸಮಾಜದಲ್ಲಿ ಬೇರೂರಿರುವುದು ಗೋಚರವಾಗುತ್ತದೆ. ಹೆಣ್ಣನ್ನು ಕೆಲವು ನಿರ್ಧಿಷ್ಟ ಕೆಲಸಗಳಿಗೆ ಸೀಮಿತಗೊಳಿಸಿ ಅವಳು ನಿರ್ವಹಿಸುವ ಕೆಲಸವನ್ನು ನಿರ್ವಹಿಸುವುದು ತನ್ನ ಗಂಡ್ತನದ ಹಿರಿಮೆಗೆ ಧಕ್ಕೆ ಆದಂತೆ ಎಂದು ಭಾವಿಸುತ್ತಾನೆ. ಆ ಮೂಲಕ ತಾನು ಹೆಣ್ಣಿಗಿಂತ ಮೇಲು ಎಂದು ತೋರಿಸಲು ಯತ್ನಿಸುತ್ತಾನೆ.

ಪುರುಷ ವ್ಯವಸ್ಥೆ ಪ್ರೇರಿತ ಸಂಪ್ರದಾಯಶೀಲ ಮನಸ್ಸು ಹೆಣ್ಣನ್ನು ಹೀಗೆ ಇರಬೇಕು ಎಂದು ಒಂದು ನಿರ್ಧಿಷ್ಟ ಚೌಕಟ್ಟಿನಲ್ಲಿ ಕಟ್ಟಿಹಾಕಲು ಪ್ರಯತ್ನಿಸುತ್ತದೆ. ಆಕೆ ಏನಿದ್ದರೂ ಮನೆ, ಮಕ್ಕಳು, ಸಂಸಾರ ಇವುಗಳಿಗಷ್ಟೇ ಸೀಮಿತವಾಗಿರಬೇಕು. ಅದಕ್ಕಿಂತ ಹೆಚ್ಚು ಸ್ವಾತಂತ್ರ್ಯವಹಿಸಲು ಪ್ರಯತ್ನಿಸಿದರೆ ನೀನು ಹೆಣ್ಣು ಹೇಗಿರಬೇಕೋ ಹಾಗಿರಬೇಕು ಎಂದು ಅವಳ ಸ್ವಾತಂತ್ರ್ಯವನ್ನು ಚಿವುಟಿಹಾಕಲು ಯತ್ನಿಸಲಾಗುತ್ತದೆ. "ಗೂಡಿನೊಳಗೆ ಒಂದು ಹಕ್ಕಿ" ಕಥೆಯ ಮಾಲತಿ ತನ್ನ ಸ್ನೇಹಿತೆ ಅನಿತಾ ಬರುವುದನ್ನು ಕಂಡು ಶಿಳ್ಳುಹಾಕಿದಳು ಎಂಬ ಕಾರಣಕ್ಕೆ ಪ್ರಿನ್ಸಿಪಾಲರು ಅವಳನ್ನು ಕರೆಸಿ "ನೀನು ಹೆಣ್ಣು, ಅದರಲ್ಲಿಯೂ ಭಾರತದಲ್ಲಿ ಹುಟ್ಟಿದವಳು ಎಂತ ಪುನಃ ಪುನಃ ಹೇಳಿ ಹೀಕರಣೆ"

ಬರಿಸುವುದು ಇದಕ್ಕೆ ನಿದರ್ಶನ. ಹೆಣ್ಣೆಂದರೆ ಶಿಳ್ಳು ಹೊಡೆಯುವುದಕ್ಕೂ ದುರ್ಬಲಳು. ಅದಕ್ಕೂ ಗಂಡಿನ ಆಧಾರಬೇಕು ಎಂತ ಅವರ ಅರ್ಥವೇ? ಎಂದು ಮಾಲತಿ ಕೇಳುವ ಪ್ರಶ್ನೆ ನಿಜಕ್ಕೂ ಯೋಚಿಸಬೇಕಾದ ವಿಷಯ. ಗಂಡು ಹೆಣ್ಣಿನ ನಡುವಿನ ಅಂತರ ಅಗಾಧವಾಗಿರುವುದನ್ನು ಇದರಿಂದ ಅರಿಯಬಹುದು.

'ಆಭಾ' ಕಥೆಯ ಆಭಾ ಹೇಗೇಗೋ ಮಲಗಿದ್ದನ್ನು ಕಂಡು ಸಮಿತ "ಒಳ್ಳೆ ಗಂಡಸರಂತೆ ಮಲಗಿದ್ದೀಯಲ್ಲ" ಎಂದು ಹೇಳುವ ಮಾತಿನಲ್ಲಿಯೂ ನಮ್ಮ ಸಮಾಜದಲ್ಲಿನ ಗಂಡು ಹೆಣ್ಣಿನ ನಡುವಿ ತಾರತಮ್ಯ ಗೋಚರವಾಗುತ್ತದೆ. ಅಂದರೆ ಗಂಡು ಹೇಗೆ ಬೇಕಾದರೂ ಮಲಗಿಕೊಳ್ಳಬಹುದು. ಆದರೆ ಹೆಣ್ಣು ತನ್ನ ಇಷ್ಟ ಬಂದ ಹಾಗೆ ಮಲಗಲೂ ಸ್ವಾತಂತ್ರ್ಯ ಇಲ್ಲದವಳು. ಈ ರೀತಿ ಚಿಕ್ಕ ಚಿಕ್ಕ ವಿಷಯಗಳಲ್ಲೂ ಕೂಡ ಗಂಡು ಹೆಣ್ಣಿನ ನಡುವೆ ಅಸಮಾನತೆ ಇರುವುದನ್ನು ಕಾಣುತ್ತೇವೆ.

ವೈದೇಹಿಯವರು ತಮ್ಮ ಕಥೆಗಳಲ್ಲಿ ಸಮಾಜದಲ್ಲಿ ತಲೆ ತಲಾಂತರದಿಂದ ಬೇರೂರಿರುವ ಗಂಡು ಹೆಣ್ಣಿನ ನಡುವಿನ ಅಸಮಾನತೆಯನ್ನು ಸೂಕ್ಷ್ಮವಾಗಿ ಪ್ರಸ್ತಾಪಿಸಿದ್ದರೂ ಗಂಡು ಹೆಣ್ಣಿನ ನಡುವೆ ಜೈವಿಕ ಭಿನ್ನತೆ ಇದೆಯೇ ಹೊರತು ಯಾರೂ ಮೇಲಲ್ಲ, ಯಾರೂ ಕೀಳಲ್ಲ ಎಂಬ ನಿಲುವನ್ನು ಹೊಂದಿದ್ದಾರೆ. 'ಆಭಾ' ಕಥೆಯ ಸಮಿತ ನಿರ್ಗುಣರಾವ್‌ನನ್ನು ಥೇಟ್ ಹುಡುಗಿಯ ರೀತಿ ಎಂದು ಹೇಳಿದಾಗ ಆಭಾ "'ಥು' ಯಾಕೆ? ಹುಡುಗಿಯರಂತೆ ಇದ್ದರೆ ಏನೀಗ? ಹುಡುಗಿಯರೆಂದರೆ ಕಡಿಮೆ ಅಂತ ನೀನೇ ಹೇಳಿದ ಹಾಗಾಯಿತಲ್ಲ" ಎನ್ನುತ್ತಾಳೆ. ಆಗ ಸಮಿತ "ಅರೆ ನಾನೆಲ್ಲಿ ಹಾಗೆ ಹೇಳಿದೆ? ಗಂಡಿನಂತೆ ಇರುವ ಹೆಂಗಸಿಗೆ ಗಂಡುಬೀರಿ, ಸ್ತ್ರೀವೇಷ ಅಂತೆಲ್ಲ ಹೇಳುವುದಿಲ್ಲವೇ ಏನಂದರೂ ಗಂಡು ಗಂಡಿನಂತೆಯೇ ಹೆಣ್ಣು ಹೆಣ್ಣಿನಂತೆಯೇ ಇರಬೇಕಪ್ಪ. ಅಂದರೆ "ಅವರ ಆಕೃತಿಯಲ್ಲಿ ಮೇಲುಕೀಳು ಎಂಬ ಅರ್ಥದಲ್ಲಿ ಹೇಳುವುದಲ್ಲ ನಾನು" ಎಂದು ಹೇಳುವಲ್ಲಿ ಇದನ್ನು ಕಾಣಬಹುದು.

ವೈದೇಹಿಯವರು ಹೆಣ್ಣು ಗಂಡು ಅನಾಗರೀಕ ಚಕಮಕಿಗಳಿಲ್ಲದೆ ಸೌಹಾರ್ದಯುತವಾಗಿ ನಡೆಯುವ ವಾಸ್ತವ ಪ್ರಜ್ಞೆಯನ್ನು ಹೊಂದಿರಬೇಕು. ಗಂಡು ಹೆಣ್ಣು ಎಂಬ ಲಿಂಗ ಭೇದ ನೆಪ ಮಾತ್ರ ಅಷ್ಟೇ. ಇಬ್ಬರೂ ಪ್ರಬುದ್ಧರಾದಾಗ ಈ ಭೇದವನ್ನು ದಾಟಬಹುದು ಎಂದು ನಂಬಿದ್ದವರು. ಇದನ್ನು ಅವರ 'ಮರೆವು' ಕಥೆಯಲ್ಲಿ ಕಾಣಬಹುದು. ಈ ಕಥೆಯಲ್ಲಿ ವಯಸ್ಸಾದ ಅಜ್ಜ, ಅಜ್ಜಿ, ತಮ್ಮ ಪಾತ್ರಗಳನ್ನು ಪರಸ್ಪರ ಬದಲಾಯಿಸಿಕೊಳ್ಳುವುದನ್ನು ಕಾಣುತ್ತೇವೆ. ಕೇವಲ ಜೈವಿಕ ಸ್ಥಿತಿಗೆ

ಅನುಗುಣವಾಗಿ ಗಂಡು ಹೆಣ್ಣಿನ ನಡುವೆ ಜವಾಬ್ದಾರಿಗಳನ್ನು ಹಂಚಲಾಗಿತ್ತೇ ವಿನಃ ಗಂಡು ಮೇಲು ಈ ಪಾತ್ರವನ್ನು ನಿರ್ವಹಿಸಬೇಕು. ಹೆಣ್ಣು ಕೀಳು ಈ ಪಾತ್ರವನ್ನು ನಿರ್ವಹಿಸಬೇಕು ಎಂಬರ್ಥದಿಂದಲ್ಲ. ಗಂಡು ಹೆಣ್ಣಿನ ಹೆಣ್ಣು ಗಂಡಿನ ಪಾತ್ರ ನಿರ್ವಹಿಸುವುದರಲ್ಲಿ ಯಾವುದೇ ತಪ್ಪಿಲ್ಲ. ಮೊದಲು ನಾವು ಜೀವಿಗಳು ಆಮೇಲೆ ಗಂಡು ಹೆಣ್ಣು ಎಂಬ ಲಿಂಗಭೇದ ಬರುವುದು ಎಂಬುದನ್ನು ಮರೆಯಬಾರದು. "ಒಟ್ಟಿಗೆ ಬದುಕಿ ಬದುಕಿ ಕಡೆಗೆ ಹೆಣ್ಣು ಗಂಡು ಎಂಬ ಮಾಯೆಯೇ ಪರಸ್ಪರರಲ್ಲಿ ಮಾಯವಾಗಿ ಕೇವಲ ಜೀವಿಗಳಾಗಿ ಬಿಡುತ್ತೇವೆಯೇ?" ಎಂದು ಆ ವಯಸ್ಸಾದ ದಂಪತಿ ಅಂದುಕೊಳ್ಳುವುದು ಗಂಡು ಹೆಣ್ಣು ಎಂಬ ಭೇದ ಕೇವಲ ಮಾಯೆ. ನಾವು ಮೊದಲು ಜೀವಿಗಳು ಎಂಬುದನ್ನು ಮನಗಾಣಬೇಕು ಎಂಬ ಆಶಯವನ್ನು ಹೊಂದಿದೆ. ವೈದೇಹಿಯವರ ಆಶಯವೂ ಇದೇ ಆಗಿದೆ. ಗಂದು ಹೆಣ್ಣು ಇಬ್ಬರೂ ಪ್ರಬುದ್ಧರಾದಾಗ ಮಾತ್ರ ಲಿಂಗಭೇದವನ್ನು ದಾಟಿ ಕೇವಲ ಜೀವಿಗಳಾಗಿರಲು ಸಾಧ್ಯ.

ವೈದೇಹಿಯವರ ದೃಷ್ಟಿ ಬಹಳ ಸೂಕ್ಷ್ಮ ಗಂಡು ಹೆಣ್ಣಿನ ನಡುವಿನ ಅಸಮಾನತೆಯ ಜೊತೆಗೆ ಸ್ತ್ರೀ ಪ್ರಪಂಚದೊಳಗೇ ಜಾತಿ, ಅಂತಸ್ತು ಇತ್ಯಾದಿ ಕಾರಣದಿಂದ ಕಂಡು ಬರುವ ಅಸಮಾನತೆಯನ್ನು ಕೂಡ ಅವರು ತಮ್ಮ ಕಥೆಗಳಲ್ಲಿ ಪ್ರಸ್ತಾಪಿಸಿದ್ದಾರೆ. 'ಗುಲಾಬಿ ಟಾಕೀಸು ಮತ್ತು ಸಣ್ಣ ಅಲೆಗಳು' ಕಥೆಯಲ್ಲಿ ಮೇಲ್ವರ್ಗದ ಸ್ತ್ರೀಯರು ಮತ್ತು ಕೆಳವರ್ಗದ ಸ್ತ್ರೀಯರ ನಡುವಿನ ಅಸಮಾನತೆಯನ್ನು ಗುರುತಿಸಬಹುದು. ಮೇಲ್ವರ್ಗದ ಸ್ತ್ರೀಯರು ತಾವಾಗಿ ಸಿನೆಮಾಗೆ ಹೋಗಲು ಹಿಂಜರಿದರೆ ಕೆಳವರ್ಗದ ಕೊರಗ ಕೂಸಾಳು ಸ್ತ್ರೀಯರು ಮುಂದಿನ ಸೀಟಿನಲ್ಲಿ ಚಾಪೆ ಮೇಲೆ ಕುಳಿತು ಯಾವ ಕೀಳರಿಮೆಯೂ ಇಲ್ಲದೆ ಸಿನೆಮಾ ನೋಡುತ್ತ ಬಿಸಾತಿಲ್ಲದೆ ನಕ್ಕು ಹೋಗುವವರು. ಈ ಬಗ್ಗೆ ಮೇಲ್ವರ್ಗದ ಸ್ತ್ರೀಯರನ್ನು ಕೇಳಿದರೆ ತಮಗಿಂತ ಅವರು ಕೀಳು ಎಂಬ ಭಾವನೆಯಲ್ಲಿ "ಅವೇ? ಲಂಗು ಲಗಾಮು ಇಲ್ಲದವು" ಎಂದು ತಾತ್ಸಾರದಿಂದ ನುಡಿವರು. ಅಂದರೆ ನಾವು ಮೇಲ್ವರ್ಗದವರು ಮರ್ಯಾದಸ್ಥರು, ಸಂಸಾರಂದಿಗರು, ಗಂಡನಿಗೆ ಹೆದರುವವರು, ಸಮಾಜದ ಕಟ್ಟಳೆಗಳನ್ನು ಪಾಲಿಸುವವರು ಆದರೆ ಕೆಳವರ್ಗದ ಸ್ತ್ರೀಯರು ಇವ್ಯಾವು ಇಲ್ಲದವರು ಎಂಬರ್ಥದಲ್ಲಿ ಮಾತನಾಡುವುದು ಸ್ತ್ರೀಯರ ನಡುವಿನ ಅಸಮಾನತೆಯನ್ನು ಸೂಚಿಸುತ್ತದೆ. ಒಂದರ್ಥದಲ್ಲಿ ಕೆಳವರ್ಗದ ಸ್ತ್ರೀಯರಿಗೆ ಇರುವ ಸ್ವಾತಂತ್ರ್ಯ ಮೇಲ್ವರ್ಗದ ಸ್ತ್ರೀಯರಿಗಿಲ್ಲ ಎಂದು ಹೇಳಬಹುದು. ಜೊತೆಗೆ ಮೇಲ್ವರ್ಗದ ಸ್ತ್ರೀಯರನ್ನು ಕುರಿತು "ಲಂಗುಲಗಾಮು ಇರುವುದನ್ನೇ ಪ್ರೀತಿಸುತ್ತಿದ್ದ ಹೆಂಗಸರು ಇವರೆಲ್ಲ ಎಂದರ್ಥವಾಯಿತಷ್ಟೆ" ಎಂಬ ಮಾತು ಸ್ವತಃ ಹೆಂಗಸರೇ ಗಂಡಿನ ಹಿಡಿತದಲ್ಲಿರಬಯಸುವ ಮನಸ್ಥಿತಿಯನ್ನು ಸೂಚಿಸುತ್ತದೆ.

ಕೆಳಜಾತಿಯ ಮಂಜಿ ಸ್ವತಃ ತಾನೇ ತನ್ನ ಜಾತಿಯ ಬಗ್ಗೆ ಕೀಳರಿಮೆ ಬೆಳಸಿಕೊಂಡಿರುವುದಲ್ಲದೆ ಬ್ರಾಹ್ಮಣರು ಶ್ರೇಷ್ಠ ಎಂದು ಒಪ್ಪಿಕೊಳ್ಳುವುದನ್ನು ತಾನೂ ಅವರಂತೆ ಇರುವ ಮೂಲಕ ತಮ್ಮ ಜಾತಿಯ ಇತರರಿಗಿಂತ ತಾನು ಶ್ರೇಷ್ಠ ಎಂದು ತೋರಿಸಿಕೊಳ್ಳಲು ಹಂಬಲಿಸುವುದನ್ನು 'ಅಲ್ಲಲ್ಲಿನ ಲೋಕದವರು' ಕಥೆಯಲ್ಲಿ ಕಾಣುತ್ತೇವೆ. "ಇದ್ದದ್ದು ಒಂದು ಆಸೆ ಅಪ್ಪಂಥ ಬಿರಾಮಣರ ಮನೆಯಲ್ಲಿ ಕೆಲಸ ಮಾಡಬೇಕು ಅಂತ ಅಂತಿಂತವರು ತನಗೆ ಆಗುವುದಿಲ್ಲ". ಎನ್ನುವ ಮಂಜಿಯ ಮಾತಿನಲ್ಲಿ ಮೇಲ್ಜಾತಿಯ ಮನೆಯಲ್ಲಿ ಕೆಲಸ ಮಾಡಿದರೆ ತನ್ನ ಜಾತಿಯ ಇತರರಿಗಿಂತ ತಾನು ಶ್ರೇಷ್ಠ ಎನಿಸಿಕೊಳ್ಳುತ್ತೇನೆ ಎಂಬ ಭಾವವಿರುವುದನ್ನು ಕಾಣುತ್ತೇವೆ. ಒಡತಿ ಲಕ್ಷ್ಮಿದೇವಮ್ಮ ಮಂಜಿಗೆ ಒಡಕು ಮಾವಿನ ಕಾಯಿಗಳನ್ನು ಬೇಕಾದರೆ ತೆಗೆದುಕೊಂಡು ಹೋಗು ಎಂದರೆ "ಹಾಗೆ ತೆಗೆದುಕೊಂಡು ಹೋದರೆ ಜಾತಿಯ ಉಳಿದವರಿಗಿಂತ ತಾನು ಊಂಚು ಹೇಗಾದೇನು?" ಎಂದುಕೊಳ್ಳುವ ಮಂಜಿ "ಅಮ್ಮ ನಂಗೊಂದು ಕೆಟ್ ಅಭ್ಯಾಸೋ ಕಾಣೀ– ತಿಂಬ್‌ದಿತ್ತಾ, ಒಳ್ಳೆವೇ ತಿನ್‌ಕ್ ಅಂತೆಳಿ" ಎಂದೇ ಬಿಡುವಳು. ಮಂಜಿ ಹಾಗೆಂದಾಗ "ಹಂಗಾರ್ ನಿಂಗ್ ಬೇಕಾದ್ ಹೆತ್ಕೊ– ಈ ರಾಶಿಯಿಂದ" ಎಂದರೂ ತಾನು ಹೇಳಿದ ರಾಶಿಯಿಂದಲೇ ಹೆಕ್ಕಿಕೊಳ್ಳಬೇಕೆಂಬ ಲಕ್ಷ್ಮಿದೇವಮ್ಮನ ವರ್ತನೆಯಲ್ಲಿ ತಾನು ಶ್ರೇಷ್ಠ ಕೆಳಜಾತಿಯ ಮಂಜಿಗೆ ನಮಗೆ ಆಗಿ ಉಳಿದದ್ದು, ಒಡಕು ಮಾವಿನ ಹಣ್ಣುಗಳನ್ನು ನೀಡಬೇಕೆಂಬ ಧೋರಣೆಯನ್ನು ಕಾಣುತ್ತೇವೆ. ಹಾಗೆಯೇ ವಿಧವೆ ಗುಂಡಕ್ಕ ಬಾವಿಕಟ್ಟೆ ಖಾಲಿ ಮಾಡಲಿ ಎಂದು ಮನೆಕೆಲಸದ ಗೌರಿ ಹಾವು ಎಂದು ಕೂಗಿಕೊಂಡಾಗ ಹೆದರಿದ ಗುಂಡಕ್ಕ ಮನೆಯೊಳಗೆ ಓಡಿದ ಅವಸ್ಥೆಯನ್ನು ಕಂಡು ನಗುತ್ತಿದ್ದ ಮಂಜಿಯನ್ನು ಕಂಡು "ಮಂಜಿ, ಎಲ್ಲಾ ಸಮಯಕ್ಕೂ ನಗೆ ಯಂತದದ್, ಯಾರ್ ಯಾರ್ ಎಲ್ಲೆಲ್ಲಿ ಇರ್ಕೋ ಅಲ್ಲಲ್ಲೆ ಇರ್ಕ್ ಅಂಬುದ್ ಸುಳ್ಳ ಮತ್ತೆ?" ಎಂದು ಕೋಪದಿಂದ ಲಕ್ಷ್ಮಿದೇವಮ್ಮ ಹೇಳುವ ಮಾತಿನಲ್ಲೂ ಅಸಮಾನತೆ ಒಡೆದು ಕಾಣುತ್ತದೆ.

'ಅಲ್ಲಲ್ಲಿನ ಲೋಕದವರು' ಕಥೆಯ ಬಳುವಟೆನಾರಾಯಣನ ಹೆಂಡತಿ ಮಾಂಕಾಳಿಯಮ್ಮ ತನ್ನ ಗಂಡನ ಅವಿವೇಕ, ಬೇಜವಾಬ್ದಾರಿ ಹಾಗೂ ಬಡತನದ ಕಾರಣ ಇತರ ಹೆಂಗಸರಿಂದ ಅವಮಾನಕ್ಕೆ ಒಳಗಾಗುವುದರಲ್ಲೂ ಅಸಮಾನತೆ ಕಾಣುತ್ತದೆ. ಅಂತಸ್ತು ಎಂಬುದು ಎಂತೆಂಥ ಹುಡುಗಿಯರ ಬದುಕನ್ನು ನುಂಗಿ ನೀರು ಕುಡಿಯುತ್ತದೆ. ಮಾಂಕಾಳೀಯಮ್ಮ ಜಾಣೆಯಾದರೂ, ಚೆನ್ನಾಗಿ ಹಾಡಿದರೂ, ಪುಟಿಯುವ ಉಲ್ಲಾಸವೇ ಆಗಿದ್ದರೂ ತನ್ನ ಅಂತಸ್ತಿನ ಕಾರಣ "ನೂರು, ಸಾವಿರ ಮುಡಿ ಹುಟ್ಟುವಳಿಗಳ ಒಡತಿಯರು ಕೆಲವರು ಇವಳಿಗಿಂತ ಕಿರಿಯರಾದರೂ ಇವಳನ್ನು ಏಕವಚನದಲ್ಲಿಯೂ, ಕೊನೆಗೆ ನಪುಂಸಕ ಲಿಂಗದಲ್ಲಿಯೂ.–'ಆ ಮಾಂಕಾಳಿ ಬಂತು' 'ಮಾಂಕಾಳಿ

ಹೋಯ್ತು' 'ಮಾಂಕಾಳಿ ಎಲ್ಲಿ ಸತ್ತಿದೆ' ಹೀಗೆ ಹೇಳಬಹುದು". ಮಾಂಕಾಳಿ ಜಾತಿಯಲ್ಲಿ ಲಕ್ಷ್ಮೀದೇವಮ್ಮನಂತೆ ಬ್ರಾಹ್ಮಣಳೇ ಆದರೂ ತನ್ನ ಬಡತನದ ಕಾರಣ ಅವರ ಮನೆಯಲ್ಲಿ ಅಡಿಗೆ ಕೆಲಸ ಮಾಡಿಕೊಂಡು ಅವರ ಕೈಕೆಳಗೆ ಇರಬೇಕಾದ ಪರಿಸ್ಥಿತಿ. ಕೆಳಜಾತಿಯ ಮಂಜ ತನ್ನ ಅಳಿಯನ ಹೊಟೆಲಿನಲ್ಲಿ ಅರೆಯುವ ಕೆಲಸಕ್ಕೆ ಮಾಂಕಾಳಿಯಮ್ಮನನ್ನು ಕರೆದಾಗ ಲಕ್ಷ್ಮೀ ದೇವಮ್ಮನ ಮಗ ರಾಮದೇವರು "ಅಮ್ಮ, ನಿಂಗೂ ಬುದ್ಧಿ ಇಲ್ವ? ಮಂಜಿ ಅಳಿಯನ್ ಹೊಟ್ಲಗೆ ಅರೆಯುಕೆ ಹೋಪಷ್ಟ್ ಆಯ್ತಾ ಇವಳಿಗೆ?... ಇದ್ ನಂಗೆ ಸಮ ಕಾಂತಿಲ್ಲೆ" ಎಂದು ಹೇಳುವುದರಲ್ಲಿ ಕೆಳಜಾತಿಯ ಮಂಜಿ ಅಳಿಯನ ಹೊಟೆಲಿಗೆ ಅರೆಯುವ ಕೆಲಸಕ್ಕೆ ಬ್ರಾಹ್ಮಣಳಾದ ಮಾಂಕಾಳಿಯಮ್ಮ ಹೋಗುವುದೇ ಎಂಬರ್ಥ ಇದ್ದು ಜಾತಿ ಅಸಮಾನತೆಯನ್ನು ತೋರಿಸುತ್ತದೆ. ಇಲ್ಲಿ ಲಕ್ಷ್ಮೀದೇವಮ್ಮ ಮತ್ತು ಮಾಂಕಾಳಿಯಮ್ಮನ ನಡುವೆ ವರ್ಗ ಅಸಮಾನತೆ ಗೋಚರವಾದರೆ, ಮಾಂಕಾಳಿಯಮ್ಮ ಮತ್ತು ಮಂಜಿಯ ನಡುವೆ ಜಾತಿ ಅಸಮಾನತೆ ಗೋಚರವಾಗುತ್ತದೆ.

'ಒಂದು ಕಳ್ಳ ವೃತ್ತಾಂತ' ಕಥೆಯ ಬಚ್ಚಮ್ಮ ಚೆನ್ನಾಗಿ ತಿಂದು ಉಂಡು ಬದುಕಬೇಕು ಎಂಬ ಸ್ವಭಾವದವಳು ಆದರೆ ಗಂಡ ವಾಚಣ್ಣ ಇರಲಿ ಇಲ್ಲದಿರಲಿ ತೃಪ್ತಿ ಪಡುವವನು. ತನ್ನ ಹೊಟ್ಟೆ ತುಂಬಿದರೆ ಸಾಕು ಹೆಂಡತಿ ಮಕ್ಕಳ ಬಗ್ಗೆ ಚಿಂತಿಸುವವನಲ್ಲ. ಬಾಯಿರುಚಿಯ ಬಚ್ಚಮ್ಮ ತನ್ನ ಬಡತನದ ಕಾರಣ ತಾನು ಕೆಲಸಕ್ಕೆ ಹೋಗುವ ಹೆಚ್ಚುಕಟ್ಟಳೆ ಮನೆಗಳಲ್ಲಿ ಆಹಾರ ಪದಾರ್ಥಗಳನ್ನು ಕದಿಯುವ ಅಭ್ಯಾಸ ಬೆಳೆಸಿಕೊಂಡು ಇತರ ಹೆಂಗಸರಿಂದ ಅವಮಾನಕ್ಕೆ ಒಳಗಾಗುತ್ತಾಳೆ. ತಿಮ್ಮರಾಯರ ತಂದೆಯ ತಿಥಿಯಲ್ಲಿ ಕಜ್ಜಾಯ ಕಾಯಿಸುತ್ತಿದ್ದ ಬಚ್ಚಮ್ಮ ಎರಡು ಸುಕ್ರುಂಡೆ ಮತ್ತು ವಡೆಯನ್ನು ಯಾರಿಗೂ ಕಾಣದಂತೆ ಎತ್ತಿಟ್ಟುಕೊಂಡದ್ದಕ್ಕೇ, ಏನೋ ಹಣ, ಚಿನ್ನ ಕದ್ದಂತೆ ತಿಮ್ಮರಾಯರ ಹೆಂಡತಿ ಗಂಗಮ್ಮ, ಮೈದಿನಿ ಕುಮುದ, ಗಿರಿಜೆ ದೊಡ್ಡರಗಳೆ ಮಾಡುತ್ತಾರೆ. ಶ್ರೀಮಂತರ ಮನೆ ಸೇರಿದ್ದ ಕುಸುಮ "ಇದ್ದಬದ್ದವರ ಮನೆ ಬರಿಗುಡಿ ಮಾಡಲು ಹೋದರೆ ದೈವ ದೇವರು ಬಿಡುತ್ತಾನಾ ಮತ್ತೆ? ಹುಚ್ಚು ಹಿಡಿದು ನೂಲರಿವೆ ಮೈಮೇಲಿಟ್ಟುಕೊಳ್ಳದೆ ಥಕಥೈ ಕುಣಿಯುವ ಗತಿ ಬಂದೀತು" ಎಂದು ಶ್ರೀಮಂತಿಕೆಯ ದರ್ಪದಿಂದ ಬಚ್ಚಮ್ಮನನ್ನು ಹೀಯಾಳಿಸುತ್ತಾಳೆ. ಎಷ್ಟೆಲ್ಲ ದುಡಿಮೆ ಮಾಡಿದರು ಗಂಗಮ್ಮ "ಇಗಾ, ಮಕ್ಕಳ ಕೈ ಮೇಲೆ ಹಾಕು" ಎಂದು ಕಟ್ಟಿಕೊಡುವವರಲ್ಲ. ಬೇಕಾದರೆ ಬಾಯಿಂದ ಉದ್ದ ಹಂಗಿಸಿಯಾರು. ಹಸಿದವರೆದರು ಉಂಡವರ ತೇಗಿನಂತಹ ಠೇಂಕಾರವಲ್ಲವೆ ಅದು?" ಎಂದುಕೊಳ್ಳುವ ಬಚ್ಚಮ್ಮ ತನ್ನ ಬಡತನದ ಕಾರಣ ಶ್ರೀಮಂತ ಹೆಂಗಸರಿಂದ ಹೋದಲ್ಲೆಲ್ಲ ಅವಮಾನಕ್ಕೀಡಾಗುವುದು. ತಮ್ಮ ಶ್ರೀಮಂತಿಕೆಯ

ಜರ್ಬನ್ನು ಬಡ ಹೆಂಗಸರ ಮೇಲೆ ತೋರಿಸುವ ಮೂಲಕ ತಾವು ಶ್ರೇಷ್ಠ ಎಂದು ತೋರಿಸಿಕೊಳ್ಳುವ ಗಂಗಮ್ಮ ಕುಮುದರಂತಹ ಶ್ರೀಮಂತ ಹೆಂಗಸರು ವರ್ಗ ಅಸಮಾನತೆಯ ಪ್ರತಿನಿಧಿಗಳಂತಿದ್ದಾರೆ.

ಶ್ರೀಮಂತೆ ಗಂಗಮ್ಮಳ ಎದುರು ಬಚ್ಚಮ್ಮ ಕೀಳಾದರೆ. ಅವಳೆದುರು ಕೆಳಜಾತಿಯ ಕೊರಾತಿ ಕೀಳು. ಬಚ್ಚಮ್ಮ ಹಪ್ಪಳ ಮಾಡಿ ಒಣಗಿ ಹಾಕಿ ಕಾಯುತ್ತ ಕುಳಿತಿದ್ದಾಗಿ ಕೊರಾತಿಯೊಬ್ಬಳು ಒಣೆಯಾಚೆಯಿಂದ "ಒಡತೀ, ಇಲ್ಲೆರ್ಡ್ ಹಪ್ಪಳೊ ಕೈ ಮೇಲ್ ಹಾಕುವಿರಲೆ" ಎಂದು ಕೇಳುತ್ತಾಳೆ. ಆಗ ಬಚ್ಚಮ್ಮ ತಕೋ ಎಂದು ನಾಲ್ಕೈದು ಹರಿದ ಹಪ್ಪಳಗಳನ್ನು ಬಿಸಾಕಿದಾಗ ಕೊರಾತಿ "ಹಂಗಾರ್, ಒಂದು ಇಡೀ ಹಪ್ಪೊಳೋ ಕೊಟ್ರೆ ನೀವ್ ಬಳ್ಕಂಡ್ ಹೋಪ್ರ್ಯಾ? ಎಂದು ಕೇಳುವುದು ಬಚ್ಚಮ್ಮನಿಗೆ ಗಂಗಮ್ಮನೆದುರು ತನ್ನ ಸ್ಥಿತಿಯ ನೆನಪಾಗುತ್ತದೆ. ಬಚ್ಚಮ್ಮ "ಗಂಗಮ್ಮನಿಗೊಬ್ಬಳು ತಾನು. ತನಗೊಬ್ಬಳು ಈ ಕೊರಾತಿ" ಎಂದುಕೊಳ್ಳುವುದು ಅಸಮಾನತೆ ಎಂಬುದು ಹೇಗೆ ಶ್ರೇಣೀಕೃತಗೊಂಡಿದೆ" ಎಂಬುದನ್ನು ಸೂಚಿಸುತ್ತದೆ.

'ಮದುವೆ-ಹೆಣ್ಣು-ಸೀರೆ ಕಥೆಯ ಸುಮಾ ತನ್ನ ದೊಡ್ಡಪ್ಪನ ಮನೆಯವರು ಶ್ರೀಮಂತರಾದರೂ, ದೊಡ್ಡಮ್ಮನ ಶ್ರೀಮಂತಿಕೆಯ ಜರ್ಬು ಗೊತ್ತಿದ್ದರೂ ಒಡಹುಟ್ಟಿದ ಅಣ್ಣನಿಗಿಂತ ಹೆಚ್ಚಾಗಿದ್ದ ದೊಡ್ಡಪ್ಪನ ಮಗ ರಾಮಣ್ಣನ ಮದುವೆಗೆ ಕಷ್ಟಪಟ್ಟು ಒಳ್ಳೆಯ ಸೀರೆ ಖರೀದಿಸಿ ಇದ್ದ ಆಭರಣಗಳನ್ನೇ ಧರಿಸಿ ಬರುತ್ತಾಳೆ. ಆದರೆ ದೊಡ್ಡಮ್ಮ ಮತ್ತು ಅವಳ ಮಕ್ಕಳ ಸೀರೆ ಒಡವೆ ಅವರ ಶ್ರೀಮಂತಿಕೆಯ ಜರ್ಬಿನ ಮುಂದೆ ಸುಮಾ ಕುಗ್ಗಿ ಹೋಗುತ್ತಾಳೆ. ರಾಮಣ್ಣನ "ಅಕ್ಕಂದಿರಾದ 'ಪಂಕಜ, ವನಜ, ಶೈಲಜರೊಂದಿಗೆ ಆಡಿ ಕುಣಿದವಳು ತಾನು, ತನ್ನ ಸೌಂದರ್ಯದೆದುರು ಅವರದೆಲ್ಲಿ? ಆದರೆ ಅವರವರು ಸೇರಿದ ಮನೆಯ ಆರ್ಥಿಕ ಮಟ್ಟ ತನ್ನನ್ನು ಅವರಿಂದ ಬೇರೆಯೇ ಆಗಿಸಿಬಿಟ್ಟಿತು. ಈಗ ಅವರೆಲ್ಲ ದೊಡ್ಡವರ ಹೆಂಡಂದಿರು. ತನ್ನೊಂದಿಗೆ ಮುಂಚಿನಂತೆ ಗಂಟೆಗಟ್ಟಲೆ ಮಾತನಾಡುವುದು ಅವರಿಗೆ ತರವಲ್ಲ" ಎಂದು ಕೀಳರಿಮೆ ಭಾವನೆಯಿಂದ ನರಳಿಹೋಗುತ್ತಾಳೆ. ಶ್ರೀಮಂತರಾದ ಅವರಿಂದ ಸುಮಾಳು ನಿರೀಕ್ಷಿಸಿದ ಪ್ರೀತಿ, ಆತ್ಮೀಯತೆ, ಆದರ ಯಾವುದು ದೊರಕುವುದಿಲ್ಲ. "ಮದುವೆ ಸಂತೋಷದ ಸಮಾರಂಭವೇನೋ ನಿಜ, ಆದರೆ ತನ್ನಂತಹವರಿಗೆ ಅತೃಪ್ತಿಯನ್ನು ಹೊಡೆದೆಬ್ಬಿಸಿ ಕೀಳು ಭಾವನೆಯನ್ನು ಒತ್ತಿ ಒತ್ತಿ ತುಂಬಿಸುವ ಒಂದು ಸಮಾರಂಭ" ಎಂದುಕೊಳ್ಳುವ ಸುಮಾಳ ಮಾತು ಆರ್ಥಿಕ ಅಸಮಾನತೆಯ ಕರಾಳಮುಖವನ್ನು ಅನಾವರಣಗೊಳಿಸುತ್ತದೆ.

'ಹಕ್ಕಿಲ್ಲದವರು' ಕಥೆಯ ಸಿರಿ ತನ್ನ ಬಡತನದ ಕಾರಣ ತನ್ನ ಜೊತೆ ಆಡಿ ಬೆಳೆದವರಿಂದಲೇ ಕಣ್ಣು ತಪ್ಪಿಸಿಕೊಂಡು ಓಡಾಡುವುದು, ತಾನು ಅವರಿಗಿಂತ ಕೀಳು ಎಂಬ ಕೀಳರಿಮೆ ಭಾವನೆಯಿಂದ ನರಳುವುದು ವರ್ಗ ಅಸಮಾನತೆಯನ್ನು ಎತ್ತಿ ತೋರಿಸುತ್ತದೆ. ಸಿರಿ ತನ್ನ ಜೊತೆಗಾರರಾಗಿದ್ದ ಇಂದು ವಿದೇಶದಲ್ಲಿ ವೈಭವಯುತವಾಗಿ ಬದುಕುತ್ತಿರುವ ಮಧುರಾ, ಮಾಲತಿ, ಅರುಣ, ಕಿರಣ ಶಾರದೆಯರ ಜೊತೆ ಮಾತನಾಡಾಬೇಕು ಎಂಬ ಹಂಬಲ ಹೊಂದಿದ್ದರೂ, ಒಂದು ಮಾತಾಡಲೂ ತೋಚುವುದಿಲ್ಲ. "ಅವರ ಸುಭದ್ರ ಜೀವನವನ್ನು ಬಿಂಬಿಸುವ ಉಡುಗೆ ತೊಡುಗೆ ಆಭರಣ, ದೃಢಮುಖ, ದೃಷ್ಟಿ, ತೂಕದ ಸ್ವರ, ಈ ಜಾಗದಿಂದ ತಾವು ಎಷ್ಟೋ ಎಷ್ಟೋ ಮೇಲಿನವರು ಎಂದು ತೋರುವ ಅವರ ಒಟ್ಟು ನಿಲುವು" ಇವೆಲ್ಲ ಅವಳಲ್ಲಿ ಅಸ್ವಸ್ಥತೆಯನ್ನು ಉಂಟು ಮಾಡುತ್ತವೆ. ಅವರನ್ನು ನೋಡಿ ಸಿರಿಗೆ "ತಾನು ನಿಂತದ್ದೇ ಸರಿಯಿಲ್ಲವೆನಿಸಿತು ತನ್ನ ಮುಖ ಗಲೀಜು ಎನಿಸಿತು. ತನ್ನ ಬಾಯಿ ವಾರೆಯಿರಬಹುದೇ ಎಂದು ಭೀತಿಯಾಯಿತು. ತನ್ನೊಳಗೆ ಹೀಗೆಲ್ಲ ಆಗುತ್ತಿರುವುದನ್ನು ತಪ್ಪಿಸಿಕೊಳ್ಳಲು ಎಂಬಂತೆ ಕಣ್ಣು ಅವರನ್ನು ತಪ್ಪಿಸಿಕೊಂಡೇ ತಿರುಗಿತ್ತು". ಸಿರಿಯು ಈ ರೀತಿ ಕೀಳರಿಮೆಯಿಂದ ನರಳುವುದು ವರ್ಗ ಅಸಮಾನತೆಯ ಕ್ರೂರತೆಗೆ ಹಿಡಿದ ಕನ್ನಡಿಯಂತಿದೆ.

'ಓ ಜಗತ್ತೆ' ಕತೆಯ ಮಾಧು ಇನ್ನೊಬ್ಬರ ಮನೆಯ ಜೀತಮಾಡಿ ಕಷ್ಟಪಟ್ಟು ತನ್ನ ಮಕ್ಕಳನ್ನು ಬೆಳೆಸಿದವಳು, ಅವಳ ಒಬ್ಬನೇ ಮಗ ಕಾಯಿಲೆಯಿಂದ ಬಳಲುತ್ತಿದ್ದು ಅವನನ್ನು ಉಳಿಸಿಕೊಳ್ಳಲು ತಾನು ಕಷ್ಟಪಟ್ಟು ಉಳಿಸಿದ ಹಣವನ್ನೆಲ್ಲ ಖರ್ಚುಮಾಡಿದರೂ ಉಳಿಸಿಕೊಳ್ಳಲು ಸಾಧ್ಯವಾಗದೆ ಹೋಗುತ್ತದೆ. ತನ್ನ ಮಗನಿಗೆ ಚಿಕಿತ್ಸೆ ನೀಡಿದ ಶುಲ್ಕವಾಗಿ ತಾನು ಉಳಿಸಿದ ಮುನ್ನೂರು ರೂಗಳನ್ನು ಕೊಟ್ಟು ತನ್ನ ದುಡಿಮೆಯ ಫಲವನ್ನು ಕಳೆದುಕೊಂಡರೂ ಮಗ ಉಳಿಯುವುದಿಲ್ಲ. ಆದರೆ ಅವಳ ದುಡಿಮೆಯ ಫಲ ವೈದ್ಯರ ಹೆಂಡತಿ ಹೊಸದಾಗಿ ಮಾಡಿಸಿದ ಹವಳದ ಸೆಟ್ಟಿಗೆ ಹೊಂದಿಕೆಯಾಗುವ ಸೀರೆಯ ರೂಪದಲ್ಲಿ ಅವರನ್ನು ಸೇರುತ್ತದೆ. ಅಂದರೆ ದುಡಿಮೆ ಬಡವರದು ಫಲಾನುಭವಿಗಳು ಮಾತ್ರ ಶ್ರೀಮಂತರು. ಬಡವರಿಗೆ ಜೀವ ಉಳಿಸಿಕೊಳ್ಳಲೂ ಹಣವಿಲ್ಲದೆ ಹೆಣಗಾಡಿದರೆ ಶ್ರೀಮಂತರು ತಮ್ಮ ವೈಭೋಗಕ್ಕಾಗಿ ಹಣವನ್ನು ಖರ್ಚು ಮಾಡುತ್ತಾರೆ. "ಶ್ರೀಮತಿ ದೇಶಪಾಂಡೆಯ ಮಡಿಲಲ್ಲಿ ಮಾಧುವಿನ ಮುನ್ನೂರು ರೂಪಾಯಿ ಸೀರೆಯ ರೂಪದಲ್ಲಿ ಕುಳಿತಿತ್ತು. ಹವಳದ ಸೆಟ್ಟಿನೊಡನೆ ಸೇರಲು ಹೋಗುತ್ತಿತ್ತು. ಬಹುಶಃ ಅಲ್ಲಿ ಗೋವಿಂದನೂ ಬಿದರಿನ ವಾಹನವೇರಿ ತನ್ನ ಕೊನೆಯ ಯಾತ್ರೆಗೆ ಸಿದ್ಧನಾಗುತ್ತಿರಬಹುದು" ಎಂಬ ನಿರೂಪಕಿಯ ಮಾತು ವ್ಯವಸ್ಥೆಯನ್ನು ಅಣಕಿಸುವಂತಿದೆ.

'ಅವಲಂಬಿತರು' ಕಥೆಯ ಶಾರದೆ ತನ್ನ ಮಗುವನ್ನು ನೋಡಿಕೊಳ್ಳಲು ಕರೆದುಕೊಂಡು ಬಂದ ಅಹಲ್ಯಳನ್ನು ನೋಡಿಕೊಳ್ಳುವ ರೀತಿ ವರ್ಗ ಅಸಮಾನತೆಗೆ ಹಿಡಿದ ಕನ್ನಡಿ. ತನ್ನ ಬಡತನದ

ಕಾರಣ ಅಹಲ್ಯೆ ಎಷ್ಟೆಲ್ಲ ಅವಮಾನಕ್ಕೆ ಒಳಗಾಗಬೇಕಾಗುತ್ತದೆ. ಅವಳು ಮಗುವನ್ನು ನೋಡಿಕೊಳ್ಳುವ ಜತೆಗೆ ಮನೆ ಕೆಲಸ ಮಾಡಿದರೂ ಅವಳಿಗೆ ಸಿಗಬೇಕಾದ ಪ್ರತಿಫಲ ಸಿಗುವುದಿಲ್ಲ. ಒಂದು ಹೇರ್‌ಬ್ಯಾಂಡ್ ತೆಗೆದುಕೊಳ್ಳಬೇಕೆಂದರೂ ಅವಳ ಬಳಿ ಹಣ ಇರುವುದಿಲ್ಲ. ಶಾರದಾ, ಅಹಲ್ಯೆಯ ಮೇಲಿನ ಅನುಮಾನದಿಂದ ಬೆಣ್ಣೆ, ಎಣ್ಣೆ, ಹಾಲು, ತುಪ್ಪಗಳನ್ನೆಲ್ಲ ಕಪಾಟನಲ್ಲಿ ಇಟ್ಟು ಬೀಗ ಹಾಕಿಕೊಳ್ಳುವುದು. ತನ್ನ ಮೇಕಪ್ ಸಾಮಗ್ರಿಗಳನ್ನೆಲ್ಲ ಎತ್ತಿಡುವುದು ಬಡವರೆಲ್ಲ ಕಳ್ಳರು ಎಂಬಂತೆ ನಡೆಸಿಕೊಳ್ಳುವ ಶ್ರೀಮಂತರ ಧೋರಣೆಯನ್ನು ತೋರಿಸುತ್ತದೆ. ತಿನ್ನುವುದಕ್ಕೇ ಗತಿಯಿಲ್ಲದ ಅಹಲ್ಯೆಯ ತಾಯಿ "ಉಣಲಿಕ್ಕೊಂದು ಜನವಾದರೂ ಮನೆಯಲ್ಲಿ ಕಡಿಮೆಯಾಯಿತಲ್ಲ" ಎಂದು ಕಳಿಸಿದ್ದಾಳೆ ಎಂಬ ಶಾರದಾಳ ಮಾತು ಅಹಲ್ಯೆಯ ಬಡತನವನ್ನು ವ್ಯಂಗ್ಯ ಮಾಡಿದಂತಿದೆ. ಬಡವರು ಕೇವಲ ಹೊಟ್ಟೆಗಾಗಿ ಅಷ್ಟೊಂದು ದುಡಿದರೂ, ಅದೂ ಸರಿಯಾಗಿ ತುಂಬುವುದಿಲ್ಲ ಎಲ್ಲ ಅನುಕೂಲ ಇದ್ದರೂ ಸ್ವಲ್ಪವೂ ನೆರವಾಗದ ಶ್ರೀಮಂತರು ಬಡತನವನ್ನು ಅಣಕಿಸಲಿಕ್ಕೆ ಮತ್ತು ಬಡತನದ ದುರುಪಯೋಗ ಮಾಡಿಕೊಂಡು ದುಡಿಸಿಕೊಳ್ಳಲಿಕ್ಕೆ ಮುಂದಾಗುತ್ತಾರೆ. ಹುಡುಗಿಯಿಂದ ಚೆನ್ನಾಗಿ ದುಡಿಸಿಕೊಂಡು ಅಹಲ್ಯೆ ದೊಡ್ಡವಳಾದ ತಕ್ಷಣ ಸೆರಗಿನಲ್ಲಿ ಕೆಂಡ ಕಟ್ಟಿಕೊಂಡಂತೆ ಎಂದು ಅವಳನ್ನು ಒಂದಿರುಗಿ ಕಳಿಸಲು ಶಾರದೆ ತಯಾರಾಗುವುದು ಬಡವರೆಲ್ಲ ನಡತೆಗೆಟ್ಟವರು ತಮ್ಮ ಬಡತನದ ಕಾರಣ ಏನು ಬೇಕಾದರೂ ಮಾಡುತ್ತಾರೆ ಎಂಬ ಶ್ರೀಮಂತರ ನಿಲುವನ್ನು ಬಿಂಬಿಸುತ್ತದೆ. ಅಹಲ್ಯೆಯಿಂದ ಬಿಟ್ಟಿ ದುಡಿಸಿಕೊಂಡು ಕೊನೆಗೆ ಎರಡು ಹಳೆಯ ಸೀರೆ ಮಾತ್ರ ಕೊಟ್ಟು ಕಳಿಸುವುದು ಶಾರದೆಯ ಅಮಾನವೀಯ ಮುಖವನ್ನು ತೋರಿಸುತ್ತದೆ. ಬಡವರೆಂದರೆ ಕಳ್ಳರು, ಸುಳ್ಳರು, ನಡತೆಗೆಟ್ಟವರು ಎಂಬಂತೆ ನೋಡುವ ಶ್ರೀಮಂತರಿಗೆ ತಮ್ಮ ಬೆನ್ನು ಕಾಣುವುದಿಲ್ಲ. ಶ್ರೀಮಂತರು ಯಾವ ರೀತಿ ಸಣ್ಣ ವ್ಯಕ್ತಿತ್ವವನ್ನು ಪ್ರದರ್ಶಿಸುತ್ತಾರೆ ಎಂಬುದಕ್ಕೆ ಶಾರದೆಯೇ ಸಾಕ್ಷಿ. ಹಣದಲ್ಲಿ ಶ್ರೀಮಂತರಾದರೂ ಗುಣದಲ್ಲಿ ಮಾತ್ರ ಬಡವರು. ಅಹಲ್ಯೆಯ ದುಡಿಮೆಗೆ ಸಲ್ಲಬೇಕಾದ ಪ್ರತಿಫಲವನ್ನು ಕೊಡದೆ ವಂಚಿಸುವ ಶಾರದೆಗಿಂತ ಬಡತನವಿದ್ದರೂ ದುಡಿದು ತಿನ್ನುವ ಅಹಲ್ಯೆಯೇ ನಿಜವಾದ ಶ್ರೀಮಂತೆ ಎನಿಸುತ್ತದೆ.

'ಚಿಕ್ಕನ ಸತ್ಯಾಗ್ರಹ' ಕಥೆಯ ಚಿಕ್ಕ ತನ್ನ ಬಡತನದ ಕಾರಣ ಶ್ರೀಮಂತ ಪಕ್ಕದ ಮನೆಯವರಿಂದ ದೌರ್ಜನ್ಯಕ್ಕೆ ಒಳಗಾದರೂ ಏನೂ ಮಾಡಲಾರದ ಅಸಹಾಯಕತೆ ಅವಳನ್ನು ಕಟ್ಟಿಹಾಕಿ ದೌರ್ಜನ್ಯವನ್ನು ಸಹಿಸಿಕೊಳ್ಳುವಂತೆ ಮಾಡುತ್ತದೆ. ಶ್ರೀಮಂತರ ದೌರ್ಜನ್ಯದ ವಿರುದ್ಧ ಅವಳ ಪ್ರತಿರೋಧ ಕೇವಲ ಅರಣ್ಯರೋದನವಾಗುತ್ತದೆ. ಚಿಕ್ಕಳ ಮನೆಯ ಪಕ್ಕದಲ್ಲಿ ತುಂಬಾ ವರ್ಷದಿಂದ ಖಾಲಿ ಬಿದ್ದಿದ್ದ ಜಾಗದಲ್ಲಿ ಯರೋ ಶ್ರೀಮಂತರು ಮನೆ ಕಟ್ಟುತ್ತಿರುವುದನ್ನು ಕಂಡು ಚಿಕ್ಕ

ಆಶ್ಚರ್ಯಚಕಿತಳಾಗುವ ಜೊತೆಗೆ ಸಂತೋಷಪಡುತ್ತಾಳೆ. ಕಾರಣ ಅಷ್ಟು ದೊಡ್ಡ ಮನೆಯಲ್ಲಿ ಇರಲು ಬರುವವರಿಗೆ ಆಳು ಕಾಳು ಬೇಕಾಗುತ್ತದೆ. ಇದರಿಂದ ತನಗೆ ಉದ್ಯೋಗ ದೊರೆತಂತಾಗುತ್ತದೆ ಎಂದು ಅವಳ ಎಣಿಕೆ.

ನಿರ್ಮಾಣವಾಗುತ್ತಿರುವ ದೊಡ್ಡ ಮನೆಯ ಜೊತೆ ತನ್ನ ಮನೆಯನ್ನು ಹೋಲಿಕೆ ಮಾಡಿಕೊಳ್ಳುವ ಚಿಕ್ಕ "ಯಂತಾ ದ್ವಡ್ ಬೂತ್ ಮನಿ ಅಂತ್ರಿ! ಯ್ಯೇಸ್. ಯೆಸ್ಟ್ ಲಕ್ಸೊ ಬೇಕೋ ದೇವ್ರೆ! 'ನಾವೂ ಇತ್ತಲೆ! ತಲೆಮಾರಿನಿಂದ. ಮನಿ ಅಂತೇಳಿ. ಎಲ್ಲರೂ ಊರ್ಜಿತ ಆತೋ. ಮನಿ ಕಟ್ರೊ. ನಂಗಿಸ್ನೂ ಅಂಗ್ಯೆ ಅಗ್ಲೊ ಜಾಗನ್ಸ ಅಲ್ಲಾಡ್ಸುಕ್ ಆಯ್ಲಿಲ್ಲೆ. ಅದ್ವಂದ್ ಮನಿಯ? ನಾಪಿತ್ತ್ ಅಂತೇಳಿ ಮನಿ. ನಾಪೀಗ್ ಎದ್ರೆ ಮಠಾನೊ" ಎಂದು ಸ್ವಗತದಲ್ಲಿ ಹೇಳಿಕೊಳ್ಳುವುದು ಬಡವರು ಮತ್ತು ಶ್ರೀಮಂತರ ನಡುವಿನ ಅಗಾಧ ಅಂತರವನ್ನು ತೋರಿಸುತ್ತದೆ. ಚಿಕ್ಕಳಂತಹ ಬಡವರು ಇಂತಹ ಶ್ರೀಮಂತರ ದೊಡ್ಡ ಮನೆ ನೋಡುವುದರಲ್ಲೇ ಸಾರ್ಥಕ್ಯ ಕಂಡುಕೊಳ್ಳಬೇಕು.

ಬಡವರು ಕೇವಲ ಹೊಟ್ಟೆಗಾಗಿಯೇ ಪರದಾಡುವಂತ ಸ್ಥಿತಿಯಲ್ಲಿದ್ದರೆ ಶ್ರೀಮಂತರು ತಮ್ಮ ಶ್ರೀಮಂತಿಕೆಯ ಪ್ರದರ್ಶನಕ್ಕಾಗಿ ಅನಗತ್ಯವಾಗಿ ಹಣವನ್ನು ವ್ಯರ್ಥಮಾಡುತ್ತಾರೆ. ಅವರು ವ್ಯರ್ಥಮಾಡುವ ಹಣದಲ್ಲೇ ಬಡವರು ಆರಾಮವಾಗಿ ಜೀವನ ನಡೆಸಬಹುದು. "ಒಂದ್ ಮೀನಿನ್ ಸಾರ್ ಊಣ್ದೆ ಸ್ವಲ್ಪ್ ಕಾಲೊ ಆಯ್ತೇ?" ಎಂದು ಆಸೆಯಿಂದ ಕಣ್ಣರಳಿಸುವ ಚಿಕ್ಕ ಅಮ್ಮ "ಹೊಸ ಮನೆ ಸಾಮನ್ಯದ್ದಲ್ಲ ದುಡ್ಡು ಕೈಯಲ್ಲಿ ಇದ್ದು ಕಟ್ಟುವವರ ಮನೆ. ಇವತ್ತು ಕಟ್ಟಿದ ಆಯ ಸರಿಯಿಲ್ಲವಂತೆ ಕಂಡಿತೇ, ನಾಳೆ ಅದನ್ನು ಅಳಿದಾಯಿತು, ಹೊಸದಾಗಿ ಕಲ್ಲು ಕಟ್ಟಿಯಾಯಿತು. 'ಯಪ್ಪ ಅವ್ರ್ ಕಟ್ಟಿ ಆಳು ದುಡ್ಡೊಳ್ಗೆ ಸುಮಾರಿನ್ ಒಂದ್ ಮನಿಯೇ ಅತಿದಿತ್ತ್" ಎಂದು ತಾನು ಕೆಲಸ ಮಾಡುವ ಸುವರ್ಣಮ್ಮನ ಜೊತೆ ಹೇಳುವುದು ವರ್ಗ ಅಸಮಾನತೆಯ ಆಳವನ್ನು ಎತ್ತಿ ತೋರಿಸುತ್ತದೆ. ಚಿಕ್ಕಳಿಗೆ ಆಸೆಯಾದರೂ ಮೀನಿನ ಸಾರು ತಿನ್ನಲಿಕ್ಕೇ ಗತಿ ಇಲ್ಲದ ಪರಿಸ್ಥಿತಿಯಲ್ಲಿದ್ದರೆ, ಶ್ರೀಮಂತರು ಹೊಸದಾಗಿ ಕಟ್ಟುತ್ತಿರುವ ಮನೆಯ ಆಯ ಸರಿ ಇಲ್ಲದ ಭಾಗವನ್ನು ನಿರ್ಧಾಕ್ಷಿಣ್ಯವಾಗಿ ಹೊಡೆದು ಹೊಸದಾಗಿ ಕಟ್ಟಲು ಅಷ್ಟೊಂದು ಹಣ ವ್ಯರ್ಥಮಾಡುವುದು ಎಂತಹ ವಿಪರ್ಯಾಸ. ಆದರೆ ಇದು ಪ್ರಸ್ತುತ ಸಮಾಜದ ವಾಸ್ತವ.

ತನ್ನ ಮನೆಯ ಪಕ್ಕ ಶ್ರೀಮಂತರು ಬಂದರೆ ತನಗೆ ಕೆಲಸ ದೊರೆಯುತ್ತದೆ. ಎಂಬ ಸಂತೋಷದಲ್ಲಿದ್ದ ಚಿಕ್ಕನ ಎಣಿಕೆ ತಲೆಕೆಳಗಾಗುತ್ತದೆ. ಅವಳಿಗೆ ಕೆಲಸ ದೊರೆಯುವುದು ಹಾಗಿರಲಿ ಅವಳು ತನ್ನ ಮನೆಯಲ್ಲಿ ಬದುಕುವುದೇ ದುಸ್ತರ ಎಂಬ ಪರಿಸ್ಥಿತಿ ನಿರ್ಮಾಣವಾಗುತ್ತದೆ. ತಮ್ಮ

ಸುಂದರವಾದ. ದೊಡ್ಡ ಮನೆಯ ಪಕ್ಕ ಚಿಕ್ಕಳಂತಹ ಬಡವಳ ಚಿಕ್ಕ ಮನೆ ಇರುವುದು ಅವಮಾನ ಎನಿಸಿ ಹೇಗಾದರೂ ಮಾಡಿ ಚಿಕ್ಕ ಮನೆ ಖಾಲಿ ಮಾಡಿಕೊಂಡು ಹೋಗುವಂತೆ ಮಾಡಬೇಕೆಂದು ಆ ದೊಡ್ಡ ಮನೆಗೆ ಬಂದವರು ಚಿಕ್ಕಳಿಗೆ ಕೊಡುವ ಹಿಂಸೆ ಅಷ್ಟಿಷ್ಟಲ್ಲ. ತಮ್ಮ ಮನೆಯ ಎಂಜಲು, ಕಸ, ಮುಸುರೆ, ಗಲೀಜನ್ನು ಸಮಯಾಸಮಯದ ಗೊಡವೆಯೇ ಇಲ್ಲದೆ ಚಿಕ್ಕಳ ಮನೆಯ ಮೇಲೆ ಬಿಸಾಡುವುದು, ಕೇಳಿದರೆ ಕೋಪಿ ತೋರಿಸಿ 'ಗುಂಡ್ ಹೊಡ್ಡ್ ಒಂದೇ ಪಟ್ಟಿಗ್ ಹೊಟ್ಟೇ ಇಲ್ಲೆ ಮಾಡ್ಸ್ವೆ, ನಸ್ರಾಣಿಗ್ಳ್. ಆಗ್ದಿರೆ ಜಾಗ ಬಿಟ್ ಎದ್ದ್ ನಡೀನಿ? ಅಂತ ಹೆದುರಿಸಿ ಬಾಯಿ ಮುಚ್ಚಿಸುವುದು, ಶ್ರೀಮಂತರ ದರ್ಪ, ಬಡವರ ಮೇಲಿನ ವರ ದೌರ್ಜನ್ಯದ ತೀವ್ರತೆಯನ್ನು ತೋರಿಸುತ್ತದೆ. ಅಷ್ಟೇ ಅಲ್ಲ ಬಡವರನ್ನು ಕಂಡರೇ ಶ್ರೀಮಂತರು ಅಸಹ್ಯ ಪಟ್ಟುಕೊಳ್ಳುತ್ತಾರೆ. ಅವರ ದೃಷ್ಟಿಯಲ್ಲಿ ಬಡವರು ಮನುಷ್ಯರೇ ಅಲ್ಲ ಎಂಬಂತೆ ನಿಕೃಷ್ಟವಾಗಿ ನೋಡುತ್ತಾರೆ. ಚಿಕ್ಕ ಸುವರ್ಣಮ್ಮನ ಜೊತೆ 'ನಮ್ ಕಂಡ್ರೇ ಅವ್ರ ಮನೀ ಹೆಂಗಸ್ರಿಗ್ ಸಮೆತ ಅಸಯ್ಯ ಅಂಬ್ರ್, ನನ್ ಗಂಡ ಕೆಮ್ಮಿರ್ ಅಸಯ್ಯ ಅಂಬ್ರ್, ನನ್ ಮಗ ಕುಡ್ಕಂಡ್ ಬಂದ್ರ ಅಸಯ್ಯ ಅಂಬ್ರ್... ದ್ವಾಡ್ಡ್ ಕುಡ್ರೆ ಅಸಯ್ಯ ಇಲ್ಯ ಅಮ್ಮ, ಅವ್ರ ಹಾಂಗೆ, ಹ್ಲೂಂ?... ಎಂದು ಹೇಳುವುದು ಶ್ರೀಮಂತರ ಸಣ್ಣತನವನ್ನು ಎತ್ತಿ ಹಿಡಿಯುತ್ತದೆ. ತಾವು ಏನು ಮಾಡಿದರೂ ತಪ್ಪಲ್ಲ. ಅದು ಅಂತಸ್ತು (ಸ್ಟೇಟಸ್) ನಿಸಿಕೊಳ್ಳುತ್ತದೆ. ಆದರೆ ಬಡವರ ವಿಷಯದಲ್ಲಿ ಅಸಹ್ಯ ಎನಿಸಿಕೊಳ್ಳುತ್ತದೆ.

ಶ್ರೀಮಂತರು ಶ್ರೀಮಂತರಾಗುವುದೇ ಬಡವರನ್ನು ಶೋಷಣೆಮಾಡುವ ಮೂಲಕ. ನ್ಯಾಯವಾಗಿ ನಡೆದುಕೊಳ್ಳದೆ ಅನ್ಯಾಯದ ಮಾರ್ಗದಲ್ಲಿ ನಡೆದುಕೊಳ್ಳುವ ಮೂಲಕ. ಚಿಕ್ಕ ಆ ಜಾಗದಲ್ಲಿ ಮನೆ ಕಟ್ಟಿ ಸೇರಿಕೊಂಡ ಕಾಲದಲ್ಲಿ ಆ ಜಾಗಕ್ಕೆ ಮೂರು ಕಾಸಿನ ಬೆಲೆ ಇರಲಿಲ್ಲ ಈಗ ಆ ಜಾಗಕ್ಕೆ ಒಳ್ಳೆಯ ಬೆಲೆ ಬಂದಿದ್ದು ಈ ಗತಿಗೆಟ್ಟ ಜನ ಇಷ್ಟು ಒಳ್ಳೆಯ ಜಾಗದಲ್ಲಿ ಬಂದು ಸೇರಿಕೊಂಡಿವೆಯಲ್ಲ. ಹೇಗಾದರೂ ಮಾಡಿ ಅವರನ್ನು ಇಲ್ಲಿಂದ ಒಕ್ಕಲೆಬ್ಬಿಸಿ ಆ ಜಾಗವನ್ನು ಲಪಟಾಯಿಸಬೇಕೆಂಬ ಹುನ್ನಾರ ಅವರದು. ಅಷ್ಟೊಂದು ಶ್ರೀಮಂತಿಕೆ ಇದ್ದರೂ ನ್ಯಾಯವಾಗಿ ಆ ಜಾಗಕ್ಕೆ ತಗಲುವ ವೆಚ್ಚ ನೀಡಿ ಕೊಂಡುಕೊಳ್ಳದೆ ಈ ರೀತಿ ಅನ್ಯಾಯದ ಮಾರ್ಗ ಹಿಡಿಯುವುದು ಶ್ರೀಮಂತರ ನೀಚತನವನ್ನು ತೋರಿಸುತ್ತದೆ. ಈ ರೀತಿ ಅನೇಕ ಬಡವರ ಮನೆಗಳನ್ನು ಹಾಳು ಮಾಡಿಯೇ ಶ್ರೀಮಂತರ ಸೌಧ ಮೇಲೇಳುವುದು. ಬಡವರ ಕಣ್ಣೀರು ಶ್ರೀಮಂತರ ಪಾಲಿನ ಪನ್ನೀರು ಎಂದರೂ ತಪ್ಪಾಗಲಾರದು.

ಇಷ್ಟೆಲ್ಲ ದೌರ್ಜನ್ಯಕ್ಕೆ ಒಳಗಾದರೂ ಚಿಕ್ಕ ಏನು ಮಾಡುವ ಸ್ಥಿತಿಯಲ್ಲಿ ಇಲ್ಲ ಕಾರಣ ಅವಳ ಬಡತನ. ಅವರು ಮಾಡುತ್ತಿರುವ ಅನ್ಯಾಯದ ವಿರುದ್ಧ ಕೋರ್ಟಿಗೆ ಹೋಗುವ ಸಾಮರ್ಥ್ಯ

ಚಿಕ್ಕಳಿಗಿಲ್ಲ. ಅನಾರೋಗ್ಯದಿಂದ ನರಳುತ್ತಿರುವ ಗಂಡ, ಕುಡುಕ ಮಗನನ್ನು ಕಟ್ಟಿಕೊಂಡು ಪಡುತ್ತಿರುವ ಪಾಡು ಚಿಕ್ಕಳಿಗಷ್ಟೇ ಗೊತ್ತು. ಬಡವರು ತಮ್ಮ ಸಂಪಾದನೆಯನ್ನೆಲ್ಲ ದುಶ್ಚಟಗಳಿಗೆ ಹಾಳುಮಾಡುವುದು ಕೂಡ ಅವರ ದುಃಸ್ಥಿತಿಗೆ ಪ್ರಮುಖ ಕಾರಣ. ಇಂತಹ ಸ್ಥಿತಿಯಲ್ಲಿ ಚಿಕ್ಕ ಕೋರ್ಟಿಗೆ ಹೋಗುವ ಮಾತು ದೂರವೇ ಸರಿ. "ಕೋರ್ಟಿಗೆ ಹೋಗಲು ತನ್ನ ಹತ್ತಿರ ಮೂರು ಕಾಸಿಲ್ಲ. ಫಿರ್ಯಾದಿ ಮಾಡಲಿಕ್ಕಾದರೂ ಜನ ಬೇಕಲ್ಲ. ಅದಕ್ಕೆ ಗೊತ್ತು ಅದೆಲ್ಲ. ಅದಕ್ಕೆ ಈ ಹುನ್ನಾರ" ಎನ್ನುವ ಚಿಕ್ಕಳ ಮಾತು ಬಡವರ ಅಸಹಾಯಕತೆಯನ್ನು, ಅದರ ಲಾಭ ಪಡೆದುಕೊಳ್ಳಲು ಹವಣಿಸುವ ಶ್ರೀಮಂತರ ಕುಯುಕ್ತಿಯನ್ನು ಎತ್ತಿ ತೋರಿಸುತ್ತದೆ. ವರ್ಗ ಅಸಮಾನತೆಯ ಕ್ರೂರ ಮುಖವನ್ನು ಚಿಕ್ಕಳ ದುಃಸ್ಥಿತಿ ಗೋಚರವಾಗುವಂತೆ ಮಾಡುತ್ತದೆ.

ಬಡವರ ಕಷ್ಟ, ನೋವುಗಳನ್ನು, ಅವರ ಮೇಲೆ ನಡೆಯುವ ದೌರ್ಜನ್ಯವನ್ನು ಕೇಳುವವರೇ ಇಲ್ಲ ಎಂದ ಮೇಲೆ ಇನ್ನು ಅವರ ಪರ ಹೋರಾಡುವವರು ಹುಡುಕಿದರೂ ಸಿಗುವುದಿಲ್ಲ ತನ್ನ ಮೇಲಿನ ದೌರ್ಜನ್ಯವನ್ನು ತಾನು ಕೆಲಸಮಾಡುತ್ತಿದ್ದ ಮನೆಯೊಡತಿ ಸುವರ್ಣಮ್ಮಳ ಬಳಿ ಹೇಳಿಕೊಂಡು ಚಿಕ್ಕ ರೋದಿಸತೊಡಗಿದಾಗ ಅವರು "ನೀ ಹೀಂಗ್ ಹುಯ್ಲೆಬ್ಸ್ ಬೇಡ; ಯಾರೋ ಸತ್ರಂಬಂಗೆ. ಆಚಿಂದ್ ಕೇಂಬವ್ರಿಗೆ ನಾನೇ ಯಂತದೋ ಮಾಡ್ದೊ ಅಂಬಂಗ್ ಕಾಂಬು. ಸಾಕ್ ಬೊಬ್ಬಿ ಹೊಡದ್, ಅಬ್ಬಿ ಮಗ್ಳ್ ಕೆಲ್ಸ ಕಾಣೀ" ಎಂದು ಎದ್ದು ಒಳಗೆ ಹೋಗಿ ಬಾಗಿಲು ಹಾಕಿಕೊಂಡೂ ಪೇಪರ್ ಓದತೊಡಗುತ್ತಾರೆ. ಇದು ಬಡವರ ಬಗ್ಗೆ, ಅವರ ನೋವಿನ ಬಗ್ಗೆ ಶ್ರೀಮಂತರ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತದೆ. ಚಿಕ್ಕ ತನ್ನ ದುಃಸ್ಥಿತಿಗಾಗಿ ಹೊರಗಡೆ ರೋದಿಸುತ್ತಿದ್ದರೆ ಸುವರ್ಣಮ್ಮ ಒಳಗೆ ನಿಶ್ಚಿಂತೆಯಿಂದ ತನಗೆ ಏನೂ ಸಂಬಂಧವಿಲ್ಲದವರಂತೆ ಪೇಪರು ಓದುತ್ತಾ ಕುಳಿತುಕೊಳ್ಳುತ್ತಾರೆ. ಬಡವರು ಬದುಕಲು ಪ್ರತಿಕ್ಷಣ ಹೋರಾಟ ನಡೆಸಿದರೆ, ಶ್ರೀಮಂತರು ಆರಾಮವಾಗಿ ಜೀವನ ನಡೆಸುತ್ತಾರೆ. ಚಿಕ್ಕಳ ಕಷ್ಟವನ್ನು ಕಟ್ಟಿಕೊಂಡು ಅವರಿಗೆ ಏನೂ ಆಗಬೇಕಿಲ್ಲ. ಶ್ರೀಮಂತರು, ಶ್ರೀಮಂತರ ಪರವೇ ಹೊರತು, ಅವರು ಬಡವರ ಪರ ವಹಿಸಲು ಎಂದಿಗೂ ಸಾಧ್ಯವಿಲ್ಲ. ಸುವರ್ಣಮ್ಮ ತನ್ನ ಮನೆಯ ಬಾಗಿಲು ಮುಚ್ಚಿಕೊಳ್ಳುವುದು ಬಡವರ ಕಷ್ಟವನ್ನು, ಅವರ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ಕಂಡೂ ಕಾಣದಂತೆ, ಕೇಳಿಯೂ ಕೇಳದಂತೆ ವರ್ತಿಸುವ ಸಮಾಜದ ಧೋರಣೆಯನ್ನು ತೋರಿಸುತ್ತದೆ. ಸಮಾಜದಲ್ಲಿ ಚಿಕ್ಕಳಂತವರು ಎಷ್ಟು ಜನವೋ? ಅವರ ನೋವಿನ ಕೂಗು ಹಣದ ಮದದಲ್ಲಿ ಮರೆಯುವ ಶ್ರೀಮಂತರಿಗೆ ಎಂದೂ ಕೇಳುವುದೇ ಇಲ್ಲ.

"ಜಗತ್ತಿನಲ್ಲಿ ಮೂರು ಪಂಗಡಗಳಿವೆ. ಗುಣದಿಂದ ವ್ಯಕ್ತಿತ್ವ ಅಳೆಯುವವರು. ವಿದ್ಯೆಯಿಂದ ಅಳೆಯುವವರು. ಹಣದಿಂದ ಅಳೆದು ಮಣೆ ಹಾಕುವವರು. ಮೂರನೇ ಪಂಗಡದಷ್ಟು ವಿಷಕಾರಿ ಇನ್ನಿಲ್ಲ"[1] ಎಂಬ ಮಾತು ವರ್ಗ ಅಸಮಾನತೆ ಎಂಬುದು ಎಷ್ಟು ಅಪಾಯಕಾರಿ ಎಂಬುದನ್ನು ಪರಿಣಾಮಕಾರಿಯಾಗಿ ವ್ಯಕ್ತಪಡಿಸುತ್ತದೆ. ಬಡವರಿಗೆ ತಾವು ಬಡವರು ಎಂಬ ಅರಿವಾಗುವುದೇ ಇಂತಹ ಜನರಿಂದ. ಅವರ ಬಡತನವನ್ನು ಎತ್ತಿ ಎತ್ತಿ ತೋರಿಸಿ ಬಡವರು ಮಾನಸಿಕವಾಗಿ ಕುಗ್ಗಿ ಹೋಗುವಂತೆ, ಕೀಳರಿಮೆ ಭಾವನೆಯಿಂದ ನರಳುವಂತೆ ಮಾಡುತ್ತಾರೆ. ಕೆಲವು ಸಾರಿ ಇದು ಪ್ರಾಣಾಂತಿಕವಾಗಿಯೂ ಮಾರ್ಪಡುವ ಸಾಧ್ಯತೆ ಇರುತ್ತದೆ. ಮದುವೆಯಂತಹ ಸಮಾರಂಭಗಳಲ್ಲಂತೂ ಈ ಅಸಮಾನತೆ ಎದ್ದು ಕಾಣುತ್ತದೆ. ಅವರು ಉಡುವ ಸೀರೆ, ತೊಡುವ ಒಡವೆಯ ಆಧಾರದ ಮೇಲೆ ಅವರ ಸ್ಥಾನಮಾನವನ್ನು ಅಳೆಯಲಾಗುತ್ತದೆ. ವ್ಯಕ್ತಿಯ ಗುಣಕ್ಕಿಂತ ಅವರ ಅಂತಸ್ತಿಗೆ ಸಮಾಜದಲ್ಲಿ ಬೆಲೆ ಹೆಚ್ಚು. ಅವರ ಅಂತಸ್ತಿಗೆ ಅನುಗುಣವಾಗಿ ಅವರಿಗೆ ಗೌರವ ದಕ್ಕುತ್ತದೆ.

'ಸಮಾಜಶಾಸ್ತ್ರಜ್ಞೆಯ ಟಿಪ್ಪಣಿಗೆ' ಕಥೆಯಲ್ಲಿ ವಾಗತ್ತೆಯ ಮೊಮ್ಮಗಳ ಮದುವೆಯ ಸಮಾರಂಭದಲ್ಲಿ ಸೇರಿದ ವಿಧವೆಯರಾದ ಮುತ್ತತ್ತೆ, ಕಾಟಜ್ಜಿ, ಹೆಬ್ಬಾಗಿಲಜ್ಜಿ, ಸರಸಜ್ಜಿಯರು ಹೆಚ್ಚು ಕಡಿಮೆ ಒಂದೇ ಬಣ್ಣದ ಸೀರೆಯುಟ್ಟಿದ್ದರೂ "ಸೀರೆಯ ನೂಲಿನಲ್ಲಿ ವ್ಯತ್ಯಾಸವಿದೆ. ಸುಮಾರು ಎಂಭತ್ತು ನಂಬರಿನ ನೂಲಿನಿಂದ ಹಿಡಿದು ಬಹಳ ಮೆತ್ತಗಿನ ಸೀರೆಯುಟ್ಟವರೂ ಇದ್ದಾರೆ. ರೇಷ್ಮೆ ಸೀರೆಯನ್ನೂ ಉಟ್ಟವರಿದ್ದಾರೆ. ರೇಷ್ಮೆಯಲ್ಲಿ ಹೆಬ್ಬಟ್ಟಗಲಾ ಕಿರುಬೆಟ್ಟಗಲದ ಜರಿ ಅಂಚಿನ ವ್ಯತ್ಯಾಸದಲ್ಲೇ ಅಂತಸ್ತುಗಳ ಹೆಚ್ಚು ಕಡಿಮೆ ಸೂಚಿಸುವವರೂ ಇದ್ದಾರೆ." ಎಂಬಲ್ಲಿ ಕೇವಲ ಉಟ್ಟ ಸೀರೆಯಿಂದಲೇ ಅಂತಸ್ತು ಹೇಗೆ ನಿರ್ಧಾರವಾಗುತ್ತದೆ ಎಂಬುದು ಗೋಚರವಾಗುತ್ತದೆ. ಹಾಗೆಯೇ ಮದುವೆಗೆ ಬಂದ ಹುಡುಗಿಯರು ಧರಿಸಿರುವ ಒಡವೆ, ವಸ್ತ್ರಗಳನ್ನು ನೋಡಿ ಅವರ ಮದುವೆಯೂ ನಿರ್ಧಾರವಾಗುವುದನ್ನು ಕಾಣುತ್ತೇವೆ. ಇಲ್ಲಿ ಹುಡುಗಿಗಿಂತ ಅವಳು ಧರಿಸಿರುವ ಒಡವೆ, ವಸ್ತ್ರಗಳಿಗೇ ಬೆಲೆ ಹೆಚ್ಚು.

ಮದುವೆ ಎಂಬುದು ಸಂಬಂಧಗಳನ್ನು ಬೆಸೆಯುವ ಸಮಾರಂಭವಾದರೂ, ಅಂತಸ್ತನ್ನು ಪ್ರತಿಬಿಂಬಿಸುವುದೇ ಹೆಚ್ಚು. ಮದುವೆಗೆ ಬಂದ ಬಂಧು ಬಾಂಧವರಿಗೆ ದಕ್ಕುವ ಮರ್ಯಾದೆಯೂ ಅವರ ಅಂತಸ್ತನ್ನು ಅವಲಂಬಿಸಿರುತ್ತದೆ. ವಾಗತ್ತೆಯ ಮಗಳು, ಅಳಿಯ ಹಾಗೂ ಮಧುಮಗಳು "ತಾವು ಕೊಡಬೇಕೆಂದು ನಿರ್ಧರಿಸಿಕೊಂಡವರಿಗೆಲ್ಲ ಆಯಾಯ ಬಾಂಧವ್ಯದ ಬೆಸುಗೆ ಹಾಗೂ

---

[1] ಅಲೆಗಳಲ್ಲಿ ಅಂತರಂಗ, ಮರ, ಗಿಡ, ಬಳ್ಳಿ, ಮದುವೆ-ಹೆಣ್ಣು-ಸೀರೆ ಪು.ಸಂ.19,20

ತೆಗೆದುಕೊಳ್ಳುವವರ ವೈಯಕ್ತಿಕ ಅಂತಸ್ತಿಗೆ ತಕ್ಕಂತೆ ತಂದೆ ಆರಿಸಿ ತನ್ನ ಕೈಯಲ್ಲಿರಿಸಿದ ಸೀರೆಯನ್ನೋ, ರವಿಕೆ ಕಣವನ್ನೋ ಕೊಟ್ಟು" ನಮಸ್ಕರಿಸುವುದು ಇದನ್ನು ಸೂಚಿಸುತ್ತದೆ. ಮದುವೆಗೆ ಬಂದವರಿಗೆ ಸೀರೆ, ರವಿಕೆ ನೀಡುವುದು ಅವರಿಗೆ ಗೌರವ ಸೂಚಿಸಲು ಆದರೆ ಅವರ ಅಂತಸ್ತಿಗೆ ಅನುಗುಣವಾಗಿ ರವಿಕೆ, ಸೀರೆ ನೀಡುವುದು, ಗೌರವ ಕೊಡುತ್ತಿರುವುದು ವ್ಯಕ್ತಿಗಲ್ಲ ಅವರ ಅಂತಸ್ತಿಗೆ ಎಂಬುದನ್ನು ತೋರಿಸುತ್ತದೆ. ಆ ಮೂಲಕ ಸಂತೋಷದ ಸಮಾರಂಭದಲ್ಲೂ ಮೇಲು ಕೀಳಿನ ಭಾವನೆ ಬಡಿದೆಬ್ಬಿಸಿ ದುಃಖದ ಛಾಯೆ ಮೂಡುವಂತೆ ಮಾಡಲಾಗುತ್ತದೆ. ಕಡಿಮೆ ಅಂತಸ್ತಿನವರು ಕೀಳರಿಮೆ ಭಾವನೆಯಿಂದ ನರಳುವಂತೆ, ಶ್ರೀಮಂತರು ತಮ್ಮ ಅಂತಸ್ತಿನ ಬಗ್ಗೆ ಹೆಮ್ಮೆ ಪಡುವಂತೆ ಮಾಡಿ ಆ ಸಮಾರಂಭದ ಅರ್ಥವನ್ನೇ ಬದಲಾಗುವಂತೆ ಮಾಡಲಾಗುತ್ತದೆ. ದೂರದ ಸಂಬಂಧಿಯಾದರೂ ಶ್ರೀಮಂತೆಯಾದ ಸುಬ್ಬಕ್ಕನಿಗೆ ಭರ್ಜರಿ ರೇಷ್ಮೆ ಸೀರೆಕೊಟ್ಟು ಅತಿ ಹತ್ತಿರದ ಸಂಬಂಧಿಯಾದ ಕಾಟಜ್ಜಿಗೆ ಸೀರೆ ಕೊಡದೆ ಹೋಗುವುದು ಬಾಂಧವ್ಯವನ್ನು ನಿರ್ಧರಿಸುವುದು ಅಂತಸ್ತು ಎಂಬುದನ್ನು ಎತ್ತಿ ಹಿಡಿಯುತ್ತದೆ. ತನಗಾದ ಅವಮಾನಕ್ಕೆ ಕಾಟಜ್ಜಿ "ಅವನ ಕಣ್ಣಿಗೆ ನಾನು ಬೀಳುವುದು ಹೇಗೆ? ನನ್ನಲ್ಲೇನುಂಟು ಗಂಟು? ಇರುವುದು ಕಾಲು ಗಂಟು ಕೈ ಗಂಟು ಮಾತ್ರ ಕೇಳಿಲ್ಲವೇ ಗಾದೆ? ಸರಿ ಸರಿ ಇದ್ದರೆ ಪರಿಪರಿ ನೆಂಟರು?... ಎಂದು ನೊಂದು ನುಡಿಯುವಲ್ಲಿ ವರ್ಗ ಅಸಮಾನತೆ ಸಂಬಂಧವನ್ನು ನಿರ್ಧರಿಸುತ್ತದೆ ಎಂಬುದು ಗೋಚರವಾಗುತ್ತದೆ.

ಹೆಣ್ಣಿನ ಮದುವೆಯನ್ನು ನಿರ್ಧರಿಸುವಲ್ಲೂ ಅಂತಸ್ತು ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉತ್ತಮ ಅಂತಸ್ತಿನ ಮನೆಯ ಹುಡುಗಿಯಾದರೆ ಮದುವೆ ಸುಲಭ. ಆ ಹೆಣ್ಣಿನ ಕೊರತೆಗಳನ್ನೆಲ್ಲ ಅಂತಸ್ತು ಮುಚ್ಚಿಹಾಕುತ್ತದೆ. ಆದರೆ ಬಡ ಹುಡುಗಿಯಾದರೆ ಆಕೆ ಎಷ್ಟೇ ಸುಂದರವಾಗಿದ್ದರೂ, ಜಾಣೆಯಾದರೂ, ಯೋಗ್ಯಳಾದದರೂ ಮದುವೆಯಾಗುವುದು ಕಷ್ಟವೇ. ಹುಡುಗಿಯನ್ನ ನೋಡುವ ಬದಲು ಅವಳು ಧರಿಸಿರುವ ಒಡವೆ, ವಸ್ತ್ರಗಳನ್ನು ನೋಡಲಾಗುತ್ತದೆ. ಹುಡುಗಿಗಿಂತ ಅವಳ ಅಂತಸ್ತಿಗೆ ಮಾನ್ಯತೆ. 'ಪುಟ್ಟಮ್ಮತ್ತೆ ಮತ್ತು ಮೊಮ್ಮಗಳು' ಕಥೆಯ ಪುಟ್ಟಮ್ಮತ್ತೆಯ ಮೊಮ್ಮಗಳು ಕಮಲಾವತಿ ರಂಗಪ್ಪಯ್ಯನ ಮಗಳು ಸೌದಾಮಿನಿಯ ಮದುವೆಯಲ್ಲಿ ಚುರುಕಿನಿಂದ ಓಡಾಡಿಕೊಂಡಿದ್ದನ್ನು ನೋಡಿ "ಯಾರು ಆ ಹೆಣ್ಣು? ಎಂದು ಕೇಳಿದವರು ಮುಂದಿನ ಆಸ್ಥೆ ತೋರಿಸಲಾರರು. ಖಾಲಿ ಹೆಣ್ಣು ಮಾತ್ರವೆಂದ ಮೇಲೆ, ಹಿಂದೆಮುಂದೆ ಆಧಾರವೋ ಚಿನ್ನವೋ ಅಂತಸ್ತೋ ಇಲ್ಲದ ಮೇಲೆ ಖಾಲಿ ಸಂಬಂಧವನ್ನೇ ಇಷ್ಟಪಟ್ಟಾರು ಹೊರತು ಮದುವೆಯ ಬಂಧನವನ್ನು ಕೇಳುವವರು ಯಾರು" ಎಂಬಲ್ಲಿ ಇದನ್ನು ಗುರುತಿಸಬಹುದು. ಕಮಲಾವತಿಯ ಯೋಗ್ಯತೆಗಿಂತ ಅಂತಸ್ತು ಮುಖ್ಯ. ಅದಿಲ್ಲದಿದ್ದ ಮೇಲೆ ಎಷ್ಟೇ ಯೋಗ್ಯರಾಗಿದ್ದರೂ ಅಷ್ಟೆ, ಲೆಕ್ಕಕ್ಕೆ

ಬರುವುದಿಲ್ಲ. ರಂಗಪ್ಪಯ್ಯನ ಮಗಳು ಸೌದಾಮಿನಿ ಯಾವ ರೀತಿಯಿಂದಲೂ ಕಮಲಾವತಿಗೆ ಸಾಟಿ ಇಲ್ಲದಿದ್ದರೂ ತನ್ನ ಅಂತಸ್ತಿನ ಕಾರಣ ಒಳ್ಳೆಯ ಹುಡುಗನನ್ನೇ ಮದುವೆಯಾಗುತ್ತಾಳೆ. ಆದರೆ ಬಡವಳಾದ ಕಾರಣ ಕಮಲಾವತಿಗೆ ಆ ಭಾಗ್ಯವಿಲ್ಲ.

ತನ್ನ ಬಡತನದ ಕಾರಣ ತನ್ನೆಲ್ಲ ಆಸೆ ಆಕಾಂಕ್ಷೆಗಳನ್ನು ಕೊಂದುಕೊಳ್ಳಬೇಕಾಗಿ ಬಂದ ಕಮಲಾವತಿ ತನ್ನ ಓರಗೆಯ ಇತರ ಹುಡುಗಿಯರೊಂದಿಗೆ ತನ್ನ ಸ್ಥಿತಿಯನ್ನು ಹೋಲಿಸಿಕೊಳ್ಳುತ್ತಾ "ಅಲ್ಲಿದ್ದ ಹುಡುಗಿಯರಿಗೂ ತನಗೂ ಯಾವ ಸಂಬಂಧವಿಲ್ಲ. ತನಗವರು ಅರ್ಥವೇ ಆಗದ ಬೆರಗು, ಅವರೆದುರು ತಾನೂ ದೊಣ್ಣೆಗೆ ನಿಂತಂತಾಗುತ್ತಿದೆ... ಅವರಿಗೂ ಬಹುಶಃ ತಾನು ಅರ್ಥವಾಗುವುದಿಲ್ಲ. ಆದರೆ ಅವರ ಕಣ್ಣಲ್ಲಿ ಬೆರಗಿಲ್ಲ. ಹಸಿವಿನ ಬಿಸಿ ಅವರಿಗೆ ಬೇಡ. ಅವರಿಗೂ ಕಷ್ಟಗಳಿರಬಹುದು. ಆದರೆ ಅವರ ಕಷ್ಟಗಳ ಎತ್ತರ ಬೇರೆಯೇ. ತನಗಿರುವಂತೆ ಹೊಗೆ ಗೂಡಿನ ಉಸಿರುಗಟ್ಟಿಸುವ ಕಷ್ಟ ಅವರಿಗಿಲ್ಲ" ಎಂದು ನೊಂದುಕೊಳ್ಳುತ್ತಾಳೆ. ವರ್ಗ ಅಸಮಾನತೆ ಎಂಬುದು ಅರಳುವ ಮನಸ್ಸನ್ನು ಮುದುಡುವಂತೆ ಮಾಡುತ್ತದೆ. ಓದುವ, ಆಡುವ, ನಲಿಯುವ ವಯಸ್ಸಿನಲ್ಲಿ ಇನ್ನೊಬ್ಬರ ಮನೆಯ ಜೀತಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಓದು, ಬರಹ, ಆಟ, ನಗು, ಆಸೆ, ಕನಸು ಎಲ್ಲ ಶ್ರೀಮಂತರ ಪಾಲಿಗಷ್ಟೆ.

ಅಸಮಾನತೆ ಎಂಬುದು ವ್ಯಾಪಕವಾಗಿ ಹರಡಿದ್ದು, ಎಲ್ಲ ವಿಷಯಗಳಲ್ಲೂ ಕಾಣಬಹುದು. ಬಡವಳಾದ ಕಾರಣ ಕಮಲಾವತಿ ಮದುವೆ ಮನೆಯಲ್ಲಿ ಶರಬತ್ತು ಲೋಟ ಹೆಕ್ಕುವುದು, ಎಂಜಲೆಲೆ ಎಳೆಯುವುದು, ಎಂಜಲು ಬಳಿಯುವುದು ಇಂತಹ ತಾ... ಬಾ... ಕೆಲಸಗಳನ್ನಷ್ಟೇ ಮಾಡಬೇಕಾಗುತ್ತದೆ. ಆದರೆ "ಘನ ಕೆಲಸಗಳಿಗೆಲ್ಲ ಅಂದಿಗರಿದ್ದಾರೆ. ಕಮಲಾವತಿಗೆ ಆ ಪಟ್ಟ ಬಿಟ್ಟುಕೊಡರು." ಮಾಡುವ ಕೆಲಸವನ್ನೂ ಅಂತಸ್ತು ನಿರ್ಧರಿಸುತ್ತದೆ ಎಂದರೆ ವರ್ಗ ಅಸಮಾನತೆ ಎಷ್ಟು ವ್ಯಾಪಕವಾಗಿದೆ ಎಂಬುದನ್ನು ಅರಿಯಬಹುದು.

ಶ್ರೀಮಂತಿಕೆ ಎಂಬುದು ವ್ಯಕ್ತಿಯ ಸ್ಥಾನಮಾನವನ್ನು ನಿರ್ಧರಿಸುತ್ತದೆ. ತಾವು ಶ್ರೀಮಂತರಲ್ಲದಿದ್ದರೂ, ಶ್ರೀಮಂತರ ಸಂಬಂಧಿಕರೆಂದು ಹೇಳಿಕೊಳ್ಳುವ ಮೂಲಕ ತಮ್ಮ ಸ್ಥಾನಮಾನವನ್ನು ಹೆಚ್ಚಿಸಿಕೊಳ್ಳಲು ನೋಡುವ ಚಪಲವನ್ನು ಕೆಲವರಲ್ಲಿ ಕಾಣಬಹುದು. 'ಬಾಬುಲಿ, ತಾಯಿ ಮತು ನಸೀಬು' ಕಥೆಯ ಬಾಬುಲಿ ತಾಯಿ ತನ್ನ ಬಡತನವನ್ನು ಮುಚ್ಚಿಟ್ಟುಕೊಳ್ಳಲು ಬೊಂಬಾಯಿಯಲ್ಲಿರುವ ತನ್ನ ಸಂಬಂಧಿಕರೆಲ್ಲ ದೊಡ್ಡವರು, ದೊಡ್ಡ ಕೆಲಸದಲ್ಲಿರುವವರು, ನಮಗೆ ಹಣ ಬೇಕು ಎಂದರೆ ಈಗಲೇ ಕಳಿಸಿಬಿಡುತ್ತಾರೆ. "ಆದರೆ ನಾವೇ ಕೇಳುವುದಿಲ್ಲ." "ಅಷ್ಟೇ ಅಲ್ಲ

ತಾನು ತನ್ನ ಮಗಳು ಈಗ ಬರುತ್ತೇನೆ ಅಂತ ಹೇಳಿದರೆ ಸಾಕು ವಿಮಾನದ ಟಿಕೇಟು ಕೊಟ್ಟು ಕರೆಸಿಕೊಳ್ಳುವಷ್ಟು ಶ್ರೀಮಂತರು ಮತ್ತು ಬೇಕಾದವರು ಬೊಂಬಯಿಯಲ್ಲಿ ಇದ್ದಾರೆ ಎಂಬುದೇ ತಮ್ಮ ಶ್ರೀಮಂತಿಕೆ" ಎಂಬಂತೆ ಹೇಳಿಕೊಳ್ಳುವುದು ಇದನ್ನು ತೋರಿಸುತ್ತದೆ. ಒಟ್ಟನಲ್ಲಿ ಅಂತಸ್ತು ವ್ಯಕ್ತಿಯ ಘನತೆಯನ್ನು ಎತ್ತಿ ಹಿಡಿಯುವ ಸಾಧನವಾಗಿದೆ. ಆದಕ್ಕಾಗಿ ಸಮಾಜದಲ್ಲಿ ಪ್ರತಿಯೊಬ್ಬರೂ ಹಂಬಲಿಸುವುದನ್ನು ಕಾಣುತ್ತೇವೆ. ವ್ಯಕ್ತಿಯ ವ್ಯಕ್ತಿತ್ವಕ್ಕಿಂತ ಅಂತಸ್ತಿಗೆ ಬೆಲೆ ಎಂಬಂತಾಗಿದೆ. ಈ ಅಂತಸ್ತು ಸಮಾಜವನ್ನು ಶ್ರೀಮಂತ, ಬಡವ ಎಂದು ಒಡೆಯುವಂತೆ ಮಾಡಿರುವುದು ದೊಡ್ಡ ದುರಂತವಾಗಿದೆ.

ಅಸಮಾನತೆ ಎಂಬುದು ಇಂದು ಸಮಾಜದ ಲಕ್ಷಣವೇನೋ ಎಂಬಷ್ಟು ವ್ಯಾಪಕವಾಗಿ ಬಿಟ್ಟಿದೆ. ಲಿಂಗ, ಆರ್ಥಿಕ, ಜಾತಿಯ ಅಸಮಾನತೆಯ ಕಾರಣದಿಂದ ಇಂದು ಮಾನವ ಸಮಾಜ ಒಡೆದು ಹೋಗಿರುವುದು, ಒಬ್ಬರು ಇನ್ನೊಬ್ಬರಿಂದ ಶೋಷಣೆಗೆ ಒಳಗಾಗಿ ನರಳುತ್ತಿರುವುದು ಸಾಮಾನ್ಯ ಸಂಗತಿಯಾಗಿ ಬಿಟ್ಟಿದೆ. ಅಸಮಾನತೆ ಎಂಬುದು ಮಾನವ ಕುಲಕ್ಕೆ ಅಂಟಿದ ಕಳಂಕವಾಗಿದೆ ಎಂದೇ ಹೇಳಬಹುದು.

ಉಪಸಂಹಾರ

ತಮ್ಮ ಸೂಕ್ಷ್ಮ ಸಂವೇದನೆಯಿಂದ ಕನ್ನಡ ಕಥಾ ಸಾಹಿತ್ಯಕ್ಕೆ ಹೊಸ ದಾರಿ ತೋರಿದ ವಿಶಿಷ್ಟ ಲೇಖಕಿ ವೈದೇಹಿಯವರು. ಪ್ರಚಾರ ಬಯಸದ ಸರಳ ವ್ಯಕ್ತಿತ್ವದ ವೈದೆಹಿಯವರ ಕೊಡುಗೆ ಪರಿಗಣಿಸದೆ ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸ ಪರಿಪೂರ್ಣವಾಗಲಾರದು. ಕನ್ನಡ ಸಾಹಿತ್ಯದಲ್ಲಿ ಸ್ತ್ರೀವಾದ ಇನ್ನೂ ಕಣ್ಣು ಬಿಡುತ್ತಿರುವ ಸಂದರ್ಭದಲ್ಲೇ ಆ ಧೋರಣೆ ನಿಲುವುಗಳನ್ನು ತಳೆದು ಸಾಹಿತ್ಯ ರಚಿಸಿದ ಕೀರ್ತಿ ವೈದೇಹಿಯವರಿಗೆ ಸಲ್ಲುತ್ತದೆ. ಹಾಗೆಂದು ಅವರು ಉಗ್ರ ಸ್ತ್ರೀವಾದಿ ಆಗಿರಲಿಲ್ಲ. ಸೌಮ್ಯವಾಗಿಯೇ ಸಾಧಿಸಬೇಕಾದ್ದನ್ನು ಸಾಧಿಸಿ ತೋರಿಸಿದ ವಿಶಿಷ್ಟ ಲೇಖಕಿ. ಅವರ ಪ್ರಕಾರ ಸ್ತ್ರೀವಾದ ಎಂದರೆ ಸ್ತ್ರೀಯರಲ್ಲಿ 'ತನ್ನತನದ ಅರಿವು'. ಸಾಮಾಜಿಕ, ರಾಜಕೀಯ, ಆರ್ಥಿಕ, ಔದ್ಯೋಗಿಕವಾಗಿ ಸ್ತ್ರೀ ಸಮಾನತೆ ಪ್ರತಿಪಾದಿಸಿದ ಅವರು ಜೈವಿಕವಾಗಿ ಹೆಣ್ಣು ಪುರುಷನಿಗಿಂತ ವಿಶಿಷ್ಟ. ಪುರುಷನಿಗೆ ಯಾವತ್ತೂ ದಕ್ಕದ ತಾಯ್ತನದಂತಹ ವಿಶಿಷ್ಟ ಅನುಭವಗಳು ಸ್ತ್ರೀಯರಿಗೆ ಮಾತ್ರ ದಕ್ಕುತ್ತವೆ. ಹೆಣ್ಣಾಗಿ ನಾವು ನಮ್ಮ ವಿಶಿಷ್ಟತೆಯನ್ನು ಭಿನ್ನತೆಯನ್ನು ಒಪ್ಪಿಕೊಳ್ಳೋಣ ನಾವು ನಾವಾಗೇ ಇರೋಣ ಅದನ್ನು ಬಿಟ್ಟು ಅವರಂತೆ ನಾವಾಗಬೇಕು ಎಂದು ಅವರನ್ನು ಅನುಕರಿಸುವುದಲ್ಲ ಎಂದು ನಂಬಿದ್ದವರು. ಅದರಂತೆ ಸಾಹಿತ್ಯ ರಚಿಸಿದವರೂ ಕೂಡ. ಈ ಕಾರಣಕ್ಕಾಗಿಯೇ ಅವರು ಇತರ ಲೇಖಕಿಯರಿಗಿಂತ ಭಿನ್ನರಾಗಿ ಕಾಣುತ್ತಾರೆ.

ವೈದೇಹಿಯವರ ಬರಹಗಳಲ್ಲಿ ಸ್ತ್ರೀ ಸಂವೇದನೆ ಗಾಢವಾಗಿದೆ. ತಮ್ಮ ಸಾಹಿತ್ಯದಲ್ಲಿ ಸ್ತ್ರೀಯರ ವಿವಿಧ ಅವಸ್ಥೆಗಳ, ವಿವಿಧ ಭಾವಸ್ಥಿತಿಗಳ ಚಿತ್ರಣ ಮಾಡಿರುವ ವೈದೇಹಿಯವರು ಎಲ್ಲ ವಯೋಮಾನದ ಸ್ತ್ರೀಯರ ಮನೋಲೋಕದ ತಲ್ಲಣಗಳು, ಸಂಘರ್ಷಗಳು, ಅವರ ಮನಸ್ಸಿನ ಸೂಕ್ಷ್ಮತೆ, ಅತಂತ್ರತೆ, ಅಸಹಾಯಕತೆ, ಸ್ತ್ರೀಯರ ಸಮಸ್ಯೆಗಳನ್ನಷ್ಟೇ ಚಿತ್ರಿಸುವ ಮೂಲಕ ಸ್ತ್ರೀಯರ ಮುಖವಾಣಿಯಂತೆ ಕಾಣುತ್ತಾರೆ. ಕೇವಲ ಸ್ತ್ರೀಯರ ಸಮಸ್ಯೆಗಳನ್ನಷ್ಟೇ ಚಿತ್ರಿಸಿ ಸುಮ್ಮನಾಗದೆ ತಮ್ಮ ಮೇಲಿನ ದೌರ್ಜನ್ಯಕ್ಕೆ ಸ್ತ್ರೀಯರ ಪ್ರತಿಕ್ರಿಯೆಯನ್ನು ಚಿತ್ರಿಸಿರುವುದು ಅವರ ವಿಶೇಷತೆ. ವೈದೇಹಿಯವರ ಹೆಣ್ಣು ಮುಗ್ಧ, ಸರಳ ವ್ಯಕ್ತಿತ್ವದ ಹೆಣ್ಣಾದರೂ ತನ್ನ ಮೇಲಿನ ದೌರ್ಜನ್ಯವನ್ನು ಸಹಿಸಿಕೊಳ್ಳದೆ ತನ್ನದೇ ಆದ ರೀತಿಯಲ್ಲಿ ಪ್ರತಿಭಟಿಸುವುದನ್ನು ಕಾಣಬಹುದು. ಸ್ತ್ರೀ ಪ್ರಪಂಚವನ್ನು ಇಷ್ಟು ವ್ಯಾಪಕವಾಗಿ ತೆರೆದಿಟ್ಟ ಲೇಖಕಿ ಕನ್ನಡ ಸಾಹಿತ್ಯದಲ್ಲಿ ಬೇರೆ ಯಾರೂ ಇಲ್ಲ ಎಂದೇ ತೋರುತ್ತದೆ. ಹೆಣ್ಣಿನ ಹೊರತಾಗಿ ಅವರ ಯಾವ ಕಥೆಯೂ ಇಲ್ಲವೇನೋ ಎಂಬಷ್ಟು ಹೆಣ್ಣು ಅವರ ಕಥೆಗಳಲ್ಲಿ ಬೆರೆತು ಹೋಗಿದ್ದಾಳೆ. ಅವರ ಬಹುತೇಕ ಕಥೆಗಳ ನಿರೂಪಣೆ ಸ್ತ್ರೀಯರದ್ದೇ ಆಗಿರುವುದು, ಅದರಲ್ಲೂ

ಕಥೆಯ ನಾಯಕಿಯ ಎಳೆಯ ವಯಸ್ಸಿನ ಗೆಳತಿಯರು ಬೆಳೆದು ದೊಡ್ಡವರಾದ ಮೇಲೆ ತನ್ನ ನೆನಪಿನ ಬುತ್ತಿಯನ್ನು ಬಿಚ್ಚಿ ನಾಯಕಿಯ ಕಥೆ ಹೇಳುವುದು ವಿಶೇಷ. 'ಅಮ್ಮಚ್ಚಿಯೆಂಬ ನೆನಪು', 'ವಾಣಿಮಾಯಿ'. 'ಭೂತ' ಇತ್ಯಾದಿ ಕಥೆಗಳಲ್ಲಿ ಇದನ್ನು ಕಾಣಬಹುದು. ಪುರುಷಪ್ರಧಾನ ಸಮಾಜದಲ್ಲಿ ಹೆಣ್ಣಿನ ಮೇಲೆ ನಡೆಯುತ್ತಿರುವ ದೌರ್ಜನ್ಯವನ್ನು ತಮ್ಮ ಕಥೆಗಳಲ್ಲಿ ಬಿಂಬಿಸುವ ವೈದೇಹಿಯವರು ಹೆಣ್ಣಿಗೆ ಹೆಣ್ಣೇ ಶತ್ರು ಎಂಬುದನ್ನು ಮರೆಯದೆ ಹೆಣ್ಣಿನ ದುಸ್ಥಿತಿಗೆ ಹೆಣ್ಣೇ ಕಾರಣವಾಗಿರುವುದನ್ನು ಹಾಗೂ ತಮ್ಮ ಅಧೀನತ್ವವನ್ನು ಸ್ತ್ರೀಯರೇ ಒಪ್ಪಿಕೊಂಡಿರುವನ್ನು ಹೇಳಲು ಮರೆಯುವುದಿಲ್ಲ. ಆದರೆ ಇದರ ಹಿಂದೆ ಪುರುಷ ಪ್ರಧಾನ ವ್ಯವಸ್ಥೆ ಪ್ರೇರಿತ ಮನಸ್ಸು ಕೆಲಸಮಾಡಿರುವುದನ್ನು ಅವರು ನೇರವಾಗಿ ಹೇಳುತ್ತಾರೆ. ವೈದೇಹಿಯವರು ಬದುಕನ್ನು ಸ್ತ್ರೀಯರ ದೃಷ್ಟಿಕೋನದಿಂದಲೇ ನೋಡಿದರೂ ಪುರುಷ ವಿರೋಧಿ ಧೋರಣೆ ಅವರದಲ್ಲ. ಹೆಣ್ಣು ಗಂಡು ಅನಾಗರೀಕ ಚಕಮಕಿಗಳಿಲ್ಲದೆ ಸೌಹಾರ್ಧಯುತವಾಗಿ ನಡೆಯುವ ವಾಸ್ತವಪ್ರಜ್ಞೆಯನ್ನು ಹೊಂದಿರಬೇಕು ಎಂಬುದು ಅವರ ನಿಲುವು.

ಸ್ತ್ರೀ ಚಿತ್ರಣದ ಜೊತೆಗೆ ಸಂಪ್ರದಾಯದ ನವಿರಾದ ವಿಡಂಬನೆ ಮಾಡಿರುವ ವೈದೇಹಿಯವರು ಲಿಂಗ ಅಸಮಾನತೆ, ಜಾತಿ ಅಸಮಾನತೆ ಮತ್ತು ವರ್ಗ ಅಸಮಾನತೆಗಳನ್ನು ಬಹಳ ಸೂಕ್ಷ್ಮವಾಗಿ ವಿಶ್ಲೇಷಿಸಿದ್ದಾರೆ. ಪುರುಷ ಮತ್ತು ಸ್ತ್ರೀಯರ ನಡುವಿನ ಅಸಮಾನತೆಯ ಜೊತೆಗೆ ಸ್ತ್ರೀ ಪ್ರಪಂಚದೊಳಗೇ ಇರುವ ಅಸಮಾನತೆಯನ್ನೂ ತಮ್ಮ ಕಥೆಗಳಲ್ಲಿ ಪ್ರಸ್ತಾಪಿಸಿದ್ದಾರೆ. ಅವರ ಕಥೆಗಳು ಒಂದು ಪ್ರದೇಶಕ್ಕೆ, ಒಂದು ಸಂಸ್ಕೃತಿಗೆ ಸೀಮಿತವಾದಂತೆ ಕಂಡರೂ ಅದನ್ನು ಮೀರಿದ ಪರಿಣಾಮವನ್ನು ಬೀರಿರುವುದರಲ್ಲಿ ಯಾವುದೇ ಸಂಶಯವಿಲ್ಲ. ಪಾತ್ರಗಳಿಗೆ ತಕ್ಕಂತೆ ಭಾಷೆಯನ್ನು ದುಡಿಸಿಕೊಳ್ಳುವುದರಲ್ಲಿ ವೈದೇಹಿಯವರು ಸಿದ್ಧಹಸ್ತರಾಗಿರುವುದೂ ಅವರ ಕಥೆಗಳ ಯಶಸ್ಸಿಗೆ ಒಂದು ಪ್ರಮುಖ ಕಾರಣವಗಿರುವುದನ್ನು ಕಾಣಬಹುದು. ಈ ಎಲ್ಲಾ ವಿಶೇಷತೆಗಳು ವೈದೇಹಿಯವರನ್ನು ಕನ್ನಡ ಸಾಹಿತ್ಯ ಲೋಕದಲ್ಲಿ ಬಹಳ ಎತ್ತರದ ಸ್ಥಾನಕ್ಕೆ ಕೊಂಡೊಯ್ದಿವೆ. ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗೌರವ ಸಂದಿರುವುದೇ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಅವರು ಏರಿರುವ ಎತ್ತರಕ್ಕೆ ಸಾಕ್ಷಿ.

ಗ್ರಂಥಋಣ

1. ಅಲೆಗಳಲ್ಲಿ ಅಂತರಂಗ : ಅಕ್ಷರ ಪ್ರಕಾಶನ (ಸಾಗರ) ಕರ್ನಾಟಕ.
ವೈದೇಹಿ ಅವರ ಕಥೆಗಳು
1979–2008

2. ಟಿ.ಪಿ.ಅಶೋಕ ಆಯ್ಕೆಯ : ನುಡಿಪುಸ್ತಕ
ವೈದೇಹಿ ವಾಚಿಕೆ
ಕಥೆಗಳು/ಪದ್ಯಗಳು/ಪ್ರಬಂಧಗಳು/ಸಂದರ್ಶನ
ನಂ.27, 21ನೇ ಮುಖ್ಯರಸ್ತೆ,
ಟಿ.ಟಿ.ಎ.ಕಾಂಪ್ಲೆಕ್ಸ್ ಎದುರು,
ಬನಶಂಕರಿ ಎರಡನೇ ಹಂತ,
ಬೆಂಗಳೂರು–560070.

3. ಕನ್ನಡ ಸಾಹಿತ್ಯ ಪುನರ್ ಮೌಲೀಕರಣ ಮಾಲೆ : ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಸಾಹಿತ್ಯದಲ್ಲಿ ಸ್ತ್ರೀಸಂವೇದನೆಯ ಸ್ವರೂಪ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು–560002.

4. ಕನ್ನಡ ಸಾಹಿತ್ಯ ಮತ್ತು ಮಹಿಳೆ : ಸಂಪಾದಕರು: ಡಾ॥ಸಬಿಹಾ ಭೂಮಿಗೌಡ
(ವಿಚಾರ ಸಂಕಿರಣ ಲೇಖನಗಳು)
ಡಾ॥ ಮಲ್ಲಿಕಾ ಘಂಟಿ
ಕರ್ನಾಟಕ ಸಾಹಿತ್ಯ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು–02.

5. ಸಾಹಿತ್ಯ ಪಾರಿಭಾಷಿಕ ಮಾಲೆ : ಡಾ॥ ಸಿ.ಎನ್.ರಾಮಚಂದ್ರನ್
ಸಾಹಿತ್ಯ ವಿಮರ್ಶೆ
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು–560002.

6. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಮಹಿಳಾಪರ ಕಾಳಜಿಗಳು : ಸಂಪಾದಕರು: ಡಾ॥ ಎಂ.ಎಸ್.ಶೇಖರ್
ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು –560002

7. ಮಹಿಳೆ ಮತ್ತು ಆಧುನಿಕತೆ : ಸಂಪಾದಕರು : ಗವೀಶ ಹಿರೇಮಠ
ಲೇಖಕಿಯರ ವೇದಿಕೆ
ಸಂಗಮೇಶ್ವರ ಮಹಿಳಾ ಮಂಡಳಿ,
ಗುಲ್ಬರ್ಗ.

8. ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ : ಕರ್ನಾಟಕ ಸಾಹಿತ್ಯ ಅಕಾಡೆಮಿ
ಕನ್ನಡ ಭವನ, ಜೆ.ಸಿ.ರಸ್ತೆ,
ಬೆಂಗಳೂರು –560002

9. ಸ್ತ್ರೀವಾದ : ಬಿ.ಎನ್.ಸುಮಿತ್ರಾಬಾಯಿ
ಕನ್ನಡ ಸಾಹಿತ್ಯ ಅಕಾಡೆಮಿ,
ಕನ್ನಡಭವನ, ಜೆ.ಸಿ.ರಸ್ತೆ,
ಬೆಂಗಳೂರು–560002

10. ಮಹಿಳೆ–ಸಾಹಿತ್ಯ–ಸಮಾಜ : ವಿಜಯಾದಬ್ಬೆ,
ರಚನಾ ಪ್ರಕಾಶನ, ಮೈಸೂರು

11. ಸಂಸ್ಕೃತಿ : ವಿಜಯಾದಬ್ಬೆ
ಗೀತಾಬುಕ್ ಹೌಸ್, ಮೈಸೂರು.

12. ಶಕ್ತಿಯೇ ಜೀವನ : ಸ್ವಾಮಿ ಜಗದಾತ್ಮಾನಂದ
ರಾಮಕೃಷ್ಣ ಆಶ್ರಮ, ಮೈಸೂರು.

13. ಸ್ಪರ್ಧಾ ಚೈತ್ರ ಮಾಸಿಕ – ಜನವರಿ 2010

14. ತರಂಗ ಮಾಸಿಕ – ಜುಲೈ 2010